

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 21, 2011 ಪುಟ 20 ರೂ. 14/-



ದ್ವಾರ್ಕಿಯ ವಿಷ್ಣು ಭಜನೆ



ಇಂಗಿದ ದೇಗುಲ ದಾಹ



ಸಿಲ್ಕ್ ಸ್ಮಿತಾ ಸತ್ತರೂ ಬಿಡದ ಸೆಕ್ಸಿ ಇಮೇಜ್



ಆಧಾರ್ ಅಕ್ರಮಗಳು



ಯಶ್‌ಗೆ ಕುಮಾರಣ್ಣ ತಪರಾಕಿ



ಪಾರ್ಟಿ ಹೆಸರೇ ಜನಶ್ರೀ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ
ಬಡ ಮಧ್ಯಮ ವರ್ಗದ ಮೇಲೆ ಸಗಟು ದಾಳಿ





ಶಿವಸುಂದರ್
ಚಾರ್ವಾಕ


ಇನ್ನು ವರ್ಷ ಒಪ್ಪತ್ತು ಕಳೆದರೆ ಚುನಾವಣೆ ಎದುರಿಸಬೇಕಿರುವುದರಿಂದ ಚಿಲ್ಲರೆ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಸದ್ಯಕ್ಕೆ ಹಿಂತೆಗೆದುಕೊಂಡಿದೆ. ಇತರ ಎಲ್ಲಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ತರಲು ಅನುವು ಮಾಡಿ ಬಡ ಭಾರತೀಯರ ಬದುಕನ್ನು ಮಾರುಕಟ್ಟೆ ಶಕ್ತಿಗಳ ಲಾಭದಾಸಕ್ತಿಗೆ ಬಲಿ ಮಾಡಿದ್ದ ವಿರೋಧ ಪಕ್ಷಗಳು ಚಿಲ್ಲರೆ ಕ್ಷೇತ್ರದಲ್ಲಿ ಮಾತ್ರ ತಾವು ದೊಡ್ಡ ದೇಶಭಕ್ತರೆಂಬಂತೆ ಪೋಸು ಹೊಡೆದು ಹುಯಿಲೆಬ್ಬಿಸಿರುವುದು ಸಹ ಇದೇ ಕಾರಣದಿಂದಲೇ. ಇಲ್ಲದಿದ್ದರೆ ಬಿಜೆಪಿ ಸರ್ಕಾರವೇ ಸಗಟು ಮಾರಾಟ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿದ್ದು ಮತ್ತು ಚಿಲ್ಲರೆ ಮಾರಾಟದಲ್ಲೂ ಫ್ರಾಂಚೈಸಿ ಇತ್ಯಾದಿಗಳ ಮೂಲಕ ಪರೋಕ್ಷವಾಗಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿದ್ದು. ಪ. ಬಂಗಾಳದ ಬುದ್ಧದೇವ ನೇತೃತ್ವದ ಎಡ ಸರ್ಕಾರ ವಾಲ್‌ಮಾರ್ಟ್-ಭಾರತಿ ಗುಂಪಿಗೆ ಚಿಲ್ಲರೆ ಮಾರಾಟಕ್ಕೆ ಎಲ್ಲಾ ಸೌಕರ್ಯಗಳನ್ನು ಮಾಡಿಕೊಟ್ಟು ಕೇಂದ್ರ ಸರ್ಕಾರದ ಅನುಮತಿಗೆ ಕಾಯುತ್ತಿತ್ತು. ಹೀಗಾಗಿ ಸದ್ಯಕ್ಕೆ ಚಿಲ್ಲರೆ ಮಾರಾಟದ ಮೇಲಿನ ವಿದೇಶಿ ಬಂಡವಾಳದ ಕತ್ತಿಯನ್ನು ತಾತ್ಕಾಲಿಕವಾಗಿ ಒರೆಗೆ ಸರಿಸಲಾಗಿದೆ ಅಷ್ಟೆ.

ವಾಸ್ತವವಾಗಿ ಚಿಲ್ಲರೆ ಮಾರಾಟದಲ್ಲಿ ವಿದೇಶಿ ಬಂಡವಾಳವು ಜಾಗತೀಕರಣ-ಉದಾರೀಕರಣದ ಆರ್ಥಿಕ ನೀತಿಯ ಹೆಸರಲ್ಲಿ ವಿಶ್ವದ ಮಾರುಕಟ್ಟೆ ಶಕ್ತಿಗಳು ಭಾರತದ ಲಾಭಕೋರ ಉದ್ಯಮಿಗಳ ಬೆಂಬಲದೊಂದಿಗೆ ಬಡ-ಮಧ್ಯಮ ವರ್ಗದ ಮೇಲೆ ನಡೆಸುತ್ತಿರುವ ಯುದ್ಧದ ಮುಂದುವರೆದ ಭಾಗವೇ ಆಗಿದೆ. ಕೆಳಗಿನ ಕೆಲವು ಅಂಕಿ ಅಂಶಗಳನ್ನು ನೋಡಿದರೆ ಇದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಕಷ್ಟಪಡುವ ಅಗತ್ಯವೇ ಇಲ್ಲವೆಂಬುದು ತಿಳಿಯುತ್ತದೆ.

1. ಈ ದೇಶದಲ್ಲಿ ಚಿಲ್ಲರೆ ಮಾರಾಟದ ಪ್ರಮಾಣ 2 ಲಕ್ಷ ಕೋಟಿ ರೂಪಾಯಿಗಳಷ್ಟು. ಇದರಲ್ಲಿ ಲಾಭದ ದರ ಅಂದಾಜು ಶೇ.20-40ರಷ್ಟು. ಆಯಾ ಉದ್ಯಮಿಗಳ ಥಳಕು ಮಾಡುವ ಸಾಮರ್ಥ್ಯ ಮತ್ತು ಆಯಾ ಗ್ರಾಹಕರ ಮುಠ್ಠಾಳತನದ ಪ್ರಮಾಣವನ್ನು ಆಧರಿಸಿ ಈ ಲಾಭದ ದರ ಏರುಪೇರಾಗುತ್ತದೆ.
2. ಈ ಚಿಲ್ಲರೆ ವಹಿವಾಟು ಮುಂದಿನ 4-5 ವರ್ಷಗಳಲ್ಲಿ 5-10 ಲಕ್ಷ ಕೋಟಿ ರೂ.ಗಳಷ್ಟಾಗಬಹುದೆಂದು ದೇಶೀ ಮತ್ತು ವಿದೇಶೀ ತಜ್ಞ ಸಂಸ್ಥೆಗಳು ಅಂದಾಜು ಮಾಡಿವೆ.
3. ಈ ಚಿಲ್ಲರೆ ಮಾರಾಟದಲ್ಲಿ ಸಂಘಟಿತ ಅಂದರೆ ದೊಡ್ಡ ದೊಡ್ಡ ವ್ಯಾಪಾರ ಸಂಸ್ಥೆಗಳ ಅಂದರೆ ಅಂಬಾನಿ, ಏರ್‌ಟೆಲ್ ಭಾರತಿ, ಸ್ಪೆನ್ಸರ್, ಪಿರಮಿಡ್, ಪ್ಯಾಂಟಲೂನ್, ಬಿರ್ಲಾ ಇನ್ನಿತರ ದೊಡ್ಡ ಬಂಡವಾಳಿಗರ ಪಾಲು ಸದ್ಯಕ್ಕೆ ಕೇವಲ ಶೇ.3-4. ಉಳಿದ ಶೇ.97ರಷ್ಟು ವಹಿವಾಟನ್ನು ದೇಶಾದ್ಯಂತ ಇರುವ 1.3 ಕೋಟಿ ಸಣ್ಣ ಮತ್ತು ಮಧ್ಯಮ ಅಂಗಡಿಗಳ ಕಿರಾಣಿ ಶೆಟ್ಟರು, ಕಾಕಾಗಳು, ಬಣಜಿಗರು, ಭೂಮಿಯಲ್ಲಿ ಆದಾಯ ಕಾಣದೆ, ಕೆಲಸ ಸಿಕ್ಕದೆ ವ್ಯಾಪಾರದಿಂದ ಬದುಕು ಹೊರೆಯಲು ಮುಂದಾಗಿರುವ ಸಣ್ಣ ಪುಟ್ಟ ವ್ಯಾಪಾರಿಗಳದ್ದು.

ಹೀಗಾಗಿ ಈ ಯುದ್ಧ ಸಾರಾಂಶದಲ್ಲಿ ಅಂಬಾನಿ, ಬಿರ್ಲಾ, ಟಾಟಾ ಇನ್ನಿತರ ಬೃಹತ್ ಉದ್ಯಮಿಗಳು ಈ ದೇಶದ 1.5 ಕೋಟಿ ವ್ಯಾಪಾರಿಗಳ ಸಣ್ಣ ಪುಟ್ಟ ವ್ಯಾಪಾರಿಗಳ ಮೇಲೆ ಮತ್ತು ಅವರನ್ನು ಅವಲಂಬಿಸಿರುವ ಬಡ, ಅತಿ ಸಣ್ಣ ಕೋಟ್ಯಂತರ ಗ್ರಾಹಕರ ಮೇಲೆ ನಡೆಸುತ್ತಿರುವ ಯುದ್ಧವಾಗಿದೆ. ಇದರಲ್ಲಿ ಭಾರತೀಯ ಉದ್ಯಮಿಗಳು ತಮ್ಮ ಬೆಂಬಲಕ್ಕೆ ವಾಲ್‌ಮಾರ್ಟ್, ಕೇರ್‌ಫೋರ್, ಮೆಟ್ರೋ ಎಂಬಂಥ ದೈತ್ಯ ವಿದೇಶಿ ಸಂಸ್ಥೆಗಳನ್ನು ಭಾರತೀಯರ ವಿರುದ್ಧ ಯುದ್ಧಕ್ಕೆ ಆಹ್ವಾನಿಸಿವೆ. ಅವರು ತಿಂದುಳಿದ ಲಾಭದ ಎಂಜಲಲ್ಲಿ ಪಾಲು ಸಿಕ್ಕರೂ ಸಾಕು ಎನ್ನುತ್ತಿವೆ.

ಅಸಲು ಈ ವಿದೇಶಿ ಬಂಡವಾಳಿಗರು ವಿದೇಶಿ ಬಂಡವಾಳಕ್ಕೂ ಏಕೆ ಗಂಟು ಬಿದ್ದಿದ್ದಾರೆ? ಅದಕ್ಕೆ ಕಾರಣವಿದೆ. ಇಂದು ಚಿಲ್ಲರೆ ವ್ಯಾಪಾರ ಬರೀ ಚಿಲ್ಲರೆ ವ್ಯಾಪಾರವಾಗಿ ಉಳಿದಿಲ್ಲ. ಇದಕ್ಕೆ ಒಂದು ಉದಾಹರಣೆಯೆಂದರೆ ಬರೀ ಚಿಲ್ಲರೆ ವ್ಯಾಪಾರದಲ್ಲಿರುವ ಅಮೆರಿಕದ ವಾಲ್‌ಮಾರ್ಟ್



ಕಂಪನಿ ಇಂದು ಪ್ರಪಂಚದ 500 ಬೃಹತ್ ಉದ್ಯಮ ಸಂಸ್ಥೆಗಳಲ್ಲಿ ಒಂದಾಗಿದೆ. ಅದರ ವಾರ್ಷಿಕ ವಹಿವಾಟು 50 ಬಿಲಿಯನ್ ಡಾಲರ್‌ಗಳು. ಅಂದರೆ ಎರಡು ಲಕ್ಷದ ಐವತ್ತು ಸಾವಿರ ಕೋಟಿಗಳು! ಅಂದರೆ ಕರ್ನಾಟಕ ಸರ್ಕಾರದ ಐದು ವರ್ಷದ ವಾರ್ಷಿಕ ಬಜೆಟ್ಟಿಗೆ ಸಮ.

ವಾಲ್‌ಮಾರ್ಟ್, ಕೆಲ್ಲೋಗ್ಸ್, ಮ್ಯಾಕ್‌ಡೊನಾಲ್ಡ್ ಕೆಎಫ್‌ಸಿ ತರಹದ ಚಿಲ್ಲರೆ ವ್ಯಾಪಾರದ ಸಂಸ್ಥೆಗಳು ತಮ್ಮ ತಮ್ಮ ದೇಶಗಳಲ್ಲಿ ದೊಡ್ಡದೊಡ್ಡ ಸೂಪರ್ ಮಾರ್ಕೆಟ್‌ಗಳನ್ನು, ಮಾಲ್‌ಗಳ ಚೈನ್‌ಗಳನ್ನು ಸ್ಥಾಪಿಸಿಕೊಂಡು ಬಂದೋಬಸ್ತ್ ವ್ಯಾಪಾರ ನಡೆಸುತ್ತಿದ್ದಾರೆ. ಆದರೆ ಕಳೆದ ಕೆಲವು ವರ್ಷಗಳಿಂದ ಈ ದೇಶಗಳಲ್ಲಿನ ಮಾರುಕಟ್ಟೆ ಸಂಪೂರ್ಣ ಮುಗಿಯುತ್ತಾ ಬಂದಿದೆ. ಅಂದರೆ ಇನ್ನು ಆ ಮಾರುಕಟ್ಟೆಯ ವಿಸ್ತರಣೆ ಕಷ್ಟ ಸಾಧ್ಯ. ಹೀಗಾಗಿಯೇ ಈ ಚಿಲ್ಲರೆ ದೈತ್ಯರು ವಿಶ್ವದ ಇತರೆಡೆಗಳಲ್ಲಿ ಚಿಲ್ಲರೆ ವ್ಯಾಪಾರದ ಹುಲ್ಲುಗಾವಲನ್ನು ಅರಸುತ್ತಿವೆ.


ಆಳುವ ವರ್ಗಗಳನ್ನು ಹೊಂದಿರುವ ಭಾರತವೆಂದರೆ ಅವರಿಗೆ ಅಚ್ಚುಮೆಚ್ಚು. ಮೆಟ್ರೋದಂಥ ದೈತ್ಯ ವಿಶ್ವದ ಎರಡನೇ ವ್ಯಾಪಾರಿ ಸಂಸ್ಥೆ ಏಷಿಯಾದಲ್ಲಿ ತನ್ನ ವ್ಯಾಪಾರ ವಿಸ್ತರಣೆ ಮಾಡುವಾಗ ಆಯ್ಕೆ ಮಾಡಿಕೊಂಡ ದೇಶವೆಂದರೆ ಭಾರತ ಹಾಗೂ ದೂರದ ಕಿರ್ಗಿಸ್ತಾನ. ಇದಕ್ಕೂ ಒಂದು ಕಾರಣವಿದೆ. 2010ರ ಒಂದು ಅಧ್ಯಯನದ ಪ್ರಕಾರ ಭಾರತ ನೂರಿಪ್ಪತ್ತು ಕೋಟಿ ಜನ ವಾಸ ಮಾಡುವ ದೇಶವಾಗಿದ್ದು ಇಲ್ಲಿ ಎಂಟು ಕೋಟಿಯಷ್ಟು ಮಧ್ಯಮ ವರ್ಗವಿದೆ. ಒಂದು ಅಂದಾಜಿನ ಪ್ರಕಾರ ಈ ವರ್ಗಕ್ಕೆ ವಾರ್ಷಿಕ ಮೂರು ಸಾವಿರ ಡಾಲರ್ ಆದಾಯವಿದೆ. ಇದು ಇನ್ನೂರ ಐವತ್ತು ಬಿಲಿಯನ್ ಡಾಲರ್‌ಗಳಾಗುತ್ತವೆ. ಅಂದರೆ ಹನ್ನೆರಡು ಲಕ್ಷದ ಐವತ್ತು ಸಾವಿರ ಕೋಟಿಗಳು. ಅಂದರೆ ಭಾರತ ದೇಶದ ಒಂದು ವರ್ಷದ ಬಜೆಟ್ಟಿಗೆ ಸಮ. ಈ ಪ್ರಮಾಣದ ವ್ಯಾಪಾರವಿದ್ದರೂ ಅದರಲ್ಲಿ ಶೇಕಡ ತೊಂಬತ್ತೆಂಟರಷ್ಟು ಚಿಕ್ಕಪುಟ್ಟ ಅಸಂಘಟಿತ ಆರ್ಥಿಕತೆ ಎನ್ನಬಹುದಾದದ್ದೇ. ಶೇಕಡ ಎರಡು ಮಾತ್ರ ಕಂಪನಿ ಮಳಿಗೆಗಳು.

ಈವರೆಗೆ ಇದ್ದ ಸರ್ಕಾರದ ನೀತಿಗಳು ಈ ಬಗೆಯ ವ್ಯಾಪಾರ ಉದ್ಯಮಕ್ಕೆ ಪೂರಕವಾಗಿದ್ದವು. ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಬೀದಿ ಬದಿ ವ್ಯಾಪಾರಿಗಳ ಮೇಲೆ ಹಾಗೂ ಸಣ್ಣಪುಟ್ಟ ವ್ಯಾಪಾರಿಗಳ ಮೇಲೆ ಗದಾ ಪ್ರಹಾರ ಮಾಡುವಂಥ ಕಾನೂನುಗಳು ಬರುತ್ತಿರುವುದು ವಿದೇಶಿ ವ್ಯಾಪಾರಿ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ಹೊರತು ಬೇರೇನೂ ಅಲ್ಲ. ಆದ್ದರಿಂದಲೇ ಎಲ್ಲಾ ಸಿಟಿಗಳಲ್ಲೂ ಬೀದಿಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡುತ್ತಿರುವುದು ಇದೇ ಕಾರಣಕ್ಕೆ. ವ್ಯಾಟ್-ಪಾಟ್ ಅಂತ ಸಣ್ಣ ಪುಟ್ಟ ವ್ಯಾಪಾರಿಗಳ ಪ್ರಾಣ ಹಿಂಡುತ್ತಿರುವುದೂ ಇದೇ ಕಾರಣಕ್ಕೆ.

ಇದನ್ನು ಗಮನದಲ್ಲಿಟ್ಟುಕೊಂಡೇ ವಿಶ್ವದ ಬೃಹತ್ ವ್ಯಾಪಾರಿ ಉದ್ಯಮಿಗಳು ಭಾರತಕ್ಕೆ ದಾಳಿಯಿಡುತ್ತಿದ್ದಾರೆ. ಮೆಟ್ರೊ, ವಾಲ್‌ಮಾರ್ಟ್, ಕೇರ್‌ಫೋರ್, ಕೆಎಫ್‌ಸಿಯಂಥ ಸಂಸ್ಥೆಗಳು ವರ್ಷಗಳಿಂದ ಸುಲಿಗೆ ಪ್ರಾರಂಭಿಸಿದ್ದರೆ ಡಾಮಿನೊ, ಪೆಪ್ಸಿ, ಕೊಕೊಕೋಲ, ಕಾರ್ಗಿಲ್, ಕೆಲ್ಲೋಗ್ಸ್, ಕೊನಗ್ರ, ಪಿಲ್ಸ್‌ಬರಿ, ಬಾಸ್ಕಿನ್ ರಾಬಿನ್ಸ್, ನೆಸ್ಲೆ ಇನ್ನಿತ್ಯಾದಿ ಬಹುರಾಷ್ಟ್ರೀಯ ಕಂಪನಿಗಳು ಸಾಲುಗಟ್ಟಿ ಕಾಯುತ್ತಿವೆ. ಅವುಗಳಲ್ಲಿ ಕೆಲವು ಈಗಾಗಲೆ ಹಿಂಬಾಗಿಲಿಂದ ಕಾರ್ಯಾಚರಣೆ ಪ್ರಾರಂಭಿಸಿವೆ.

ಇದರಿಂದಾಗಿ ನಮ್ಮ ಮನೆ ಪಕ್ಕದಲ್ಲಿದ್ದ, ನಮಗೆ ಬೇಕಾದಾಗ ಸಾಲ ಕೊಡುತ್ತಿದ್ದ, ತಿಂಗಳ ಸಂಬಳ ಬರದಿದ್ದರೂ ಸ್ವಲ್ಪ ಕಾಯುತ್ತಿದ್ದ ಕಿರಾಣಿ ಶೆಟ್ಟರ ಕತೆಯೇನು? ಹಾಗೆ ನೋಡಿದರೆ ಇದರಿಂದ ಕಿರಾಣಿ ಶೆಟ್ಟರ ಬದುಕು ಮಾತ್ರ ಮೂರಾಬಟ್ಟೆಯಾಗುವುದಿಲ್ಲ, ಬದಲಿಗೆ ಇಡೀ ದೇಶದ ಆರ್ಥಿಕತೆಯೇ ಸಂಕಷ್ಟಕ್ಕೀಡಾಗುತ್ತದೆ.

ಇಂದು ಭಾರತದಲ್ಲಿ ಒಂದೂವರೆ ಕೋಟಿಯಷ್ಟು ಸಣ್ಣ ಮಳಿಗೆಗಳಿವೆ. ಅದರಲ್ಲಿ ಶೇಕಡ 70 ರಷ್ಟು ಭಾಗ ಒಂದೇ ಕುಟುಂಬ ನಡೆಸುತ್ತಿರುವ ಜೀವನಾಧಾರವಾದ ಕೆಲಸವೇ ವಿನಃ ಅವರ ಮಟ್ಟಿಗೆ ಅದು ಲಾಭಕ್ಕಾಗಿ ನಡೆಸುತ್ತಿರುವ ಉದ್ಯಮವಲ್ಲ. ಈಗ ಚಿಲ್ಲರೆ ವ್ಯಾಪಾರದ ಕ್ಷೇತ್ರಕ್ಕೂ ಈ ಸಾಂಸ್ಥಿಕ ವಿದೇಶಿ ಬಂಡವಾಳ ಬಂದರೆ ಈ ಇಡೀ ವರ್ಗ ಬೀದಿಗೆ ಬೀಳುತ್ತದೆ. ಇದು ತತ್‌ಕ್ಷಣ ಕಣ್ಣಿಗೆ ಕಾಣುವ ಪರಿಣಾಮ. ಆದರೆ ದೂರಗಾಮಿ ಪರಿಣಾಮ ನಮ್ಮ ಇಡೀ ದೇಶದ ಅರ್ಥ ವ್ಯವಸ್ಥೆಯನ್ನೇ ಹಾಳುಗೆಡುವಂತದ್ದಾಗಿದೆ. ಮೊದಲನೆಯದಾಗಿ ಲಾಭಕ್ಕಾಗಿ ಉದ್ಯಮ ನಡೆಸುವ ಈ ಬಹುರಾಷ್ಟ್ರೀಯ ಕಂಪನಿಗಳು ಈ ದೇಶದ ಜನರ ಅಗತ್ಯವನ್ನು ಪೂರೈಸುವುದಕ್ಕಿಂತ ತನ್ನಲ್ಲಿರುವ ಸರಕುಗಳಿಗೆ ಕೃತಕ ಬೇಡಿಕೆ ಸೃಷ್ಟಿಸುವುದನ್ನೇ ಮಾಡುತ್ತವೆ. ಇದು ಸಂಪನ್ನ ಜನರ ಆಹಾರ ಅಭ್ಯಾಸಗಳನ್ನೇ ಬದಲಾಯಿಸಿಬಿಡುತ್ತದೆ. ಅವರನ್ನು ತನ್ನ ಗ್ರಾಹಕರನ್ನಾಗಿಯೂ ಹಾಗೂ ತನ್ನ ವಕಾಲತ್ತು ವಹಿಸುವವರನ್ನಾಗಿಯೂ ಪರಿವರ್ತಿಸಿ ಕುರುಡರನ್ನಾಗಿಸುತ್ತದೆ. ಎರಡನೆಯದಾಗಿ ಸ್ಥಳೀಯ ಜನರ ಅಗತ್ಯ ನಗಣ್ಯವಾಗಿ ಮಾಲ್‌ಗಳ ಹಾಗೂ ಸೂಪರ್



ಮಾರ್ಕೆಟ್‌ಗಳಲ್ಲಿ ಖರೀದಿಸುವಂತವರನ್ನು ಗಮನದಲ್ಲಿ[...] ಕೊಂಡೇ ಕಾನೂನುಗಳು ರಚಿತವಾಗುತ್ತದೆ. ದೇಶದ ಅ[...] ಸೌಕರ್ಯಕ್ಕಾಗಿ ಇರುವ ಬಜೆಟ್ ಇಂತಹ ಎಲ್ಲಾ ಗ್ರಾಹ[...]ಗಾಗಿ ಹಾಗೂ ಅಂತಹ ವಾಣಿಜ್ಯ ಸಂಸ್ಥೆಗಳಿಗಾಗಿಯೇ [...]ಯೋಗವಾಗುತ್ತದೆ. ಈಗಾಗಲೇ ಟೂರಿಸಂ ಬೆಳೆಯ[...] ಮಾಲ್‌ಗಳು ಅಗತ್ಯ ಎನ್ನುವ ಪ್ರತಿಪಾದನೆ ಸರ್ಕಾರದ್ದಾಗಿ[...] ಅಲ್ಲಿಯೂ ಸ್ಥಳೀಯ ವ್ಯಾಪಾರಿಗಳ ಬದುಕು ಬೀದಿ ಪಾಲಾಗಲಿ[...]

ಚಿಲ್ಲರೆ ಕ್ಷೇತ್ರವು ಕೃಷಿಯನ್ನು ಬಿಟ್ಟರೆ ಅತಿ ಹೆ[...] ಉದ್ಯೋಗವನ್ನು ನೀಡುವ ಕ್ಷೇತ್ರವಾಗಿದೆ. ಈಗಾಗಲೇ ನೋಡಿದ[...] ಈ ದೇಶದಲ್ಲಿ 1.5 ಕೋಟಿ ಮಳಿಗೆಗಳಿವೆ ಎಂದರೆ ಅದ[...] ತಲಾ ಇಬ್ಬರು ಕೆಲಸಗಾರರು ಅಂದುಕೊಂಡರೂ ಮೂ[...] ಕೋಟಿ ಉದ್ಯೋಗ! ಈ ಅಂಗಡಿಗಳ ಪಕ್ಕದಲ್ಲೇ ದೊ[...] ಮಳಿಗೆಗಳು ತಲೆ ಎತ್ತಿದರೆ ಮತ್ತು ಲಾಭದ ದುರಾ[...] ಪ್ರಾರಂಭದಲ್ಲಿ ಅಗ್ಗದ ದರದಲ್ಲಿ ಸರಕು ಮಾರುತ್ತಾ[...] ವ್ಯಾಪಾರಿಗಳನ್ನು ಕೊಂದು ಹಾಕಿದರೆ ಆಗ[...] ಪರಿಣಾಮವೇನು? ಸರ್ಕಾರ ಮತ್ತು ಕಂಪನಿಗಳು ಯಥಾ ಪ್ರ[...] ಈ ದೊಡ್ಡ ಸಂಸ್ಥೆಗಳು ಸೃಷ್ಟಿಸಬಹುದಾದ 10-20 ಲಕ್ಷ[...] ಉದ್ಯೋಗದ ಬಗ್ಗೆ ಮಾತನಾಡುತ್ತವೆಯೇ ವಿನಃ ಕಳೆ[...] ಹೋಗಲಿರುವ ಕೋಟ್ಯಂತರ ಉದ್ಯೋಗಗಳ ಬಗ್ಗೆ ಅಲ[...]

ಅಷ್ಟು ಮಾತ್ರವಲ್ಲ, ಚಿಲ್ಲರೆ ವ್ಯಾಪಾರಕ್ಕೆ ಧುವ[...] ಬೇಕೆಂದು ಯತ್ನಿಸುತ್ತಿರುವ ಬಿರ್ಲಾಗಳು ಮ[...] ಅಂಬಾನಿಗಳು ತಮಗೆ ನಗರಗಳಲ್ಲಿ ಕನಿಷ್ಠ ಶೆ.15 ರ[...] ಜಾಗವನ್ನು ವಾಣಿಜ್ಯ ವ್ಯವಹಾರಕ್ಕಾಗಿ ಹೆಚ್ಚುವರಿ ತೆ[...] ಮಾಡಿಸಿ ಕೊಡಬೇಕೆಂದು ಆಗ್ರಹಿಸಿವೆ. ಅದ[...] ಒಪ್ಪಿಕೊಂಡು ಈಗಾಗಲೇ ಕೇಂದ್ರ ಸರ್ಕಾರ ಎಲ್ಲಾ ರಾ[...] ಸರ್ಕಾರಗಳಿಗೆ ಈ ನಿಟ್ಟಿನಲ್ಲಿ ಒಂದು ನಿರೂಪವನ್ನು ಕೊಟ್ಟಿ[...] ಅಂದರೆ ಕಿರಾಣಿ ಕ್ಷೇತ್ರದಲ್ಲಿ ವಿದೇಶಿ ಮತ್ತು ದೇಶೀ ದೊ[...] ಬಂಡವಾಳ ಬರಲು ಈವರೆಗೆ ಸಣ್ಣ ಪುಟ್ಟ ಜನಗಳಿಗೆ ಅ[...]ಕೂಲವಾಗಿದ್ದ ಕಾನೂನುಗಳನ್ನೇ ಸರ್ಕಾರ ಬದಲಾಯಿಸುತ್ತಿ[...] ದೇಶ ಭಕ್ತ ಪಕ್ಷಗಳು, ಹಿಂದೂಗಳೆಲ್ಲಾ ಒಂದು ಎನ[...] ಪಕ್ಷಗಳು ಎಲ್ಲರೂ ಇದಕ್ಕೆ ಮೌನ ಸಮ್ಮತಿ ನೀಡಾಗಿದೆ.

ಕಿರಾಣಿ ಶೆಟ್ಟರು ಬಾಗಿಲು ಹಾಕಿದರೆ ಬಡ ಕ[...] ಕಾರ್ಮಿಕರ ಮತ್ತು ಬಡ ಮಧ್ಯಮ ವರ್ಗದವರ ತಟ್ಟೆ ಖಾ[...] ಬೀಳುತ್ತದೆ. ಶೆಟ್ಟರ ಅಂಗಡಿಗೂ, ಬಡವನ ತಟ್ಟೆಗೂ ಇರ[...] ಸಾವಯುವ ಸಂಬಂಧ ಬೀದಿಗಳಲ್ಲಿ ಹೋರಾಟವಾಗಿ [...]ವರ್ತನೆ ಆಗದೆ ಶೆಟ್ಟರೂ ಉಳಿಯುವುದಿಲ್ಲ, ಬೊ[...] ಗೌಡರೂ ಉಳಿಯುವುದಿಲ್ಲ.

ನೋ ಕಾಮೆಂಟ್ಸ್

"ಕನ್ನಡ ಚಳವಳಿಗೆ ವಾಸ್ತವಿಕವಾಗಿ ಸೈದ್ಧಾಂತಿಕ ಶಕ್ತಿ ಇಲ್ಲ, ಅದು ಕೇವಲ ಸಮಯ ಸ್ಫೂರ್ತಿಯ ಹೋರಾಟವಾಗುತ್ತಿದೆ. ಜಾಗತೀಕರಣದ ಸಂದರ್ಭದಲ್ಲಿ ಇಡೀ ಚಳವಳಿಯ ಮಾದರಿ ಬದಲಾಗಬೇಕಿದೆ. ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ನೀತಿಯ ಮೇಲೆ ಚಳವಳಿಯು ರೂಪುಗೊಂಡು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹೋರಾಟ ನಡೆಸಬೇಕಿದೆ. ಕನ್ನಡ ಹೋರಾಟ ಕೇವಲ ಅಭಿಮಾನದ ಹೋರಾಟವಲ್ಲ, ಅನ್ನದ ಹೋರಾಟವೂ ಆಗಬೇಕಿದೆ."

- ಬರಗೂರು ರಾಮಚಂದ್ರಪ್ಪ

"ಸಂಕಷ್ಟದ ಕಾಲದಲ್ಲಿ ನಮ್ಮನ್ನು ಬಳಸಿಕೊಂಡ ಬಿಜೆಪಿ ನಾಯಕರು ನಂತರ ನಮ್ಮನ್ನು ಕಡೆಗಣಿಸಿದರು. ರಾಜ್ಯದಲ್ಲಿ ಬಿಜೆಪಿಯನ್ನು ತರಲು ನಾವು ಪ್ರಮುಖ ಪಾತ್ರವನ್ನು ವಹಿಸಿದ್ದೆವು. ಒಂದು ಹಂತದಲ್ಲಿ ಬಿಜೆಪಿ ನೀರಿನಲ್ಲಿ ಮುಳುಗುತ್ತಿದ್ದ ತೆಪ್ಪವಾಗಿತ್ತು, ಆಗ ಬಿಜೆಪಿಗೆ ಮುಖಂಡರು ನೀವೇ ನಮ್ಮ ದೇವರು ಅಂತ ನಮ್ಮ ಬಳಿ ಬಂದಿದ್ದರು. ದಡ ಸೇರಿದ ಮೇಲೆ ಮರೆತರು. ಅವರನ್ನು ನಾನು ಮಾತ್ರವಲ್ಲ, ದೇವರೂ ಕ್ಷಮಿಸಲಾರ."


- ಶ್ರೀರಾಮುಲು

ನಂಬಿದ್ರೆನಂಬಿ ಬಿಟ್ರೆಬಿಡಿ

"ಈವರೆಗೆ ಶ್ರೀರಾಮುಲು ಅವರು ನನ್ನನ್ನಾಗಲೀ, ನಾನು ಶ್ರೀರಾಮುಲುರವರನ್ನಾಗಲೀ ಸಂಪರ್ಕಿಸಿಲ್ಲ, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಶಾಸಕ ಶ್ರೀ ರಾಮುಲು ಅವರು ಜೆಡಿಎಸ್ ಸೇರಲು ಮುಂದಾದರೆ ಅವರೊಂದಿಗೆ ಚರ್ಚೆಗೆ ಸಿದ್ಧ"

- ಕುಮಾರಸ್ವಾಮಿ

"ಬಿಜೆಪಿ ತೊರೆದು ಬಳ್ಳಾರಿ ಗ್ರಾಮಾಂತರ ಕ್ಷೇತ್ರದಿಂದ ಪಕ್ಷೇತರ ಶಾಸಕರಾಗಿ ಆಯ್ಕೆಯಾಗಿರುವ ಬಿ.ಶ್ರೀರಾಮುಲು ಅವರನ್ನು ಮತ್ತೆ ಬಿಜೆಪಿಗೆ ಕರೆತರಲು ಪಕ್ಷದ ವರಿಷ್ಠರು ಜವಾಬ್ದಾರಿ ವಹಿಸಿದರೆ ಪ್ರಯತ್ನ ಮಾಡಲು ನಾನು ಸಿದ್ಧ"




- ಕರುಣಾಕರ ರೆಡ್ಡಿ

‘ಚಿಲ್ಲರೆ’ ರಾಜಕಾರಣದಿಂದ ಬೀದಿಗೆ ಬೀಳುವ ಬದುಕುಗಳು



• ಗೌರಿ ಲಂಕೇಶ್
editorlankesh@gmail.com




ಚಿಲ್ಲರೆ ವ್ಯಾಪಾರದಲ್ಲಿ ಶೇ.51ರಷ್ಟು ವಿದೇಶಿ ಬಂಡವಾಳ ಹೂಡಿಕೆಯ ಪ್ರಸ್ತಾವವನ್ನು ನಿನ್ನೆ ಪ್ರಧಾನಮಂತ್ರಿ ಮನಮೋಹನ್ ಸಿಂಗ್ 'ತಾತ್ಕಾಲಿಕವಾಗಿ ಹಿಂದೆ ಪಡೆಯುತ್ತಿದ್ದೇವೆ' ಎಂದಿದ್ದಾರೆ. ಆದರೆ ಅದನ್ನು ಸರ್ಕಾರ ಸಂಪೂರ್ಣವಾಗಿ ಹಿಂದೆ ಪಡೆದಿಲ್ಲವಾದ್ದರಿಂದ ಅದಿನ್ನೂ ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಮೇಲೆ ಮತ್ತು ಲಕ್ಷಾಂತರ ಜನರ ಭವಿಷ್ಯದ ಮೇಲೆ ತೂಗುಗತ್ತಿಯಂತೆ ನೇತಾಡುತ್ತಿದೆ.

ನಮ್ಮ ದೇಶದಲ್ಲಿ ದಿನಕ್ಕೆ 35 ರೂಪಾಯಿ ದುಡಿಯುವವರನ್ನು ಬಡವರೆಂದು ಪರಿಗಣಿಸಲಾಗುವುದಿಲ್ಲ ಎಂದು ಹೇಳಿದ್ದ ಮಾಂಟೆಕ್ ಸಿಂಗ್ ಆಹ್ಲುವಾಲಿಯ ಮತ್ತು ಮನಮೋಹನ್ ಸಿಂಗ್ ತರಹದ 'ಆರ್ಥಿಕ ತಜ್ಞ'ರ ಪ್ರಕಾರ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅನುವು ಮಾಡಿಕೊಟ್ಟರೆ "ಲಕ್ಷಾಂತರ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ, ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಪದಾರ್ಥಗಳು ಲಭ್ಯವಾಗುತ್ತವೆ, ರೈತರು ಬೆಳೆದ ಬೆಳೆಗೆ ಹೆಚ್ಚು ಬೆಲೆ ಸಿಗುತ್ತದೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ವ್ಯವಸ್ಥೆಗಳು ಹೆಚ್ಚಾಗುತ್ತವೆ ಮತ್ತು ಕೃಷಿ ಉತ್ಪನ್ನದಲ್ಲಿ ಪೋಲಾಗುವುದು ಕಡಿಮೆಯಾಗುತ್ತದೆ." ಅಂದರೆ ಸಿಂಗ್-ಆಹ್ಲುವಾಲಿಯಾ ಪ್ರಕಾರ ವಿದೇಶಿ ಚಿಲ್ಲರೆ ವ್ಯಾಪಾರಿ ಕಂಪನಿಗಳು ಭಾರತವನ್ನು ಉದ್ಧಾರ ಮಾಡಲೆಂದೇ, ಭಾರತೀಯರಿಗೆ ನೆರವಾಗಲೆಂದೇ ಇಲ್ಲಿ ಬಂಡವಾಳವನ್ನು ಹೂಡಲು ಆತುರರಾಗಿದ್ದಾರೆ. ಇವರ ಮಾತನ್ನು ನಂಬಿದರೆ ಭಾರತದ ಹೆಚ್ಚು ಪ್ರಜೆಗಳು ದಿನಕ್ಕೆ 35 ರೂಪಾಯಿಗಳನ್ನು ದುಡಿಯುವುದೂ ಕಷ್ಟವಾಗುತ್ತದೆ.

ನಮ್ಮ ಪತ್ರಿಕೆ ಮೊದಲಿನಿಂದಲೂ ಹೇಳುತ್ತಾ ಬಂದಿರುವುದು 'ಮಾರ್ಕೆಟ್ಟಿಗೆ ಮಾನವೀಯತೆಯಾಗಲಿ, ಮನುಷ್ಯತ್ವವಾಗಲಿ ಬೇಕಾಗುವುದಿಲ್ಲ, ಬದಲಾಗಿ ಮಾರ್ಕೆಟ್ಟಿಗೆ ಬೇಕಿರುವುದು, ಬೇಕಾಗುತ್ತಿರುವುದು ಲಾಭ ಮಾತ್ರ' ಎಂಬುದನ್ನು. ಆ ಮಾತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೂ ಅನ್ವಯಿಸುತ್ತದೆ.

ಇವತ್ತು ಭಾರತದಲ್ಲಿ ಚಿಲ್ಲರೆ ವ್ಯಾಪಾರದ ಒಟ್ಟು ಮೊತ್ತವನ್ನು ಎರಡು ಲಕ್ಷ ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ. ಈ ವ್ಯಾಪಾರದಲ್ಲಿ ಸುಮಾರು 4.5 ಕೋಟಿ ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರಲ್ಲದೆ ಇವರೆಲ್ಲರ ಜೀವನೋಪಾಯವು ಇಂತಹ ಚಿಲ್ಲರೆ ವ್ಯಾಪಾರವೇ ಆಗಿದೆ. ದೇಶದಾದ್ಯಂತ ಕಿರಾಣಿ ಅಂಗಡಿ, ...-ರಿಬ್ಬನ್-ಆಟಿಕೆ ಅಂಗಡಿ, ಬೀಡಾ ಸ್ಟಾಲ್, ...ಳ್ಳೇಗಾಡಿ, ಪೆಟ್ಟಿಗೆ ಅಂಗಡಿ, ಪೇಪರ್-ಪೆನ್ ...ಅಂಗಡಿ, ಪಾತ್ರೆ ಅಂಗಡಿ, ತರಕಾರಿ ಅಂಗಡಿ ...ದಿಗಳು ಸುಮಾರು ಒಂದೂವರೆ ಕೋಟಿಯಷ್ಟಿವೆ. ...ಲ್ಲದೆ, ಚಿಲ್ಲರೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ...ಗಳನ್ನು ಸಾಗಿಸುವವರು, ಬುಟ್ಟಿಗಳಲ್ಲಿ ...ರುವವರು, ದಿನಗೂಲಿಗಳು, ಮೂಟೆ ಹೊರುವವರನ್ನು ಲೆಕ್ಕ ಹಾಕಿದರೆ ಇನ್ನೂ ಕೋಟ್ಯಂತರ ಜನ ಈ ವ್ಯಾಪಾರದ ಸುತ್ತ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ಇಷ್ಟು ವಿಸ್ತಾರವಾಗಿ ಹರಡಿಕೊಂಡಿರುವ, ಬಹಳಷ್ಟು ಜನರಿಗೆ ಜೀವನಾಧಾರವಾಗಿರುವ ಈ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಬಂದರೆ ಏನಾಗುತ್ತದೆಂದು ನೋಡೋಣ.

ವಾಲ್‌ಮಾರ್ಟ್ ತರಹದ ದೈತ್ಯ ಚಿಲ್ಲರೆ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದರೆ ಹೊಸ ಉದ್ಯೋಗಗಳು ನಿಜವಾಗಲೂ ಸೃಷ್ಟಿಯಾಗುತ್ತವೆಯೇ? ಇವತ್ತು ವಾಲ್‌ಮಾರ್ಟ್ ಅಮೆರಿಕದಲ್ಲಿ ನಂಬರ್ ಒನ್ ಚಿಲ್ಲರೆ ವ್ಯಾಪಾರಿ ಕಂಪನಿಯಾಗಿದೆ. ಅದರ ವಾರ್ಷಿಕ ವಹಿವಾಟು ಭಾರತದ ಸಮಸ್ತ ಚಿಲ್ಲರೆ ವ್ಯಾಪಾರದಷ್ಟೇ ಆಗಿದೆ. ಆದರೆ ವಾಲ್‌ಮಾರ್ಟ್ ಅಮೆರಿಕದಲ್ಲಿ ಕೇವಲ 21 ಲಕ್ಷ ಜನರಿಗೆ ಉದ್ಯೋಗ ಕೊಟ್ಟಿದೆ. ಈ ಮೊದಲೇ ಹೇಳಿದಂತೆ ಈಗ ಭಾರತದ ಚಿಲ್ಲರೆ ವ್ಯಾಪಾರದಲ್ಲಿ ಅದಕ್ಕಿಂತಲೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ವಾಲ್‌ಮಾರ್ಟ್ ಭಾರತಕ್ಕೆ ಕಾಲಿಟ್ಟರೆ ಅದು ಸೃಷ್ಟಿಸುವ ಹೊಸ ಉದ್ಯೋಗಗಳಿಗಿಂತ ಮುಖ್ಯವಾಗಿ ಈಗಾಗಲೇ ಈ ವಲಯದಲ್ಲಿ ಕೆಲಸ ಮಾಡುತ್ತಿರುವ ಜನರನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿಗಳನ್ನಾಗಿಸುತ್ತದೆ.



ಹಾಗೆಯೇ ವಿದೇಶಿ ಬಂಡವಾಳದಿಂದ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಪದಾರ್ಥಗಳು ಲಭ್ಯವಾಗುತ್ತವೆ ಎಂಬುದು ಎಷ್ಟು ಸರಿ? ಇದಕ್ಕೆ ಒಂದು ಉದಾಹರಣೆಯನ್ನು ನೀಡಬಹುದು. 1990ರ ದಶಕದಲ್ಲಿ ಕೊಕಕೋಲಾ ಭಾರತಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಇಲ್ಲಿ ಸ್ಥಳೀಯರ ಮಾಲೀಕತ್ವದಲ್ಲಿ 'ಥಮ್ಸ್ ಅಪ್' ತರಹದ ಕೋಲಾಗಳನ್ನು ಮಾರುತ್ತಿದ್ದ ಕಂಪನಿಗಳಿದ್ದವು. ಆದರೆ 'ಥಮ್ಸ್ ಅಪ್' ಕಂಪನಿಗಿಂತ ಹೆಚ್ಚು ಆರ್ಥಿಕ ಬಲ ಹೊಂದಿದ್ದ ಕೊಕಕೋಲಾ ಇಲ್ಲಿನ ಕೋಲಾಗಳಿಗಿಂತ ಕಡಿಮೆ ದರದಲ್ಲಿ ತನ್ನ ಕೋಲಾಗಳನ್ನು ಮಾರಲಾರಂಭಿಸಿತು. ಆಗ ವಿಧಿ ಇಲ್ಲದೆ ಇಲ್ಲಿನ ಕಂಪನಿಗಳು ಬಾಗಿಲು ಮುಚ್ಚಿದವು. ಹೀಗೆ ಇಡೀ ಮಾರುಕಟ್ಟೆಯನ್ನು ಕೋಕಕೋಲಾ ಆಕ್ರಮಿಸಿಕೊಂಡ ನಂತರ ಕೋಕಕೋಲಾ ತನ್ನ ರೇಟನ್ನು ಏರಿಸಿತು. ಪರಿಣಾಮವಾಗಿ ಇವತ್ತು ಕೋಲಾ ಪ್ರಿಯ ಭಾರತೀಯರು ಹೆಚ್ಚು ಬೆಲೆ ತೆತ್ತು ಆ ವಿಷವನ್ನು ಕುಡಿಯಬೇಕಿದೆ. ಕೋಕಕೋಲಾ ರೀತಿಯೇ ವಾಲ್‌ಮಾರ್ಟ್ ತರಹದ ಕಂಪನಿಗಳು ಆರಂಭದಲ್ಲಿ ಕಡಿಮೆ ದರಕ್ಕೆ ಸರಕನ್ನು ಮಾರಾಟ ಮಾಡಿದರೂ ಆನಂತರ ಅವು ಬೆಲೆಗಳನ್ನು ಏರಿಸುವುದರ ಬಗ್ಗೆ ಯಾವ ಅನುಮಾನವೂ ಬೇಡ. ಅಂದರೆ ವಿದೇಶಿ ಬಂಡವಾಳದಿಂದ ಗ್ರಾಹಕರಿಗೆ ಕಡಿಮೆ ದರದಲ್ಲಿ ಪದಾರ್ಥಗಳು ಸಿಗುತ್ತವೆ ಎಂಬುದು ಒಂದು ಭ್ರಮೆ ಅಷ್ಟೆ.

ಹೋಗಲಿ ವಿದೇಶಿ ಕಂಪನಿಗಳಿಂದ ನಮ್ಮ ನತದೃಷ್ಟ ರೈತರಿಗಾದರೂ ಒಳ್ಳೆಯದಾಗುತ್ತಾ? ಈ ಕಂಪನಿಗಳು ರೈತರು ಬೆಳೆದ ಬೆಳೆಗೆ ಹೆಚ್ಚು ಹಣ ಕೊಡುತ್ತವಾ? ಒಂದು ಅಧ್ಯಯನದ ಪ್ರಕಾರ ಅಂದಾಜು ಹತ್ತು ರೂಪಾಯಿಗೆ ಅಂಗಡಿಯಲ್ಲಿ ಮಾರಾಟವಾದ ಸೇಬಿನ ಬೆಲೆಯಲ್ಲಿ ಅದನ್ನು ಬೆಳೆದ ದಕ್ಷಿಣ ಆಫ್ರಿಕಾದ ರೈತನಿಗೆ ಕೇವಲ ಒಂಭತ್ತು ಪೈಸೆ ಸಿಕ್ಕಿದ್ದರೆ, ಅದನ್ನು ಇಂಗ್ಲೆಂಡಿನಲ್ಲಿ ಮಾರಿದ ಕಂಪನಿಗೆ ಸಿಕ್ಕಿದ್ದು ಐದು ರೂಪಾಯಿ!

ಅಷ್ಟೇ ಅಲ್ಲ, ಈಗಿರುವ ಚಿಲ್ಲರೆ ವ್ಯವಸ್ಥೆಯಲ್ಲಿನ ಅಸಂಘಟಿತ ಮಧ್ಯವರ್ತಿಗಳನ್ನೆಲ್ಲ ದೈತ್ಯ ಕಂಪನಿಗಳು ಮೂಲೆಗುಂಪು ಮಾಡಿದ ನಂತರ ಕಂಪನಿಗಳು ಹೇಳಿದ ಬೆಲೆಗೆ ರೈತ ತನ್ನ ಉತ್ಪಾದನೆಯನ್ನು ಮಾರುವ ಅಸಹಾಯಕ ಸ್ಥಿತಿ ಉದ್ಭವಿಸುತ್ತದೆ. ಈಗಾಗಲೇ ಬಾಗಲಕೋಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂತ್ರಿ ಮುರುಗೇಶ್ ನಿರಾಣಿ ತರಹದ ಸಕ್ಕರೆ ಕಂಪನಿಗಳ ಮಾಲೀಕರು ಕೊಟ್ಟ ರೇಟಿಗೆ ರೈತರು ತಮ್ಮ ಕಬ್ಬನ್ನು ಮಾರುವ ಪರಿಸ್ಥಿತಿ ಇರುವಾಗ ಇನ್ನು ವಿದೇಶಿ ಕಂಪನಿಗಳ ಹಾವಳಿ ಎಂತಹದ್ದಾಗಿರುತ್ತದೆ ಎಂದು ಊಹಿಸಬಹುದು. ಆದ್ದರಿಂದ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳದಿಂದ ರೈತರಿಗೆ ನಯಾಪೈಸೆಯ ಉಪಯೋಗವಿಲ್ಲ.

ವಾಲ್‌ಮಾರ್ಟ್ ತರಹದ ಕಂಪನಿಗಳ ಪರ ಮಾತನಾಡುತ್ತಿರುವವರು ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ವ್ಯವಸ್ಥೆಗಳು ಹೆಚ್ಚಾಗುತ್ತವೆ ಎನ್ನುತ್ತಿದ್ದಾರೆ. ಅಂದರೆ ಅವರ ಪ್ರಕಾರ ವಿದೇಶಿ ಕಂಪನಿಗಳು ಇಲ್ಲಿ ಶೀತಾಗಾರಗಳನ್ನು ಮತ್ತು ಹಗೇವುಗಳನ್ನು ನಿರ್ಮಿಸುತ್ತವೆ. ಇದು ಎಷ್ಟು ಬಾಲಿಶ ವಾದ ಎಂದರೆ ಈಗಾಗಲೇ ಶೀತಾಗಾರಗಳನ್ನು ಮತ್ತು ಹಗೇವುಗಳನ್ನು ನಿರ್ಮಿಸಲು ವಿದೇಶಿ ಕಂಪನಿಗಳಿಗೆ ಅನುಮತಿ ನೀಡಿ ಬಹಳ ವರ್ಷಗಳಾಗಿವೆ. ಆದರೆ ಇಲ್ಲಿಯ ತನಕ ಯಾವೊಬ್ಬ ದೇಶಿ ಅಥವಾ ವಿದೇಶಿ ಹೂಡಿಕೆದಾರ ಒಂದೇಒಂದನ್ನೂ ನಿರ್ಮಿಸಿಲ್ಲ, ಆದ್ದರಿಂದ ಆ ಕಂಪನಿಗಳು ಇಲ್ಲಿಗೆ ಬಂದು ಅಂತಹ ಉಪಯುಕ್ತ ಕಾರ್ಯಗಳಲ್ಲಿ ತೊಡಗುತ್ತವೆ ಎಂದು ಊಹಿಸುವುದೇ ಪೆದ್ದುತನವಾಗುತ್ತದೆ.

ಚಿಲ್ಲರೆ ವ್ಯಾಪಾರವು ನಮ್ಮ ನಿವ್ವಳ ದೇಶೀಯ ಉತ್ಪನ್ನದಲ್ಲಿ ಶೇ. 15ರಷ್ಟು ಆಗಿದ್ದು ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಪ್ರಮುಖ ಸ್ತಂಭವಾಗಿದೆ. ಇಂತಹ ಪ್ರಮುಖ ಕ್ಷೇತ್ರಕ್ಕೆ ವಿದೇಶಿ ಬಂಡವಾಳಿಗರನ್ನು ಬಿಟ್ಟರೆ ನಾವು ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಜುಟ್ಟನ್ನು ಹೊರಗಿನವರಿಗೆ ಕೊಟ್ಟಂತಾಗುತ್ತದೆ.


ನೆನಪಿಡಿ, ಹದಿನೆಂಟನೆ ಶತಮಾನದಲ್ಲಿ ಬ್ರಿಟಿಷರು ಭಾರತಕ್ಕೆ ಕಾಲಿಟ್ಟಿದ್ದು ಕೂಡ ವ್ಯಾಪಾರಿ ಈಸ್ಟ್ ಇಂಡಿಯಾ ಕಂಪನಿಯ ಸೋಗಿನಲ್ಲಿ. ಕ್ರಮೇಣ ಈಸ್ಟ್ ಇಂಡಿಯಾ ಕಂಪನಿಯು ಭಾರತವನ್ನು ಬ್ರಿಟಿಷ್ ಆಡಳಿತದಡಿ ಗುಲಾಮನನ್ನಾಗಿಸಿತ್ತು. ಆದರೆ 'ಈ ಹೋಲಿಕೆ ಸರಿಯಲ್ಲ, ಅವತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಭಾರತದಲ್ಲಿರಲಿಲ್ಲ, ಸ್ವತಂತ್ರ ಮಾಧ್ಯಮಗಳೂ ಇರಲಿಲ್ಲ, ಆದ್ದರಿಂದ ಆಗ ವಸಾಹತುಗಳಿಗೆ ನಮ್ಮ ದೇಶ ಬಲಿಯಾಗಿತ್ತು. ಈಗ ಹಾಗಾಗುವುದಿಲ್ಲ' ಎನ್ನುವವರು ಇದ್ದಾರೆ.

ಆದರೆ ಇವತ್ತು ನಮ್ಮ ಈ 'ಘನ' ಪ್ರಜಾಪ್ರಭುತ್ವದಲ್ಲಿ ಹಣ ಬಲ-ಜಾತಿ ಬಲ-ತೋಳ್ಬಲಗಳೇ ಹೆಚ್ಚು ಪಾತ್ರ ವಹಿಸುತ್ತಿರುವುದು, ಮಲ್ಯ-ಅಂಬಾನಿಗಳಂತಹ ಉದ್ಯಮಿಗಳು ಇವತ್ತು ಸಂಸತ್ತಿನಲ್ಲಿ ಸದಸ್ಯತ್ವವನ್ನು ಖರೀದಿಸುತ್ತಿರುವುದು, ಸಿಂಗ್-ಅಹ್ಲುವಾಲಿಯಾ ತರಹದ ಪ್ರಧಾನಿ-ಆರ್ಥಿಕ ತಜ್ಞರು ವಿಶ್ವಬ್ಯಾಂಕಿನ ಗುಲಾಮರಂತೆ ವರ್ತಿಸುತ್ತಿರುವುದು, ಮಾಧ್ಯಮಗಳೂ ಕಾರ್ಪೊರೇಟೀಕರಣಗೊಂಡಿರುವುದು... ಇವರೆಲ್ಲ ಜೊತೆಗೂಡಿ ಚಿಲ್ಲರೆ ವ್ಯಾಪಾರದಲ್ಲೂ ವಿದೇಶಿ ಬಂಡವಾಳಕ್ಕೆ ಆಗ್ರಹಿಸುತ್ತಿರುವುದು ಏನನ್ನು ಸೂಚಿಸುತ್ತದೆ?

ಭಾರತವನ್ನು ಮತ್ತೊಮ್ಮೆ ಗುಲಾಮಗಿರಿಗೆ ದೂಡುತ್ತಿದ್ದಾವೆ ಎಂಬುದನ್ನಲ್ಲವೇ? ಈ ಕಾರಣಕ್ಕೇ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಕಂಪನಿಗಳಿಗೆ ಪ್ರವೇಶ ಕೊಡಕೂಡದಲ್ಲವೇ?

ಸಮ್ಮೇಳನದಲ್ಲಿ ನಮ್ಮ ಪುಸ್ತಕಗಳು

ಗಂಗಾವತಿಯಲ್ಲಿ ನಡೆಯುತ್ತಿರುವ 78ನೇ ಸಾಹಿತ್ಯ ಸಮ್ಮೇಳನದಲ್ಲಿ ಮಳಿಗೆ 138 ಮತ್ತು 139ರಲ್ಲಿ ಲಂಕೇಶ್ ಮತ್ತು ಗೈಡ್ ಪ್ರಕಾಶನದ ಪುಸ್ತಕಗಳು ರಿಯಾಯಿತಿ ದರದಲ್ಲಿ ದೊರೆಯುತ್ತವೆ. ಆಸಕ್ತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು...



ಆಧಾರ್ ಅಕ್ರಮಗಳು

- ಪ್ರಮುಖ ಆತಂಕವೆಂದರೆ ಆಡಳಿತಾರೂಢ ಸರ್ಕಾರಗಳು ಮತ್ತು ಅವರ ಬೆಂಬಲಿಗರು ತಮ್ಮ ರಾಜಕೀಯ ವಿರೋಧಿಗಳನ್ನು ಅಥವಾ ತಮ್ಮ ವಿರುದ್ಧ ಹೋರಾಟದಲ್ಲಿ ನಿರತರಾಗಿರುವ ಸಂಘ-ಸಂಸ್ಥೆಗಳ ಸದಸ್ಯರನ್ನು ವ್ಯಕ್ತಿಗತವಾಗಿ ಗುರಿಮಾಡಲು ಈ ಯೋಜನೆ ಅವಕಾಶ ಒದಗಿಸುತ್ತದೆ.
- ಅಷ್ಟು ಮಾತ್ರವಲ್ಲದೆ ಭ್ರಷ್ಟ ಅಧಿಕಾರಿಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಕ್ರಿಮಿನಲ್‌ಗಳು ಈ ಮಾಹಿತಿಯನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಗಳು ನಿಚ್ಚಳವಾಗಿವೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹೀಗೊಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳಿ. ಜನರನ್ನು ನಾನಾ ರೀತಿಯಲ್ಲಿ ಯಾಮಾರಿಸಿ ಹಣ ಮಾಡಿರುವ ಮತ್ತು ಹಣಕ್ಕಾಗಿ ನಾನಾ ಅಕ್ರಮಗಳಲ್ಲಿ ತೊಡಗಿರುವಂಥ ವಂಚಕನೊಬ್ಬನನ್ನು ಊಹಿಸಿಕೊಳ್ಳಿ. ಆತ ನಿಮ್ಮಲ್ಲಿಗೆ ಬಂದು ಮನೆಮಂದಿಯ ವಿವರಗಳನ್ನು, ಹೆಂಡತಿ ಮಕ್ಕಳ, ಬಂಧುಗಳ ಬಗ್ಗೆ ವಿವರಗಳನ್ನು, ಹಾಗೇ ನಿಮ್ಮ ಓಡಾಟ ವಹಿವಾಟು ಹಾಗೂ ಬ್ಯಾಂಕ್ ಖಾತೆಯ ವಿವರಗಳನ್ನೆಲ್ಲಾ ಒಂದೊಂದಾಗಿ ಪ್ರಶ್ನಿಸಲು ತೊಡಗುತ್ತಾನೆ ಎಂದಿಟ್ಟುಕೊಳ್ಳಿ. ಆಗ ನಿಮ್ಮ ಮನಸ್ಸಿನಲ್ಲಿ ಸಹಜವಾಗಿ ಆತಂಕ ಮೂಡುತ್ತದೆ ತಾನೇ? ಅಯ್ಯೋ! ಮುಂದೇನು ಗ್ರಹಚಾರ ಕಾದಿದೆಯೋ ಎಂಬ ಭೀತಿ ಶುರುವಾಗುವುದು ಯಾರಿಗಾದರೂ ಸಹಜತಾನೆ?

ಒಂದು ವೇಳೆ ಅಂಥ ವ್ಯಕ್ತಿಗಳಿಂದ ವಶೀಕರಣಕ್ಕೊಳಗಾಗಿ ಸ್ವತಃ ನೀವಾಗಿಯೇ ಮುಗಿಬಿದ್ದು ನಿಮ್ಮ ಎಲ್ಲಾ ವಿವರಗಳನ್ನು ಅವರಿಗೆ ಒಪ್ಪಿಸಿಬಿಟ್ಟರಿ ಎಂದಿಟ್ಟುಕೊಳ್ಳಿ. ಪರಿಸ್ಥಿತಿ ಮತ್ತಷ್ಟು ಆತಂಕಕಾರಿಯಾಗಿರುತ್ತದೆ ಅಲ್ಲವೆ?

ಭಾರತ ಸರ್ಕಾರ ಅಬ್ಬರದ ಪ್ರಚಾರದೊಂದಿಗೆ ಜಾರಿ ಮಾಡಲು ಹೊರಟಿರುವ 'ಆಧಾರ್' ಗುರುತು ಪತ್ರದ ಯೋಜನೆಯ ಅನುಷ್ಠಾನ ಸರಿಯಾಗಿ ಇಂಥದೇ ಸನ್ನಿವೇಶವನ್ನು ಹೋಲುತ್ತದೆ. ಇದು ದೇಶದ ನಾಗರಿಕರ ರಕ್ಷಣೆಗೆ ಆತಂಕವನ್ನುಂಟು ಮಾಡುವುದು ಮಾತ್ರವಲ್ಲದೆ ದೇಶದ ಸಾರ್ವಭೌಮತೆಗೂ ಧಕ್ಕೆಯುಂಟು ಮಾಡುತ್ತದೆ. ಈ ಯೋಜನೆಯಲ್ಲಿ ನಡೆಯುತ್ತಿರುವ ಅಕ್ರಮಗಳು, ಕಾನೂನು ಬಾಹಿರ ಕೃತ್ಯಗಳು ನಮ್ಮನ್ನು ಬೆಚ್ಚಿಬೀಳುವಂತೆ ಮಾಡುತ್ತವೆ.

ನೆನಪಿಸಿಕೊಳ್ಳಿ! ಇಲ್ಲಿಗೆ ಸುಮಾರು ಎರಡೂವರೆ ವರ್ಷಗಳ ಹಿಂದೆ ದೇಶದಾದ್ಯಂತ ಬಹುತೇಕ ಎಲ್ಲಾ ದಿನಪತ್ರಿಕೆಗಳು ಒಂದು ವಿಶೇಷ ಸುದ್ದಿಯನ್ನು ಮುಖಪುಟದಲ್ಲೇ ಪ್ರಕಟಿಸಿದ್ದವು. ಭಾರತದ ಪ್ರಧಾನಮಂತ್ರಿ ಶ್ರೀ ಮನಮೋಹನ ಸಿಂಗ್ ಅವರು 'ಮಹತ್ವಾಕಾಂಕ್ಷೆಯ ಯೋಜನೆ'ಯೊಂದಕ್ಕೆ ಸಾರಥ್ಯ ವಹಿಸಿಕೊಳ್ಳುವಂತೆ ಇನ್‌ಫೋಸಿಸ್‌ನ ಸಿಇಓ ಆಗಿದ್ದ ಶ್ರೀಮಾನ್ ನಂದನ್ ಮನೋಹರ ನಿಲೇಕಣಿಯವರನ್ನು ಆಹ್ವಾನಿಸಿದ್ದರು. ಈ ಆಹ್ವಾನವನ್ನು ಅಂಗೀಕರಿಸಿ ನಂದನ್ ನಿಲೇಕಣಿಯವರು ಸೀದಾ ದೆಹಲಿಗೆ ಪ್ರಯಾಣ ಬೆಳೆಸಿದರು. ಇನ್‌ಫೋಸಿಸ್‌ನಂಥ ಇನ್‌ಫೋಸಿಸ್‌ನ ಸಿಇಓ ನಿಲೇಕಣಿಯವರ ಆಗಮನದಿಂದ ಹರ್ಷಚಿತ್ತರಾದ ಪ್ರಧಾನಿ ಮತ್ತು ಅವರ ಸಚಿವ ಸಂಪುಟ ನಿರ್ಣಯವೊಂದನ್ನು ಕೈಗೊಂಡು ನಿಲೇಕಣಿಯವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಿ ಪುನೀತರಾದರು. ಇಂಥ ಐತಿಹಾಸಿಕ ಘಟನೆಯನ್ನು ಕಂಡು, ಕೇಳಿ ಪುಳಕಿತರಾದ ಪತ್ರಿಕೆಗಳು ಹಾಗೂ ಟಿ.ವಿ.ಮಾಧ್ಯಮಗಳು ಪ್ರಧಾನಿಯವರ ಮುತ್ಸದ್ಧಿತನವನ್ನು ಬಾಯ್ತುಂಬಾ ಹೊಗಳಿದವು. ಹಲವು ಪತ್ರಿಕೆಗಳು ಸಂಪಾದಕೀಯವನ್ನು ಬರೆದವು. ನಿಲೇಕಣಿಯವರು ನಮ್ಮ ದೇಶದ ಸಮಸ್ಯೆಗಳನ್ನು ಬಗೆಹರಿಸಲು ಬಂದ ಸಾಕ್ಷಾತ್ ದೇವದೂತನೇನೋ ಎಂಬಂತೆ ಬಣ್ಣಿಸಿದವು.

ಆದರೆ ದೇವಧೂತನಂತೆ ಪ್ರತ್ಯಕ್ಷವಾಗಿದ್ದ ನಿಲೇಕಣಿಯವರ ನಾಯಕತ್ವದಲ್ಲಿ ಈ ಇಡೀ ಯೋಜನೆ ಹೇಗೆ ಕಾನೂನು ಬಾಹಿರ ಕೃತ್ಯಗಳಲ್ಲಿ ಹಾಗೂ ಅಕ್ರಮಗಳ ಸರಮಾಲೆಯಲ್ಲಿ ತೊಡಗಿದೆ ಎಂಬುದು ಒಂದೊಂದಾಗಿ ನಿಧಾನವಾಗಿ ಬೆಳಕಿಗೆ ಬರುತ್ತಿವೆ. ಆ ನಿರ್ಧಾರ ಎಷ್ಟು ಮೂರ್ಖತನದ್ದಾಗಿತ್ತು ಎಂಬುದು ಇದೀಗ ದೃಢಪಟ್ಟಿದೆ.


ನಾನಾ ಅಕ್ರಮಗಳು, ಕಾನೂನು ಬಾಹಿರ ಕೃತ್ಯಗಳ ಕಂತೆಯಾಗಿರುವ ಈ "ಆಧಾರ್" ಯೋಜನೆಯನ್ನು ರದ್ದುಗೊಳಿಸುವಂತೆ ಕೋರಿ ಬೆಂಗಳೂರು ನಗರದ ನ್ಯಾಯಾಲಯದಲ್ಲಿ ಪ್ರಕರಣವೊಂದು ದಾಖಲಾಗಿದೆ. ಈ ಲೇಖನದಲ್ಲಿ ವಿವರಿಸಲಾಗಿರುವ ಬಹುಪಾಲು ಅಂಶಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿವೆ.

ಈ ಪ್ರಕರಣದ ಫಿರ್ಯಾದುದಾರರಾಗಿರುವ ಮ್ಯಾಥ್ಯೂ ಥಾಮಸ್ ಅವರೊಬ್ಬ ಕ್ಷಿಪಣಿ ವಿಜ್ಞಾನಿ. ದೇಶದ ರಕ್ಷಣಾ ಇಲಾಖೆಯ 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-DRDO' ನಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದವರು. ದೇಶದ ರಕ್ಷಣೆಗೆ ಅವರು ನೀಡಿದ ಸೇವೆಗಾಗಿ ರಾಷ್ಟ್ರಪತಿಯವರಿಂದ ಸನ್ಮಾನಿತರಾದವರು. ಮತ್ತೊಬ್ಬ ಫಿರ್ಯಾದಿ ವಿ.ಕೆ.ಸೋಮಶೇಖರ್. ಕಾನೂನು ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಕಾರ್ಪೋರೇಟ್ ಕಂಪನಿಗಳಲ್ಲಿ ಅಧಿಕಾರಿಯಾಗಿ 30 ವರ್ಷಗಳ ಅನುಭವವಿರುವ ಇವರು ಈಗ 'ಗ್ರಾಹಕ ಶಕ್ತಿ' ಎಂಬ ಸೇವಾ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದಾರೆ.

ಆಧಾರ್ ಯೋಜನೆಯ ಅಕ್ರಮಗಳನ್ನು ಕಂಡ ಫಿರ್ಯಾದುದಾರರು ತಮ್ಮ ವಕೀಲರಾದ ಬಿ.ಟಿ.ವೆಂಕಟೇಶ್, ಟಿ.ಕೆ.ಸತೀಶ್ ಮತ್ತು ಪುರುಷೋತ್ತಮ ಎಂಬುವವರ ಮೂಲಕ ಈ ಯೋಜನೆಯ ಅಧ್ಯಕ್ಷರಾದ ನಂದನ್ ನಿಲೇಕಣಿಯವರನ್ನು ಒಂದನೇ ಪ್ರತಿವಾದಿಯನ್ನಾಗಿ, ಭಾರತ ಸರ್ಕಾರದ ಯೋಜನಾ ಆಯೋಗದ ಅಧ್ಯಕ್ಷರನ್ನು ಎರಡನೇ ಪ್ರತಿವಾದಿಯನ್ನಾಗಿ ಹಾಗೂ ಅದರ ಉಪಾಧ್ಯಕ್ಷರನ್ನು ಮೂರನೇ ಪ್ರತಿವಾದಿಯನ್ನಾಗಿಸಿ ಮೊಕದ್ದಮೆ ಹೂಡಿದ್ದಾರೆ.

ಈಗ ನಾವು ಈ ಯೋಜನೆಯ ಪೂರ್ವಾಪರಗಳನ್ನು ತಿಳಿಯೋಣ.

ನಮ್ಮ ಘನ ಸರ್ಕಾರ ದೇಶದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ಪ್ರಜೆಗೂ ಒಂದು "ಏಕಮಾತ್ರ ಗುರುತು ಸಂಖ್ಯೆ" ನೀಡುವ ಮಹತ್ವದ ಯೋಜನೆಯೊಂದನ್ನು ಹಮ್ಮಿಕೊಂಡಿದೆ. ಪ್ರತಿಯೊಬ್ಬ ವ್ಯಕ್ತಿಗೂ ಒಂದು ನಂಬರು ಕೊಡುವ ಮುಂಚೆ ವ್ಯಕ್ತಿಗೆ ಸಂಬಂಧಿಸಿದ ಎರಡು ರೀತಿಯ ವಿವರಗಳನ್ನು ದಾಖಲಿಸಿಕೊಳ್ಳಲಾಗುತ್ತದೆ. 1.ಬಯೋಮೆಟ್ರಿಕ್ ವಿವರಗಳು. 2.ಡೆಮೊಗ್ರಾಫಿಕ್ ವಿವರಗಳು.



ಈ ಬಯೋಮೆಟ್ರಿಕ್ ಅಥವಾ ಜೈವಿಕ ಗಣಿತದ ವಿಧಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಪ್ರಮುಖ ಜೈವಿಕ ಚಹರೆಗಳನ್ನು ದಾಖಲು ಮಾಡಲಾಗುತ್ತದೆ. ಅಂದರೆ ಪ್ರತಿಯೊಬ್ಬರ ಹತ್ತೂ ಬೆರಳಿನ ಬೆರಳಚ್ಚು, ಕಣ್ಣಿನ ಅಕ್ಷಿಪಟಲದ ಸ್ಕ್ಯಾನಿಂಗ್‌ಮಾಡಿ ಪಡೆದ ಚಿತ್ರ ಹಾಗೂ ಮುಖದ ಭಾವಚಿತ್ರ-ಇವುಗಳನ್ನು ಪಡೆದುಕೊಳ್ಳಲಾಗುತ್ತದೆ. ಈ ಮೇಲಿನ ಚಹರೆಗಳು ಪ್ರತಿ ವ್ಯಕ್ತಿಯಲ್ಲೂ ಬೇರೆಯೇ ಆಗಿದ್ದು, ಈ ಚಹರೆಗಳ ಆಧಾರದಲ್ಲಿ ವ್ಯಕ್ತಿಯ ಗುರುತು ಪತ್ತೆಮಾಡುವುದು ಸುಲಭವೆಂದು ಹೇಳಲಾಗುತ್ತದೆ.

ಡೆಮೊಗ್ರಾಫಿಕ್ ವಿವರ ಎಂದರೆ ಜನಜೀವನದ ಕುರಿತ ಮಾಹಿತಿಗಳು. ಇದರಡಿ ಹೆಸರು, ತಂದೆಯ ಹೆಸರು, ವಯಸ್ಸು, ವಾಸಸ್ಥಳ, ದೂರವಾಣಿ ಸಂಖ್ಯೆ ಇ-ಮೇಲ್ ವಿಳಾಸ, ಬ್ಯಾಂಕ್ ಖಾತೆಯ ವಿವರಗಳು ಇತ್ಯಾದಿ. ಈ ಎರಡೂ ರೀತಿಯ ಮಾಹಿತಿಗಳನ್ನು ಡಿಜಿಟಲ್ ರೂಪದಲ್ಲಿ ಪಡೆದುಕೊಂಡು 12 ಅಂಕಿಗಳುಳ್ಳ ಒಂದು ಗುರುತಿನ ಸಂಖ್ಯೆಯನ್ನು ಪ್ರತಿಯೊಬ್ಬರಿಗೂ ನೀಡಲಾಗುತ್ತದೆ. ಈ ಡಿಜಿಟಲ್ ಮಾಹಿತಿಯನ್ನು ಒಂದು ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆಯಡಿ ನಿರ್ವಹಿಸಲಾಗುತ್ತದೆ ಎಂದು ಘೋಷಿಸಲಾಗಿದೆ.

UID ಎಂದು ಕರೆಯಲಾಗುತ್ತಿದ್ದ ಯೋಜನೆಗೆ ಇತ್ತೀಚೆಗೆ 'ಆಧಾರ್'ಎಂಬ ಬ್ರಾಂಡ್‌ನೇಮ್ ನೀಡಲಾಗಿದೆ. ಈ ಮೂಲಕ ಜನರನ್ನು ಸುಲಭವಾಗಿ ಆಕರ್ಷಿಸುವುದ[u] ಹಾಗೂ ಯೋಜನೆಯನ್ನು ಹೆಚ್ಚು ಜನಪ್ರಿಯಗೊಳಿಸುವುದ[u] ತಮ್ಮ ಉದ್ದೇಶವೆಂದು ಇದರ ವಕ್ತಾರರು ಹೇಳುತ್ತಿದ್ದಾ[ರೆ]. ಆಧಾರ್ ಕಾರ್ಡ್‌ಗಳಿಗಾಗಿ ನೋಂದಾಯಿಸುವ ಹಾಗ[ೂ] ಕಾರ್ಡು ವಿತರಿಸುವ ಪ್ರಕ್ರಿಯೆ ದೇಶದ ಹಲವೆ[ಡೆ] ಪ್ರಾರಂಭವಾಗಿದೆ. ಈ ಬಗ್ಗೆ ಹಲವು ಬಾರಿ ಪತ್ರಿಕೆಗಳಲ್ಲಿ ಬಂ[ದ] ಜಾಹಿರಾತುಗಳನ್ನೂ ನಾವು ಓದಿದ್ದೇವೆ.

ಈಗಾಗಲೇ ದೇಶದಲ್ಲಿ ನಾನಾರೀತಿಯ ಗುರುತು ಪತ್ರಗಳು ಚಾಲ್ತಿಯಲ್ಲಿವೆ. ಮತದಾರ ಗುರುತು ಕಾರ್ಡ್, ಡ್ರೈವಿಂಗ್ ಲೈಸೆನ್[ಸ್], ಪಾನ್‌ಕಾರ್ಡ್, ಪಾಸ್‌ಪೋರ್ಟ್, ರೇಷನ್ ಕಾರ್ಡ್, ಬಿಪಿಎಲ್ ಕಾರ್ಡು ಮುಂತಾದವು. ಇಷ್ಟೆಲ್ಲಾ ಕಾರ್ಡುಗಳಿರುವಾ[ಗ] ಮತ್ತೊಂದರ ಅಗತ್ಯವೇನು ಎಂಬ ಪ್ರಶ್ನೆಗೆ ಸಮರ್ಪಕ ಉತ್ತರವಿಲ್ಲ. ಬದಲಿಗೆ ಈ 'ಆಧಾರ್' ಕಾರ್ಡ್ ಪಡೆಯುವುದು ಎಲ್ಲರಿ[ಗೂ] ಕಡ್ಡಾಯವೇನಲ್ಲ, ಇಷ್ಟವಿಲ್ಲದಿದ್ದವರು ಈ ಕಾರ್ಡ್‌ಗಾ[ಗಿ] ನೋಂದಣಿ ಮಾಡಿಸುವ ಅಗತ್ಯವಿಲ್ಲ ಎನ್ನುತ್ತಾರೆ ವಕ್ತಾರ[ರು]. ಆದರೆ ಅಸಲಿ ಹಿಕಮತ್ತು ಬೇರೆಯೇ ಇದ್ದು ಈ 'ಆಧಾ[ರ್]' ಕಾರ್ಡ್‌ಅನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಡೆ[ದು]ಕೊಳ್ಳಲೇ ಬೇಕಾದ ಸ್ಥಿತಿಯನ್ನು ವಾಮಮಾರ್ಗಗಳ ಮೂ[ಲಕ] ಹೇರಲು ಹೊರಟಿದ್ದಾರೆ. ಪೆಟ್ರೋಲಿಯಂ ಸಚಿವಾಲಯ ಈಗಾಗಲೇ ಜಾಹೀರಾತೊಂದನ್ನು ನೀಡಿದ್ದು ಗ್ಯಾಸ್ ಸಂಪ[ರ್ಕ] ಪಡೆದುಕೊಳ್ಳಲು 'ಆಧಾರ್'ನ್ನು ಕಡ್ಡಾಯಗೊಳಿಸಿದೆ. ಇ[ತರ] ಇಲಾಖೆಗಳೂ ಇದೇ ಜಾಡಿನಲ್ಲಿದ್ದು ಸಾಮಾನ್ಯ ಜನರು ವಿ[ಧಿ]ಯಿಲ್ಲದೆ ಆಧಾರ್ ಪಡೆದುಕೊಳ್ಳಲು ಮುಗಿಬೀಳುತ್ತಿದ್ದಾ[ರೆ].

ಆದರೆ ಈ ಇಡೀ ಯೋಜನೆಗೆ ಯಾವುದೇ ಶಾಸನಬ[ದ್ಧ] ಅಧಿಕಾರವಿಲ್ಲದೆ ಕಾನೂನು ಬಾಹಿರವಾಗಿದೆ ಎಂದ[ರೆ] ಬಹಳಷ್ಟು ಜನ ನಂಬಲಿಕ್ಕಿಲ್ಲ. ಆದರೆ ಅದು ಕಟು ಸತ್ಯ.

ಕೇಂದ್ರ ಸರ್ಕಾರದ ಸಚಿವ ಸಂಪುಟದ ಒಂದು ಕಾ[ರ್ಯ]ಕಾರಿ ನಿರ್ಣಯದಂತೆ ಯೋಜನೆಯ ಅಧ್ಯಕ್ಷರನ್ನು ನಿಯು[ಕ್ತಿ]ಗೊಳಿಸಲಾಗಿದೆ. ಆದರೆ ಇದು ಶಾಸನ ಬದ್ಧತೆಯು[ಳ್ಳ] ಪ್ರಾಧಿಕಾರವಲ್ಲ. ಈ ಉದ್ದೇಶಕ್ಕಾಗಿ ರೂಪಿಸಲಾದ ಮಸೂ[ದೆ]



ಡೂಪ್ಲಿಕೇಟ್ ನಿಲೇಕಣಿ

ಭಾರೀ ಅಬ್ಬರದ ಪ್ರಚಾರದೊಂದಿಗೆ ಪ್ರಾರಂಭವಾದ ಯೋಜನೆಯಲ್ಲಿ ಉನ್ನತ ತಂತ್ರಜ್ಞಾನದ ಸಹಾಯದಿಂದ ಬಹಳ ವಿಶ್ವಾಸಾರ್ಹವಾದ 'ಆಧಾರ್' ಗುರುತುಪತ್ರವನ್ನು ನೀಡಲಾಗುತ್ತದೆ ಎಂದು ಬೊಗಳೆ ಬಿಟ್ಟಿದ್ದ ನಂದನ್ ನಿಲೇಕಣಿಯವರ ಸ್ಥಿತಿ ಹೀಗಾಗಬಾರದಿತ್ತು. ಮೈಸೂರು ಜಿಲ್ಲೆಯಲ್ಲಿ ಆಧಾರ್ ಕಾರ್ಡ್ ವಿತರಣೆ ಪ್ರಕ್ರಿಯೆಯಲ್ಲಿ ಮಧ್ಯವರ್ತಿಗಳ ಹಾವಳಿ ಹಾಗೂ ಭಾರೀ ಭ್ರಷ್ಟಾಚಾರ ಬಯಲಾಗಿದೆ. ಗುಪ್ತ ಕಾರ್ಯಾಚರಣೆ ನಡೆಸಿದ ಟಿವಿ 9 ನ ತಂಡದವರು ಬ್ರೋಕರ್ ಮೂಲಕ ಆಧಾರ್ ಕಚೇರಿಯಲ್ಲಿ ಅರ್ಜಿ ಜೊತೆಗೆ ಕಾಣಿಕೆಯನ್ನು ಸಲ್ಲಿಸಿ ನಂದನ್ ನಿಲೇಕಣಿಯವರ ಭಾವಚಿತ್ರ ಅಂಟಿಸಿದ ಆಧಾರ್ ಕಾರ್ಡ್ ಪಡೆದುಕೊಂಡಿದ್ದಾರೆ. ಅಲ್ಲದೇ ಕಾರ್ಯಾಚರಣೆಯ ಸದಸ್ಯನೊಬ್ಬ ನಿಖಿಲ್ ಚಂದ್ರ ಮತ್ತು ವೀರಭದ್ರಪ್ಪ ಎಂಬ ಬೇರೆಬೇರೆ ಹೆಸರುಗಳಲ್ಲಿ ಒಂದೇ ದಿನ ಎರಡು ಕಾರ್ಡುಗಳನ್ನು ಪಡೆದುಕೊಂಡಿದ್ದಾನೆ. ಆದರೆ ನಿಯಮಾವಳಿ ಪ್ರಕಾರ ಅರ್ಜಿ ಸಲ್ಲಿಸಿ ತಿಂಗಳುಗಟ್ಟಳೆ ಕಾದರೂ ತಮಗೆ ಯಾವ ಕಾರ್ಡೂ ಸಿಕ್ಕಿಲ್ಲವೆಂದು ಅಮಾಯಕ ಜನತೆ ತಮ್ಮ ಗೋಳು ತೋಡಿಕೊಳ್ಳುತ್ತಿದ್ದಾರೆ. ಹೀಗೇ ಆರಂಭದಲ್ಲೇ ಮುಗ್ಗರಿಸಿ ಮಕಾಡೆ ಬಿದ್ದಿರುವ ನಂದನ್ ನಿಲೇಕಣಿಯವರು ತಮ್ಮ ಡೂಪ್ಲಿಕೇಟ್ ಕಾರ್ಡನ್ನು ಪಡೆದುಕೊಳ್ಳಲು ಯಾವಾಗ ಬರುತ್ತಾರೋ ಗೊತ್ತಿಲ್ಲ.

ಇಂಗ್ಲೆಂಡ್, ಅಮೆರಿಕಗಳಿಗೆ ಪ್ರಗತಿ ಬೇಡವೇ?

'ಆಧಾರ್' ತರಹದ ಯೋಜನೆಯೊಂದರ ಪ್ರಸ್ತಾಪ ಕೆಲ ವರ್ಷಗಳ ಹಿಂದ[ೆ] ಬ್ರಿಟಿಷ್ ಪಾರ್ಲಿಮೆಂಟ್‌ನ ಮುಂದೆ ಚರ್ಚೆಗೆ ಬಂದು ಅದನ್ನು ಸಾರಾಸಗಟಾಗಿ ತಿರಸ್ಕರಿಸಲಾಗಿತ್ತು. ಅಮೆರಿಕದಲ್ಲೂ ಸಹ ಗುರುತಿನ ಸಂಖ್ಯೆಯನ್ನು ನೀಡುವ ಇಂಥ ಯೋಜನೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಹಲವಾರು ರಾಜ್ಯಗಳು ಹಾಗೂ ಸೆನೆಟರುಗಳು ವಿರೋಧಿಸಿದ್ದರಿಂದ ಅದನ್ನು ರದ್ದುಪಡಿಸಲಾಗಿದೆ. ಇಂಥ ರದ್ಧತಿಗ[ೆ] ಕಾರಣವೆಂದರೆ ಈ ಕ್ರಮಗಳು ದೇಶದ ನಾಗರಿಕರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್[ಕೆ] ತರುತ್ತದೆ ಹಾಗೂ ಸರ್ಕಾರಗಳನ್ನು ಪ್ರಜೆಗಳ 'ಸೇವಕರು' ಎಂಬುದಕ್ಕಿಂತ ಪ್ರಜೆಗಳ 'ಪ್ರಭುಗಳು' ಎಂಬ ಮೌಲ್ಯಕ್ಕೆ ದಾರಿ ಮಾಡುತ್ತದೆ. ಆ ಮೂಲಕ ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಈ ಯೋಜನೆ ತದ್ವಿರುದ್ಧವಾಗಿದೆ ಎಂಬುದು ಅ[ವರ] ವಿರೋಧಕ್ಕೆ ಪ್ರಮುಖ ಕಾರಣವಾಗಿತ್ತು.

ಪ್ರಜಾತಂತ್ರ ಅಳವಡಿಸಿಕೊಂಡಿರುವ ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರಗಳಿಂದ ತಿರಸ್ಕೃತಗೊಂಡ ಇಂಥ ಜನವಿರೋಧಿ ಯೋಜನೆಯನ್ನು ಭಾರತದ[ಲ್ಲಿ] ಜಾರಿ ಮಾಡಲು ಹೊರಟಿರುವುದು ನಮ್ಮ ದೇಶದ ಪ್ರಜಾತಂತ್ರಕ್ಕೆ ಕನ್ನ[ಡಿ] ಹಿಡಿದಂತಿದೆ ಅಲ್ಲವೇ?

ಪ್ರತಿವಾದಿ ನಂ. 1: ಬಯೋಡಾಟ

ಹೆಸರು : ನಂದನ್ ಮನೋಹರ ನಿಲೇಕಣಿ

ವಯಸ್ಸು: 56 ವರ್ಷ

ಹುಟ್ಟಿದ ಸ್ಥಳ: ಉತ್ತರ ಕನ್ನಡ ಜಿಲ್ಲೆಯ ಶಿರಸಿ

ತಂದೆ: ಮೋಹನ್ ರಾವ್ ನಿಲೇಕಣಿ, ಮೈಸೂರು ಮತ್ತು ಮಿನರ್ವ ಮಿಲ್‌ನಲ್ಲಿ ಜನರಲ್ ಮ್ಯಾನೇಜರ್ ಆಗಿದ್ದರು.

ವ್ಯಾಸಂಗ: ಬೆಂಗಳೂರಿನ ಪ್ರತಿಷ್ಠಿತ ಬಿಷಪ್ ಕಾಟನ್ ಬಾಯ್ಸ್ ಸ್ಕೂಲ್ ಮತ್ತು ದೇಶದೆಲ್ಲೆಡೆ ಪ್ರತಿಷ್ಠೆಯನ್ನು ಹೊಂದಿರುವ ಐಐಟಿ ಮುಂಬೈ ಇತ್ಯಾದಿ.

ಉದ್ಯೋಗ ಹಿನ್ನೆಲೆ: ಪ್ರಾರಂಭದಲ್ಲಿ ಖಾಸಗಿ ಕಂಪನಿಯೊಂದರ ಉದ್ಯೋಗ. ನಂತರ ಅಂತಾರಾಷ್ಟ್ರೀಯ ಖ್ಯಾತಿಯ ಇನ್‌ಫೋಸಿಸ್ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾದರು. ನಾರಾಯಣಮೂರ್ತಿಯವರ ನಿರ್ಗಮನದ ನಂತರ ಸಂಸ್ಥೆಯ ಸಿಇಓ ಆಗಿದ್ದರು.

ಪ್ರಶಸ್ತಿ/ಪುರಸ್ಕಾರ


ಐಟಿ ಕ್ಷೇತ್ರದಲ್ಲಿ ಸಾಧನೆ ಹಾಗೂ ಯಶಸ್ವೀ ಉದ್ಯಮಿಯಾಗಿ ಸಲ್ಲಿಸಿದ 'ಸೇವೆ'ಗಾಗಿ ದೇಶ-ವಿದೇಶಗಳಲ್ಲಿ ಹತ್ತಾರು ಪ್ರಶಸ್ತಿಗಳು ಸಂದಿವೆ.

ವಿಶೇಷ ಸೂಚನೆ: ದೀನ-ದಲಿತರ, ಬಡವರ, ರೈತರ ಸೇವೆ ಅಥವಾ ದೇಶಸೇವೆಯಲ್ಲಿ ತೊಡಗಿಸಿಕೊಂಡಿದ್ದರ ಬಗ್ಗೆ ಅಥವಾ ಆ ಕ್ಷೇತ್ರದಲ್ಲಿ ಪುರಸ್ಕಾರ ಪಡೆದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ.

ಆರ್ಥಿಕ ಸ್ಥಿತಿಗತಿ: 1.3 ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟು ಅಂದರೆ ಸುಮಾರು 6500 ಕೋಟಿ ರೂ.ಗಳಷ್ಟು ಮೌಲ್ಯದ ಶೇರು ಮತ್ತಿತರ ಆಸ್ತಿಪಾಸ್ತಿ ಹೊಂದಿದ್ದಾರೆ.

ವಿಶೇಷ ಮಾಹಿತಿ: ಇವರ ಪತ್ನಿ ಶ್ರೀಮತಿ ರೋಹಿಣಿ ನಿಲೇಕಣಿಯುವರು "ಸೇವಾಕಾರ್ಯ"ಗಳಲ್ಲಿ ತೊಡಗಿಸಿಕೊಂಡು ಸೇವೆಯನ್ನೇ ಬಂಡವಾಳವಾಗಿಸಿಕೊಂಡವರು ಎಂಬ ಖ್ಯಾತಿಯನ್ನು ಹೊಂದಿದ್ದಾರೆ. ಅವರ ಅಧೀನದಲ್ಲಿರುವ "ಅರ್ಘ್ಯಂ" ಎಂಬ 'ಸೇವಾ ಟ್ರಸ್ಟ್'ನ ವಾರ್ಷಿಕ ವಹಿವಾಟು ನೂರು ಕೋಟಿಗಳಿಗೂ ಅಧಿಕ, 2010-11 ನೇ ಸಾಲಿನಲ್ಲಿ 156 ಕೋಟಿಗಳಷ್ಟು ಭಾರೀ ಮೊತ್ತದ ಸೇವೆ ಸಲ್ಲಿಸಿದ್ದಾರೆ. ಅಂದಹಾಗೆ ಇವರ ಪುತ್ರಿ ಜಾಹ್ನವಿ ನಿಲೇಕಣಿ ಕೂಡ ಈ ಸಂಸ್ಥೆಯ ಟ್ರಸ್ಟಿಗಳಲ್ಲೊಬ್ಬರು.

ಆದರೆ ಇಷ್ಟೊಂದು ಭಾರೀ ಸೇವೆಯ ಫಲವಾಗಿ ದೇಶ ಎಷ್ಟು ಉದ್ಧಾರವಾಗಿದೆಯೆಂಬುದರ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಲಿಲ್ಲ.



ಕರಡನ್ನು ಇದುವರೆಗೂ ಸಂಸತ್ತಿನಲ್ಲಿ ಮಂಡಿಸಿಲ್ಲ 'ಆಧಾರ್' ನಂಬರನ್ನು ಕೊಡಲು ಬೇಕಾದ ಅಧ್ಯಯನ/ಸಂಶೋಧನೆ ನಡೆಸಲಿಕ್ಕೆ ಮಾತ್ರ ಅಧಿಕಾರವಿದೆಯೇ ಹೊರತು ಕಾರ್ಡ್‌ಗಳನ್ನು ವಿತರಿಸುವ ಯಾವ ಶಾಸನಬದ್ಧ ಅಧಿಕಾರವನ್ನೂ ಹೊಂದಿಲ್ಲ.

ಆದರೆ ಯೋಜನಾ ಆಯೋಗವು ತನ್ನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ UID ಪ್ರಾಧಿಕಾರದ ಅಧ್ಯಕ್ಷರಾದ ನಂದನ್ ನಿಲೇಕಣಿಯವರಿಗೆ ಕಾನೂನುಬಾಹಿರ ಅಧಿಕಾರಗಳನ್ನು ನೀಡಿ, ಸಾವಿರಾರು ಕೋಟಿಗಳಷ್ಟು ಸಾರ್ವಜನಿಕ ಹಣವನ್ನು ತೊಡಗಿಸಿದ್ದಾರೆ. ಈ ಅಧಿಕಾರವನ್ನು ಮನಸೋಇಚ್ಛೆ ದುರ್ಬಳಕೆ ಮಾಡಿಕೊಂಡಿರುವ ಮಾನ್ಯ ನಿಲೇಕಣಿಯವರು ಈ ಯೋಜನೆಯನ್ನು ಜಾರಿ ಮಾಡಲು ಹಲವಾರು ಕಂಪನಿಗಳಿಗೆ ಕಾಂಟ್ರಾಕ್ಟ್ ನೀಡಿದ್ದಾರೆ.


ಈ ಕಾಂಟ್ರಾಕ್ಟ್ ನೀಡಿಕೆಯಲ್ಲಿ ಯಾವ ಮಾನದಂಡವನ್ನು ಅನುಸರಿಸಲಾಗಿದೆಯೆಂಬುದು ಭಗವಂತನೇಬಲ್ಲ. ಭಾರೀ ಹೈಟೆಕ್ ಯೋಜನೆಯೆಂದು ಬಡಾಯಿ ಕೊಚ್ಚುತ್ತಿರುವ ಈ ಯೋಜನೆಗೆ ಗುತ್ತಿಗೆ ಪಡೆದುಕೊಂಡ ಕೆಲವು ಉದಾಹರಣೆಗಳನ್ನು ನೋಡಿ. ಆಂಧ್ರ ಪ್ರದೇಶದ ಗ್ರಾಮೀಣ ಪ್ರದೇಶದಲ್ಲಿ ಶಾಲೆಯೊಂದನ್ನು ನಡೆಸುತ್ತಿರುವ ಸಂಸ್ಥೆಯೊಂದು ಇಡೀ ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿನ ಯೋಜನೆಯ ಗುತ್ತಿಗೆ ಪಡೆದುಕೊಂಡಿದೆ. ಟೀ ಎಸ್ಟೇಟ್ ಮಾಲೀಕ ಕಂಪನಿಯೊಂದು ಇಡೀ ಈಶಾನ್ಯ ಭಾರತದಲ್ಲಿ ಆಧಾರ್‌ನ ಜಾರಿಯ ಗುತ್ತಿಗೆ ಪಡೆಯುವಲ್ಲಿ ಯಶಸ್ವಿಯಾಗಿದೆ. ಉನ್ನತ ತಂತ್ರಜ್ಞಾನಕ್ಕೂ ಟೀ ಎಸ್ಟೇಟಿಗೂ ಯಾವ ರೀತಿಯ ಸಂಬಂಧವೆಂದು ನಿಲೇಕಣಿಯವರೇ ಹೇಳಬೇಕು.

ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ಗೊತ್ತೆ? ತಜ್ಞರು ಅಂದಾಜಿಸಿರುವಂತೆ ಇದು ಪೂರ್ಣಗೊಳ್ಳಲು ಒಂದು ಲಕ್ಷದ ಐವತ್ತು ಸಾವಿರ ಕೋಟಿಗಳಷ್ಟು ಹಣ ಬೇಕಾಗುತ್ತದಂತೆ. 2011-12ರ ಸಾಲಿನ ಬಜೆಟ್ಟಿನಲ್ಲಿ 1,950 ಕೋಟಿ ರೂಗಳನ್ನು ನೀಡಲಾಯ್ತು. ಇಷ್ಟು "ಅಲ್ಪ" ಮೊತ್ತವೆಂದು ತಿಳಿದು ಕೆಂಡಾಮಂಡಲವಾದ ನಂದನ್ ನಿಲೇಕಣಿಯವರು ಈ ವರ್ಷಕ್ಕೆ ಸುಮಾರು 15,000 ಕೋಟಿಗಳಷ್ಟು ಹಣ ಒದಗಿಸುವಂತೆ ಆಗ್ರಹಿಸಿದರು. ಈ ಆಗ್ರಹಕ್ಕೆ ಮಣಿದ ಸರ್ಕಾರ ಈ ವರ್ಷ 8000 ಕೋಟಿಗಳಷ್ಟು ಹಣವನ್ನು ಒದಗಿಸಿರುವುದಾಗಿ ವರದಿಗಳು ಹೊರಬಂದಿವೆ.

ಆದರೆ ಹಣಕಾಸು ಹಾಗೂ ಗೃಹ ಸಚಿವಾಲಯಗಳು ಒಟ್ಟಾರೆ ಈ ಯೋಜನೆಗಾಗಿ ಈ ಪ್ರಮಾಣದ ಹಣವನ್ನು ವ್ಯಯಿಸುತ್ತಿರುವುದನ್ನು ಆಕ್ಷೇಪಿಸಿರುವುದಾಗಿ ತಿಳಿದು ಬಂದಿದೆ. ಈಗಾಗಲೇ ಸೆನ್ಸಸ್ ಇಲಾಖೆಯಲ್ಲಿ ಸಾಕಷ್ಟು ದಾಖಲೆಗಳು ಲಭ್ಯವಿದ್ದು ಈ ಹೊಸ ಯೋಜನೆ ಅದರ ಡೂಪ್ಲಿಕೇಷನ್ ಮಾತ್ರವೇ ಆಗುತ್ತದೆ ಎಂದು ಹಲವರು ತಕರಾರು ತೆಗೆದಿದ್ದಾರಂತೆ. ಅದೇನೇ ಇರಲಿ, ಕಾನೂನು ಬಾಹಿರವಾಗಿ ಪ್ರಾರಂಭವಾಗಿರುವ ಈ ಯೋಜನೆಯನ್ನು ಶರವೇಗದಲ್ಲಿ ಜಾರಿಗೊಳಿಸಲು ನಿಲೇಕಣಿಯವರು ಕಟಿಬದ್ಧರಾಗಿದ್ದಾರೆ.

ಈ ಯೋಜನೆಗೆ ಸಂಬಂಧಿಸಿದ ಅಕ್ರಮಗಳು ಬೆಳಕಿಗೆ ಬಂದದ್ದೂ ಕೂಡ ಕುತೂಹಲಕರವಾಗಿದೆ. ಅದು ಕರ್ನಾಟಕದ ವ್ಯವಹಾರಕ್ಕೆ ಸಂಬಂಧಿಸಿದ್ದು. UID ಪ್ರಾಧಿಕಾರದಿಂದ ಗುತ್ತಿಗೆ ಪಡೆದುಕೊಂಡ ಹಲವಾರು ಕಂಪನಿಗಳು ತಮಗೆ ಬೇಕು ಬೇಕಾದವರಿಗೆ ಸಬ್-ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಈ ಸಬ್ ಕಾಂಟ್ರಾಕ್ಟ್‌ಗಳು ಇತರ ಕೆಲವು ಏಜೆನ್ಸಿಗಳಿಂದ ಲಕ್ಷಾಂತರ ಠೇವಣಿ ಪಡೆದುಕೊಂಡು ಅವರನ್ನು ತಮ್ಮ ಫ್ರಾಂಚೈಸಿಗಳನ್ನಾಗಿ ನೇಮಿಸಿದ್ದಾರೆ. ಇಂಥ ಅವ್ಯವಹಾರಗಳು-ಅಕ್ರಮಗಳ ವಿಷಯದಲ್ಲಿ ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಒಂದು ಕೈ ಮುಂದೆ. ಈ ವಿಷಯದಲ್ಲಿ ಅದು ಹೇಗೆ ತಾನೇ ಹಿಂದೆ ಬೀಳುತ್ತೆ ಹೇಳಿ. ಕರ್ನಾಟಕದ ಯೋಜನೆಯ ಕಾಂಟ್ರಾಕ್ಟ್ ಗಿಟ್ಟಿಸಿಕೊಂಡ 'ಅಲಂಕಿಟ್ ಫೈನಾನ್ಷಿಯಲ್ ಸರ್ವಿಸಸ್' ಎಂಬ ಸಂಸ್ಥೆಯು ಗುರುತಿನ ದಾಖಲಾತಿ ಪಡೆಯಲು ಹಾಗೂ ಕಾರ್ಡ್ ವಿತರಿಸಲಿಕ್ಕೆಂದು UID ಗ್ಲೋಬಲ್ ಟೆಕ್ನಾಲಜಿ ಸಲ್ಯೂಷನ್ಸ್ ಎಂಬ ಮತ್ತೊಂದು ಖಾಸಗಿ ಕಂಪನಿಗೆ ಸಬ್-ಕಾಂಟ್ರಾಕ್ಟ್ ನೀಡಿದೆ. ಈ ಕಂಪನಿಯು ತಲಾ 2.5 ಲಕ್ಷಗಳಂತೆ ಠೇವಣಿ ಪಡೆದು ಹಲವಾರು ಫ್ರಾಂಚೈಸಿಗಳನ್ನೂ ನೇಮಿಸಿಕೊಂಡಿದೆ. ಈ ಅವ್ಯವಹಾರದಲ್ಲಿ ಏನು ಎಡವಟ್ಟಾಯಿತೋ ಏನೋ ಇಂಥ ಒಬ್ಬ ಫ್ರಾಂಚೈಸಿಯವರು ಈ ಗ್ಲೋಬಲ್ ಟೆಕ್ನಾಲಜಿ ಕಂಪನಿಯ ವಿರುದ್ಧ ದೂರು ದಾಖಲಿಸಿದ್ದಾರೆ. ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದನ್ನ ಅರಿತ UID ಪ್ರಾಧಿಕಾರ ನಗರದ ಹೈಗ್ರೌಂಡ್ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ ಗ್ಲೋಬಲ್ ಟೆಕ್ನಾಲಜಿ ಕಂಪನಿ ವಿರುದ್ಧಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ. ಹೀಗೆ ಹೈಗ್ರೌಂಡ್ ಪೋಲಿಸರು ಆ ಕಂಪನಿಯ ಮೇಲೆ ರೈಡ್ ಮಾಡುವ ಮೂಲಕ ಈ ಯೋಜನೆಯ ಅಕ್ರಮಗಳು ಬೆಳಕಿಗೆ ಬಂದಿವೆ.

ಎಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕರ ತೆರಿಗೆ ಹಣದಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಹೀಗೆ ನೀರಿನಂತೆ ಚೆಲ್ಲುತ್ತಿರುವ ನಂದನ್ ನಿಲೇಕಣಿಯವರಿಗೆ ಇಂಥ ಕಾಂಟ್ರಾಕ್ಟ್ ಅಥವಾ ಸಬ್‌ಕಾಂಟ್ರಾಕ್ಟ್ ಒಪ್ಪಂದ ಮಾಡಿಕೊಳ್ಳುವ ಯಾವ ಅಧಿಕಾರವೂ ಇಲ್ಲ. ಆದರೂ 'ಹುಚ್ಚ ಮದುವೆಯಲ್ಲಿ ಉಂಡವನೇ ಜಾಣ' ಎಂಬಂತೆ ಎಲ್ಲವೂ ನಡೆಯುತ್ತಿದೆ. ಪಂಜಾಬ್‌ನ ಉದಾಹರಣೆ ನೋಡಿ. ಈ ರಾಜ್ಯದ ಕಾಂಟ್ರಾಕ್ಟ್ ಗಿಟ್ಟಿಸಿದ 'ಅಲಂಕಿಟ್ ಫಿನ್‌ಸೆಕ್' ಲಿಮಿಟೆಡ್ ಕಂಪನಿಯು ನಿಪಿನ್ ಸಿಂಗ್ಲಾ ಎಂಬ ವ್ಯಕ್ತಿಗೆ ಒಂದು 'ಆಧಾರ್' ನಂಬರಿಗೆ 14 ರೂಗಳಂತೆ ಸಬ್ ಕಾಂಟ್ರಾಕ್ಟ್ ನೀಡಿದೆ. ಆತ ಇನ್ನಿತರ ಕೆಲ ಕಂಪನಿಗಳಿಗೆ ತಲಾ 9 ರೂಪಾಯಿಯಂತೆ ಮತ್ತೊಮ್ಮೆ ಸಬ್ ಕಾಂಟ್ರಾಕ್ಟ್ ಮಾಡಿಕೊಂಡಿದ್ದಾನೆ. ಕೇರಳ, ಆಂಧ್ರ ಮುಂತಾದ ಕಡೆಗಳಿಂದಲೂ ಇಂಥದೇ ಕತೆಗಳು ಕೇಳಿ ಬರುತ್ತಿವೆ. ಹೀಗೆ ಸ್ವಲ್ಪವೂ ಬೆವರು ಸುರಿಸದೇ ಜನರ ಹಣವನ್ನು ಲೂಟಿ ಹೊಡೆಯುವ ದೊಡ್ಡ ಜಾಲವೊಂದು ನಿರ್ಮಾಣವಾಗುತ್ತಿದ್ದು ಈ ಎಲ್ಲಾ ಹಗರಣಗಳ ನೇರ ಹೊಣೆ ಶ್ರೀಯುತರಾದ ನಿಲೇಕಣಿಯವರು ಮತ್ತು ಅವರನ್ನು ಕಾನೂನು ಬಾಹಿರವಾಗಿ ಪ್ರತಿಷ್ಠಾಪಿಸಿರುವ ಕೇಂದ್ರ ಸರ್ಕಾರವೇ. ಹೀಗೆ ಸಬ್ ಕಾಂಟ್ರಾಕ್ಟ್ ಪಡೆದವರು ತಾತ್ಕಾಲಿಕ ಸೇವೆಯ ಆಧಾರದಲ್ಲಿ ಉದ್ಯೋಗಿಗಳನ್ನು ನೇಮಿಸಿಕೊಂಡು 'ಆಧಾರ್' ಜಾರಿಮಾಡಲು ಹೊರಟಿದ್ದಾರೆ. ಕಾಂಟ್ರಾಕ್ಟ್ ಪಡೆದ ಸಂಸ್ಥೆಗೇ ಈ ಬಗ್ಗೆ ಅನುಭವ ಅಥವಾ ಅರ್ಹತೆಯಿಲ್ಲವೆಂದ ಮೇಲೆ ಅವರು ನೇಮಿಸಿಕೊಂಡ ಸಿಬ್ಬಂದಿಯ ಕತೆಯಂತೂ ಕೇಳುವುದೇ ಬೇಡ. ಈ ಸಿಬ್ಬಂದಿ ಹಲವು ಮಧ್ಯವರ್ತಿಗಳ ಮೂಲಕ ಜನರಿಂದ ಹಣ ಸುಲಿಯುವ ಧಂಧೆಗೆ ಇಳಿದಿದ್ದಾರೆ. ನೀವು ಅವರ ಕೈಬಿಸಿ ಮಾಡಿದರೆ ಸತ್ತು ಸ್ವರ್ಗದಲ್ಲಿರುವ ನಿಮ್ಮ ತಾತ, ಮುತ್ತಾತನ ಹೆಸರಿನಲ್ಲೂ ಅನಾಯಾಸವಾಗಿ ಕಾರ್ಡ್ ಪಡೆಯಬಹುದು.



ಬಾಯಿಬಿಟ್ಟರೆ ಬಣ್ಣಗೇಡು

ಏನೆಲ್ಲಾ ಬೊಗಳೆ ಬಿಡುತ್ತಿರುವ ಈ ಯೋಜನೆಯ ವಕ್ತಾರರು ಈ ಅಕ್ರಮಗಳ ಬಗ್ಗೆ ತುಟಿಪಿಟಕ್ಕೆಂದಿಲ್ಲ. ತಮಗೆ ಏನೂ ತಿಳಿಯದಂತೆ ನಟಿಸುವ ಮಳ್ಳರಂತೆ ಮುಗುಮ್ಮಾಗಿದ್ದಾರೆ. ಅಷ್ಟು ಮಾತ್ರವಲ್ಲ, ಈ ಯೋಜನೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಬಹಿರಂಗಪಡಿಸದೆ ಅತ್ಯಂತ ರಹಸ್ಯವಾಗಿ ಭದ್ರಪಡಿಸಿದ್ದಾರೆ.

ಈಗ ನ್ಯಾಯಾಲಯದ ಮುಂದೆ ದೂರು ದಾಖಲಿಸಿರುವ ಫಿರ್ಯಾದುದಾರರು ಈ ಹಿಂದೆ ಮಾಹಿತಿ ಹಕ್ಕು ಕಾಯಿದೆಯಡಿ ಈ ಯೋಜನೆಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಕೊಡುವಂತೆ ಅರ್ಜಿಸಲ್ಲಿಸಿದರು. ಆದರೆ ನಿಲೇಕಣಿಯವರ ಕಚೇರಿಯಿಂದ ಯಾವ ಪ್ರತಿಕ್ರಿಯೆಯೂ ಇಲ್ಲ, ನಂತರ ಅವರು ತಮ್ಮ ವಕೀಲರ ಮೂಲಕ ತಾ.04,07-2011 ಮತ್ತು 25-07-2011ರಂದು ಎರಡು ಲೀಗಲ್ ನೋಟಿಸ್‌ಗಳನ್ನು ನೀಡಿದ್ದರು. ಆದರೆ 'ಆಧಾರ್' ಕಚೇರಿಯಿಂದ ಯಾವ ಪ್ರತಿಕ್ರಿಯೆಯೂ ಇಲ್ಲ, ಕೇಳಿದ ಕೂಡಲೇ ದಾಖಲೆ ಕೊಟ್ಟುಬಿಡುವಷ್ಟು ಅವರು ದಡ್ಡರೇನಲ್ಲ, 'ಬಾಯಿ ಬಿಟ್ಟರೆ ಬಣ್ಣಗೇಡು' ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ.

ಅಮೆರಿಕಾದ ಆಸಕ್ತಿ

ಈ ಯೋಜನೆಯಲ್ಲಿ ಬಳಸಲಾಗುವ ಯಂತ್ರೋಪಕರಣಗಳನ್ನು ಅಮೆರಿಕಾ ಮೂಲದ ಎಲ್-1 ಐಡೆಂಟಿಟಿ ಸಲ್ಯೂಷನ್ಸ್ ಎಂಬ ಕಂಪನಿಯಿಂದ ಕೊಂಡು ಕೊಳ್ಳಲಾಗಿದೆಯಂತೆ. ಆದರೆ ಎಷ್ಟು ಬೆಲೆಗೆ? ಯಂತ್ರದ ಮಾಡೆಲ್ ಯಾವುದು? ಅದರ ಉಪಯುಕ್ತತೆ ಏನು? ಇತ್ಯಾದಿ ಎಲ್ಲಾ ವಿವರಗಳೂ ಗೌಪ್ಯವಾಗಿವೆ. ಆದರೆ ಆ ಕಂಪನಿಯವರು ಕೇವಲ ಯಂತ್ರಗಳನ್ನು ಮಾತ್ರ ನೀಡುತ್ತಿದ್ದು, ಅದರ ತಂತ್ರಜ್ಞಾನದ ಹಕ್ಕನ್ನು ಬಿಟ್ಟುಕೊಡುವುದಿಲ್ಲವಂತೆ. ಇದರ ಪರಿಣಾಮ ಸ್ಪಷ್ಟವಾಗಿದೆ. 120 ಕೋಟಿ ಭಾರತೀಯರಿಗೆ ಸಂಬಂಧಿಸಿದ ಎಲ್ಲಾ ವ್ಯಕ್ತಿಗತ ಮಾಹಿತಿಗಳನ್ನು ನಿಯಂತ್ರಿಸುವ ಪರಮಾಧಿಕಾರವು ತಂತ್ರಜ್ಞಾನದ ಹೆಸರಿನಲ್ಲಿ ಅಮೆರಿಕದ ಕಂಪನಿಯೊಂದರ ಹಿಡಿತಕ್ಕೆ ಸಿಗಲಿದೆ. ಈ ಕ್ರಮವು ನಾಗರಿಕರ ರಕ್ಷಣೆಯ ಗಂಭೀರ ಪ್ರಶ್ನೆಯ ಜೊತೆ ರಾಷ್ಟ್ರೀಯ ಹಿತಾಸಕ್ತಿಗೆ ತೀವ್ರ ಆಘಾತವನ್ನುಂಟು ಮಾಡಲಿದೆ. ಯಾಕೆಂದರೆ ಅಮೆರಿಕ ದೇಶವು ಪ್ರಪಂಚದಾದ್ಯಂತ ತನ್ನ ಕುಖ್ಯಾತ ಸಿಐಎ ಜಾಲವನ್ನು ಹೊಂದಿದ್ದು, ತನ್ನ ದುಷ್ಟ ಹಿತಾಸಕ್ತಿಗಳಿಗೆ ತಕ್ಕಂತೆ ನಾನಾ ಬುಡಮೇಲು ಕೃತ್ಯಗಳಲ್ಲಿ ತೊಡಗಿರುವುದು ನಮ್ಮ ಕಣ್ಣೆದುರಿಗಿರುವ ಸತ್ಯ.

ಬಯೋಮೆಟ್ರಿಕ್ ವಿಧಾನಗಳಿಂದ ವ್ಯಕ್ತಿಯ ಗುರುತನ್ನು ಸುಲಭವಾಗಿ ಪತ್ತೆ ಮಾಡಬಹುದು. ಆದ್ದರಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವುದು ಸುಲಭವಾಗುತ್ತದೆ ಎಂಬುದು ಇವರ ವಿವರಣೆ. ಆದರೆ ಮೈಸೂರಿನಲ್ಲಿ ಟಿವಿ 9 ನವರು ನಡೆಸಿದ 'ಸ್ಟಿಂಗ್' ಆಪರೇಷನ್‌ನಲ್ಲಿ ಬಹಿರಂಗವಾಗಿರುವಂತೆ ಹಣ ಕೊಟ್ಟರೆ ಭಯೋತ್ಪಾದಕರೂ ನಿರಾತಂಕವಾಗಿ ಆಧಾರ್ ಕಾರ್ಡ್ ಪಡೆದುಕೊಳ್ಳಬಹುದು.

ಹೋಗಲಿ ಜನಸಾಮಾನ್ಯರಿಗೆ ಇದರಿಂದ ಎಳ್ಳಷ್ಟು ಪ್ರಯೋಜನವಿಲ್ಲ, ವಕ್ತಾರರು ಹೇಳುವಂತೆ ರೇಷನ್ ಪಡೆಯಲು ಅಥವಾ ಇನ್ನಾವುದೋ ಸವಲತ್ತನ್ನು ಪಡೆಯಲು ಫಲಾನುಭವಿಯ ಬೆರಳಚ್ಚು, ಅಕ್ಷಿಪಟಲದ ಚಿತ್ರ ಮುಂತಾದ ಮಾಹಿತಿಗಳು ಯಾವ ಉಪಯೋಗಕ್ಕೂ ಬರುವುದಿಲ್ಲ ಎಂಬುದು ಶಾಲಾ ಬಾಲಕರಿಗೂ ಗೊತ್ತಿರುವ ಸರಳ ಸತ್ಯ. ಆದರೆ ಈ ಸರಳ ಸತ್ಯ ಹೈಟೆಕ್ ನಿಲೇಕಣಿಯಂಥವರಿಗೆ ಅರಿವಾಗದೇ ಹೋಗಿರುವುದು ನಮ್ಮ ದುರಂತವೇ ಸರಿ.

ಈ ಆಧಾರ್ ಯೋಜನೆಯು ಸಂವಿಧಾನದತ್ತವಾದ ನಾಗರಿಕ ಹಕ್ಕುಗಳಿಗೆ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ತೀವ್ರ ಆತಂಕವನ್ನುಂಟು ಮಾಡುತ್ತದೆ ಹಾಗೂ ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುತ್ತದೆಯೆಂದೂ, ಆದ್ದರಿಂದ ಇದನ್ನು ರದ್ದುಪಡಿಸುವಂತೆ ದೇಶಾದ್ಯಂತ ಹಲವು ಗಣ್ಯರು ಒತ್ತಾಯಿಸಿದ್ದಾರೆ.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶ ವಿ.ಆರ್. ಕೃಷ್ಣ ಅಯ್ಯರ್, ದೆಹಲಿ ಹಾಗೂ ಮದ್ರಾಸ್‌ಗಳ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದ ಎ.ಪಿ. ಶಾ, ಇತಿಹಾಸ ತಜ್ಞೆ ರೊಮಿಲಾ ಥಾಪರ್, ಖ್ಯಾತ ವಕೀಲರಾದ ಕನ್ನಾಭಿರನ್ ಮುಂತಾದವರು ಈ ಬಗ್ಗೆ ವಿವರವಾದ ಆಕ್ಷೇಪಗಳನ್ನು ಸಲ್ಲಿಸಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ NHRC ಕೂಡ ಈ ಯೋಜನೆಯ ಅನಾಹುತಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಎತ್ತಿದೆ.

ಆದರೆ ಈ ಯಾವ ಪ್ರಶ್ನೆಗಳಿಗೂ ಉತ್ತರಿಸುವ ಕನಿಷ್ಠ ಸೌಜನ್ಯ ಮತ್ತು ಜವಾಬ್ದಾರಿಯನ್ನು ಹೈಟೆಕ್ ನಿಲೇಕಣಿಯಾಗಲಿ ಅಥವಾ ಯೋಜನಾ ಆಯೋಗವಾಗಲಿ ತೋರಿಸಿಲ್ಲ. ಬದಲಿಗೆ ಮುಂಬೈನ ಪಂಚತಾರಾ ಹೋಟೆಲೊಂದರಲ್ಲಿ ದೊಡ್ಡದೊಡ್ಡ ಕಂಪನಿಗಳಿಗಾಗಿ ವಿಚಾರ ಸಂಕಿರಣವೊಂದನ್ನು ನಡೆಸಲಾಗಿತ್ತೆಂದು ವರದಿಯಾಗಿದೆ. ಅಷ್ಟು ಮಾತ್ರವಲ್ಲದೆ ಯೋಜನೆಯಲ್ಲಿ ಸಂಗ್ರಹಿಸಲಾಗುವ ಮಾಹಿತಿಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳುವಂತೆ ಹಲವು ಕಂಪನಿಗಳೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದಾರೆ.

ಹೈಟೆಕ್ ನಿಲೇಕಣಿ ಮತ್ತು ಅವರ ಹಿಂದಿನ ಸರ್ಕಾರ ಯಾರ ಹಿತವನ್ನು ಕಾಪಾಡಲು ಹೊರಟಿದೆಯೆಂಬುದು ಈಗ ನಮಗೆ ಸ್ಪಷ್ಟವಾಗಿದೆ.

ಮತ್ತೊಂದು ಪ್ರಮುಖ ಆತಂಕವೆಂದರೆ ಆಡಳಿತಾರೂಢ ಸರ್ಕಾರಗಳು ಮತ್ತು ಅವರ ಬೆಂಬಲಿಗರು ತಮ್ಮ ರಾಜಕೀಯ ವಿರೋಧಿಗಳನ್ನು ಅಥವಾ ತಮ್ಮ ವಿರುದ್ಧ ಹೋರಾಟದಲ್ಲಿ ನಿರತರಾಗಿರುವ ಸಂಘ-ಸಂಸ್ಥೆಗಳ ಸದಸ್ಯರನ್ನು ವ್ಯಕ್ತಿಗತವಾಗಿ ಗುರಿಮಾಡಲು ಈ ಯೋಜನೆ ಅವಕಾಶ ಒದಗಿಸುತ್ತದೆ. 1984 ರ ಸಿಖ್ ನರಮೇಧ ಅಥವಾ 2002 ರ ಗುಜರಾತ್ ನರಮೇಧಗಳು ನಮ್ಮ ಕಣ್ಣೆದುರಿನಲ್ಲಿರುವ ಜೀವಂತ ಸಾಕ್ಷಿಗಳು. ಅಷ್ಟು ಮಾತ್ರವಲ್ಲದೆ ಭ್ರಷ್ಟ ಅಧಿಕಾರಿಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಕ್ರಿಮಿನಲ್‌ಗಳು ಈ ಮಾಹಿತಿಯನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಗಳು ನಿಚ್ಚಳವಾಗಿವೆ. ಇಷ್ಟೆಲ್ಲಾ ಸಮಸ್ಯೆಗಳ ಆಗರವಾಗಿರುವ ಈ ಅಕ್ರಮ 'ಆಧಾರ್' ಅನ್ನು ಬಡಭಾರತೀಯರ ಮೇಲೆ ಹೇರುತ್ತಿರುವ ಈ ದುಷ್ಕೃತ್ಯಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಲಿ, ಅಕ್ರಮಗಳಲ್ಲಿ ಭಾಗಿಯಾಗಿರುವ ಮಹನೀಯರಿಗೆ ಪರಪ್ಪನ ಅಗ್ರಹಾರ ಅಥವಾ ತಿಹಾರ್ ಜೈಲುಗಳಿಗೆ ಪ್ರವೇಶಾತಿ ಸಿಗಲಿ ಎಂಬುದು ನಮ್ಮ ತುಂಬು ಹೃದಯ ಹಾರೈಕೆ. ❖

ಹಿಟ್ಲರ್ ಮತ್ತು ಆಧಾರ್




ಜರ್ಮನಿಯ 'ನರಹಂತಕ' ಹಿಟ್ಲರ್‌ಗೂ ಭಾರತದ 'ಪ್ರಗತಿಕಾರಕ' ಆಧಾರ್‌ಗೂ ಎತ್ತಣಿಂದೆತ್ತಣ ಸಂಬಂಧ ಎನ್ನುವಿರಾ? ಬಹಳ ನೇರವಾದ ಸಂಬಂಧವಿದೆ. ಹಿಟ್ಲರ್‌ನ ನಾಜಿಪಡೆಗೆ ದೇಶಾದ್ಯಂತ ಯಹೂದಿಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾದದ್ದು ಇಂತಹ ಕಾರ್ಡ್‌ನ ಮೂಲಕವೇ! ಐಬಿಎಂ ಕಂಪನಿ 1933ರಲ್ಲಿ ಜರ್ಮನಿಯಲ್ಲಿ ಜನಗಣತಿಯ ವ್ಯವಹಾರದಲ್ಲಿ ತೊಡಗಿಸಿಕೊಂಡಿತ್ತು. ವಿಶೇಷ ಪರಿಣತಿ ಮತ್ತು ತಂತ್ರಜ್ಞಾನವನ್ನು ಬಳಸಿ ರೂಪಿಸಲಾದ ಈ ಯೋಜನೆಯಿಂದಾಗಿ ಯಹೂದಿಗಳ ಸಕಲ ಮಾಹಿತಿಗಳೂ ನಾಜಿಗಳ ಕೈಯಲ್ಲಿ ಸಿದ್ಧವಾಗಿತ್ತು. ಅಮೆರಿಕದ ರಾಜಧಾನಿ ವಾಷಿಂಗ್‌ಟನ್‌ನ ಹೋಲೋಕಾಸ್ಟ್ ಎಂಬ ಮ್ಯೂಸಿಯಂನಲ್ಲಿ ನಾಜಿಗಳನ್ನು ಸುಲಭವಾಗಿ ಪತ್ತೆಹಚ್ಚಲು ನೆರವಾದ IBM Hollerith D-11 ಎಂಬ ಯಂತ್ರ ಮನುಕುಲದ ಆ ಕರಾಳ ಅಧ್ಯಾಯಕ್ಕೆ ಸಾಕ್ಷಿಯಾಗುಳಿದಿದೆ.



ಭಾರತದಲ್ಲಿ ಜೈವಿಕ ಮಾಹಿತಿ ಹಾಗೂ ಇತರ ಮಾಹಿತಿಗಳನ್ನು ಒಳಗೊಂಡ ಇಂಥದೇ ಕಾರ್ಡ್ ರೂಪಿಸುವ ಕಾರ್ಯ ಚಾಲನೆ ಪಡೆದುಕೊಂಡದ್ದು 1975ರಲ್ಲಿ, ಅಂದರೆ ತುರ್ತು ಪರಿಸ್ಥಿತಿಯ ಕರಾಳದಿನಗಳಲ್ಲಿ ಎಂಬುದು ಕಾಕತಾಳೀಯವೇನಲ್ಲ. ಆ ಯೋಜನೆಯ ರೂಪುರೇಷೆಗಳನ್ನು ತಯಾರಿಸಿದ್ದವರು ಭಾರೀ ಬಂಡವಾಳಿಗರ ಸಂಘಟನೆಯಾದ Assocham. ಮೇಲಿನ ಉದಾಹರಣೆಗಳ ಪರಸ್ಪರ ಸಂಬಂಧ ಅತ್ಯಂತ ನಿಚ್ಚಳವಾಗಿದೆ. ❖

ರಾಘವೇಶನ ಸುಳ್ಳು ಆದಾಯ ಪ್ರಮಾಣ ಪತ್ರ ಪುರಾಣಂ!!




"ಸಕಲ ಸುಖ ವ್ಯಾಮೋಹಿ" ರಾಮಚಂದ್ರಾಪುರ ಮಠಾಧೀಶ ರಾಘವೇಶ್ವರ ಸ್ವಾಮಿಯ ಲೌಕಿಕ ಲಾಲಸೆಯ ಲಘಡಾ ಲಂಗು-ಲಗಾಮಿಲ್ಲದೆ ಹಾವಳಿಯಿಡುತ್ತಿದೆ! ಕೋಟ್ಯಂತರ ರೂಪಾಯಿಯ ಸ್ಥಿರ-ಚರ ಆಸ್ತಿಯ ಗೋಕರ್ಣ ಮಹಾಬಲೇಶ್ವರ ದೇವಸ್ಥಾನವನ್ನು ಯಡ್ಡಿ ಸಿಎಂ ಆಗಿದ್ದಾಗ ಅನಾಮತ್ತಾಗಿ ಎತ್ತಿ ರಾಘವನ ಕಾವಿ ಜೋಳಿಗೆಗೆ ಹಾಕಿದ ಕ್ಷಣದಿಂದ ನೆಮ್ಮದಿಗೆಟ್ಟಿದ್ದ ಗೋಕರ್ಣ ಇವತ್ತಿಗೂ ತತ್ತರಿಸುತ್ತಲೇ ಇದೆ. ಕಾವಿ-ಪೊಲೀಸ್-ಗೂಂಡಾ ಬಲದ ರಾಘವನ ಹೊನ್ನು-ಮಣ್ಣಿನ ಮೋಹ ಗೋಕರ್ಣ-ಹೊಸನಗರ-ಸಾಗರ-ಪುತ್ತೂರು ಮುಂತಾದ ರಾಮಚಂದ್ರಾಪುರ ಮಠದ ಅಡ್ಡೆಗಳಿರುವೆಡೆ ಯಾವ ಕ್ಷಣದಲ್ಲಿ ಎಂಥ ಅನಾಹುತ ಮಾಡುತ್ತದೋ ಎಂಬ ಆತಂಕ ಆತನ ನಿಷ್ಠ ಶಿಷ್ಯ ವರ್ಗವನ್ನೇ ಕಾಡುತ್ತಿದೆ.....!


ಬಚ್ಚಮ್ಮ ಮಲ್ಲಿಕಾ ಶೆರಾವತ್‌ಳ ಪಕ್ಕದಲ್ಲಿ ಕುಳಿತು ಹಲ್ಲು ಕಿಸಿಯುತ್ತ ಬೀಸಣಿಕೆ ಬೀಸಿದ ರಾಘವ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಾಧಿಕಾರಿ ಭೀಮೇಶ್ವರ ಜೋಷಿಯ ಸುಂದರ ಹೆಂಡತಿಯ ಎಲ್‌ಐಸಿ ಏಜೆನ್ಸಿಗೆ ಬರೋಬ್ಬರಿ ಒಂದು ಕೋಟಿ ರೂಪಾಯಿ ಪಾಲಿಸಿ ಕೊಟ್ಟು "ರಂಗೀಲಾ" ರಗಳೆ ಎಬ್ಬಿಸಿದ್ದು ಹಳೆಯ ಕತೆ. ಇಂಥ 'ಧರ್ಮಗೇಡಿ' ರಾಘವನ 'ಮಣ್ಣಿ'ನ ದಾಹದ ದಗಲುಬಾಜಿಗಳೀಗ ಕುಖ್ಯಾತವಾಗುತ್ತಿವೆ. ಕಂಡ-ಕಂಡಲ್ಲಿ ಭೂ ಖರೀದಿ ಮಾಡುತ್ತಿರುವ ಈ ಕಾವಿ ಜೀವಿ ಕಾನೂನು-ಕಟ್ಟಳೆಯನ್ನೆಲ್ಲ ಬುದ್ಧಿಪೂರ್ವಕವಾಗೇ ಧಿಕ್ಕರಿಸುತ್ತಿದ್ದಾನೆ.

ಒಬ್ಬ ವ್ಯಕ್ತಿ 108 ಎಕರೆಯಷ್ಟೇ ಕೃಷಿ ಜಮೀನು ಹೊಂದಬಹುದೆಂಬ ಕಟ್ಟುನಿಟ್ಟಿನ ಕಾನೂನಿದೆ. ಹಾಗೆಯೇ ಕೃಷಿ ಜಮೀನು ಕೊಳ್ಳುವಾತನ ವಾರ್ಷಿಕ ಆದಾಯ ಲಕ್ಷ ರೂಪಾಯಿ ಮೀರುವಂತಿಲ್ಲ. ಹಾಗೊಮ್ಮೆ ಈ ಕಾನೂನು ಕಡೆಗಣಿಸಿ ಭೂಮಿಕೊಂಡರೆ ಅದು ತಂತಾನೆ ಸರ್ಕಾರದ ವಶವಾಗುತ್ತದೆ. ಈ ನಿಯಮ-ಕಾನೂನೆಂದರೆ ಅಧಿಕಾರಸ್ಥ ರಾಜಕಾರಣಿಗಳ ಆಸ್ಥಾನ ಪುರೋಹಿತನಂತಾಗಿರುವ ರಾಘವನಿಗೆ ಕ್ಯಾರೇ ಇಲ್ಲ! ರಾಘವನ ವಾರ್ಷಿಕ ಆದಾಯ ಹತ್ತಿರತ್ತಿರ ಒಂದು ಕೋಟಿಯೆಂದು ಆತನ ಗೋವು-ಗೋಮೂತ್ರ-ಸಗಣಿ ದಂಧೆ ಮತ್ತು ಧಾರ್ಮಿಕ ವಹಿವಾಟು ಬಲ್ಲವರು ಪಿಸುಗುಡುತ್ತಾರೆ. ಇಂಥಾದ್ದರಲ್ಲಿ ರಾಘವ ಪುತ್ತೂರು, ಗೋಕರ್ಣ ಮುಂತಾದೆಡೆ ಸ್ವಂತ ಹೆಸರಲ್ಲೇ ನೂರಾರು ಎಕರೆ ಜಮೀನು ಕೊಂಡುಕೊಂಡು "ಜಮೀನ್ದಾರ" ಬೇರೆ ಆಗಿದ್ದಾನೆ!!

ಗೋಕರ್ಣದ ಅಶೋಕೆ ಬಳಿ ರಾಘವ ಅಖಂಡ ಬ್ರಹ್ಮಚಾರಿ ಹನುಮಂತನ ಗುಡಿ ಕಟ್ಟುವ ಕಾರ್ಯಕ್ರಮಕ್ಕೆ ಬಾಲಿವುಡ್ ಸೆಕ್ಸ್ ಬಾಂಬ್ ಮಲ್ಲಿಕಾ ಶೆರಾವತ್‌ಳನ್ನು ಕರೆಸಿದ್ದು ದಶದಿಕ್ಕುಗಳಲ್ಲಿ ರೋಮಾಂಚನ ಮೂಡಿಸಿತ್ತಲ್ಲವಾ? ಅದೇ ಹನುಮ ದೇವಸ್ಥಾನಕ್ಕಾಗಿ ಈ ರಗಳೆ 'ಸನ್ಯಾಸಿ' ಅಶೋಕೆಯಲ್ಲಿ ಸುಮಾರು 5 ಎಕರೆ ಭೂಮಿ ಖರೀದಿಸಿದ್ದ. ಈ ಜಮೀನಿನ ಅಸಲಿ ಒಡೆಯನ ಬಗ್ಗೇ ಅನೇಕ ಅನುಮಾನಗಳಿವೆ. ಅದಿರಲಿ, 2009 ರಲ್ಲಿ ಗೋಕರ್ಣದ ಸರ್ವೆ ನಂಬರ್ 886 ರಲ್ಲಿ ಈ ಭೂಮಿ ಕೊಳ್ಳುವಾಗ ರಾಘವ ಆಗತ್ಯ ದಾಖಲೆ ಒದಗಿಸದೆ ಚಡ್ಡಿ ಅಧಿಕಾರಸ್ಥರ ಬಲದಿಂದ ಕರಾಮತ್ತು ಮಾಡಿದ್ದೀಗ ದೊಡ್ಡ ಹಗರಣವಾಗಿಬಿಟ್ಟಿದೆ!

ಆ ಹೊತ್ತಲ್ಲಿ ಬ್ರಾಹ್ಮಣರ ಈ ಪರಮ ಪವಿತ್ರ ಮಾರ್ಗದರ್ಶಕ ಅಡ್ಡದಾರಿ ಹಿಡಿದು ಹೋಗಿದ್ದ! ತನ್ನ ಆದಾಯ ಎರಡು ಲಕ್ಷದೊಳಗಿದೆ ಎಂಬ ಪ್ರಮಾಣ ಪತ್ರ ಕೊಡದೆ ಕೃಷಿ ಭೂಮಿ ಖರೀದಿಯಲ್ಲಿ ಕಳ್ಳಾಟ ನಡೆಸಿದ್ದ. ಇದೊಂದು ಶುದ್ಧ ಕ್ರಿಮಿನಲ್ ಖರೀದಿ ಕರ್ಮಕಾಂಡ; ಕಾನೂನುಬಾಹಿರ ಪ್ರಕ್ರಿಯೆ; ಕಾನೂನು ಕಡೆಗಣಿಸಿದ ತಪ್ಪಿಗೆ ಕೊಂಡ ಭೂಮಿಯನ್ನೇ ದಂಡವಾಗಿ ಸರ್ಕಾರಕ್ಕೆ ಬಿಟ್ಟುಕೊಡಬೇಕಾದ ಪ್ರಾಯಶ್ಚಿತ್ತಕ್ಕೆ ರಾಘವ ತುತ್ತಾಗಬೇಕಾದ ಸಂದಿಗ್ಧತೆ ಎದುರಾಗಿತ್ತು, ಅಂದಿನ ಕುಮಟಾದ ಅಸಿಸ್ಟೆಂಟ್ ಕಮಿಷನರ್ ಕಾನೂನು





ಅನ್ನ ಪೂರ್ಣೇಶ್ವರಿ ದೇವಸ್ಥಾನದ ಧರ್ಮಾಧಿಕಾರಿ ಭೀಮೇಶ್ವರ ಜೋಷಿಯ ಹೆಂಡತಿ

ನಿಷ್ಠೆಯಿಂದ ಕೆಲಸ ಮಾಡಿದ್ದು ರಾಘವನಲ್ಲಿ ಪೀಕಲಾಟ ಮೂಡಿಸಿತ್ತು. ಎ.ಸಿ. ಸಾಹೇಬರು ಯಾವ ಮುಲಾಜಿಗೂ ಒಳಗಾಗದೇ ಈ ಭೂಮಿ ಖರೀದಿಯೇ ನಿಯಮಬಾಹಿರವೆಂದು ಘೋಷಿಸಿ ಮೂಲ ಒಡಂಬಡಿಕೆ ರದ್ಧತಿಗೆ ಆದೇಶಿಸಿಬಿಟ್ಟಿದ್ದರು.

ಆಗ ಗಡಿಬಿಡಿಗೆ ಬಿದ್ದ ರಾಘವನ ಪರಿವಾರ ಗಂಡಾಗುಂಡಿ ಮಾಡಿ ಹೊಸನಗರದ ತಹಶೀಲ್ದಾರ್‌ರಿಂದ ಖೊಟ್ಟಿ ಆದಾಯ ಪ್ರಮಾಣ ಪತ್ರವೊಂದನ್ನು ಪಡೆದುಕೊಂಡಿತ್ತು! ಆ ಆದಾಯ ಪತ್ರದಲ್ಲಿ ರಾಘವನ ವಾರ್ಷಿಕ ಉತ್ಪನ್ನ 2.80 ಲಕ್ಷ ಎಂದು ನಮೂದಿಸಲಾಗಿತ್ತು, ಇದರಲ್ಲಿ ಕೃಷಿಯಿಂದ ಒಂದು ಲಕ್ಷ ಮತ್ತು ಕೃಷಿಯೇತರ 'ದಂಧೆ'ಯಿಂದ 1.80 ಲಕ್ಷ ವರಮಾನವೆಂದು ಹೇಳಲಾಗಿತ್ತು, ಆ ವೇಳೆಗೆ ಬೇರೆ ಎ.ಸಿ. ಕುಮಟಾಗೆ ವಕ್ಕರಿಸಿದ್ದರು. ಆತನಿಗೆ ಗೋಕರ್ಣದ ರವಿ ಸೂರಿ, ಚಿಂತಾಮಣಿ ಉಪಧ್ಯಾಯ, ಅಮಿತ್ ನಾಡಕರ್ಣಿ ಎಂಬುವವರು ರಾಘವ ಹೊಸನಗರ ತಹಶೀಲ್ದಾರ್‌ರಿಂದ ತಂದಿರುವ ಆದಾಯ ಪ್ರಮಾಣ ಪತ್ರವೇ ಬೋಗಸ್ ಎಂದು ದೂರು ಕೊಟ್ಟಿದ್ದರು. ರಾಘವನ್ನು ಆದಾಯ 2.80 ಲಕ್ಷಕ್ಕಿಂತಲೂ ಜಾಸ್ತಿ, ಇದಕ್ಕೀತ ಪ್ರತಿ ವರ್ಷ ತುಂಬುವ ನಾಲ್ಕು ಲಕ್ಷಕ್ಕಿಂತಲೂ ಹೆಚ್ಚು ಜೀವ ವಿಮಾ ಕಂತೇ ಸಾಕ್ಷ್ಯಾಧಾರವಾಗಿತ್ತು.

ಒಂದೊಮ್ಮೆ ರಾಘವನ ವಾರ್ಷಿಕ ಆದಾಯ 2.80 ರೂ.ಗಳಾದರೂ ಆತನಿಗೆ ಕೃಷಿ ಜಮೀನು ಕೊಳ್ಳುವ ಅವಕಾಶವಿಲ್ಲ! ಖರೀದಿ ಕಂಡಿಷನ್‌ಗೆ ಇದು ತದ್ವಿರುದ್ಧ!! ಇದ್ಯಾವುದನ್ನೂ ಪರಿಗಣಿಸುವ 'ಸ್ಥಿತಿ'ಯಲ್ಲಿ ಕುಮಟಾ ಎ.ಸಿ.ಇರಲಿಲ್ಲ, ರಾಘವನ ಮೇಲೆ ಕಾನೂನುಕ್ರಮ ಜರುಗಿಸಿ ಕ್ರಿಮಿನಲ್ ಕೇಸು ಜಡಿಯಬೇಕಿದ್ದ ಎ.ಸಿ.ಗೆ ಬಿಜೆಪಿಯ ಆಳುವವರು ಆತನ ಆಕ್ರಮ-ಸಕ್ರಮಕ್ಕೆ ಕಟ್ಟುನಿಟ್ಟಿನ ರಹಸ್ಯ ಆದೇಶ ರವಾನಿಸಿದ್ದರು. ಹೀಗಾಗಿ ಎ.ಸಿ. ಸಾಹೇಬರು ಈ ಭೂಕರ್ಮಕಾಂಡದ ವಿರುದ್ಧ ಬಂದಿದ್ದ ಎಲ್ಲ ಆಕ್ಷೇಪ, ವಿರೋಧವನ್ನು ತಳ್ಳಿ ಹಾಕಿ ರಾಘವನನ್ನು ಬಚಾಯಿಸುವ ಡ್ಯೂಟಿಗೆ ನಿಂತುಬಿಟ್ಟರು. ರಾಘವನ ಪರವೇ 'ನ್ಯಾಯ' ನೀಡಿದರು. ರಾಘವನ ಭೂಭಾನ್ಗಡಿಗೆ ಸರ್ಕಾರಿ ಸಿಂಧೂತ್ವದ ಸೀಲು ಒತ್ತಿಬಿಟ್ಟರು.

ಆಗ ಆಕ್ಷೇಪಣೆದಾರ ರವಿ ಸೂರಿ ನೇರ ಹೊಸನಗರದ ತಹಶೀಲ್ದಾರ್ ರಾಘವನಿಗೆ ಕೊಟ್ಟಿರುವ ಆದಾಯ ಪ್ರಮಾಣ ಪತ್ರವೇ ಬೋಗಸ್ ಎಂದು ತಹಶೀಲ್ದಾರ್‌ನನ್ನೇ ಛಾಲೆಂಜ್ ಮಾಡಿದರು. ಇದಕ್ಕೆ ಆಧಾರವಾಗಿ ರಾಘವ ಒಂದು ಕೋಟಿಯ ವಿಮೆ ಮಾಡಿಸಿಕೊಂಡಿರುವುದು, ಅದಕ್ಕೆ ಪ್ರತಿ ವರ್ಷ ನಾಲ್ಕು ಲಕ್ಷದಷ್ಟು ಪ್ರೀಮಿಯಂ ಕಟ್ಟುತ್ತಿರುವುದರ ದಾಖಲೆ ಒದಗಿಸಿ ದ್ದರು. 2.80 ಲಕ್ಷ ವಾರ್ಷಿಕ ಆದಾಯ ವಿರುವಾತ ಒಂದು ಕೋಟಿ ರೂಪಾಯಿ ಜೀವ ವಿಮೆ ಮಾಡಿಸಲು ಸಾಧ್ಯವಾ? ಹಾಗಾಗಿ ರಾಘವನ ಆದಾಯ ಆತ ಪಡೆದುಕೊಂಡಿರುವ ಪ್ರಮಾಣ ಪತ್ರದಲ್ಲಿರುವುದಕ್ಕಿಂತ ಹಲವು ಪಟ್ಟು ಹೆಚ್ಚೆಂಬ ವಾದ ಆಕ್ಷೇಪಣಾದಾರನ ದಾಗಿತ್ತು. ಈ ಸರಳ ತರ್ಕ ಮತ್ತು ವಾಸ್ತವದ ಆಧಾರದ ಮೇಲೆ ರಾಘವನ ಆದಾಯ ಪ್ರಮಾಣ ಪತ್ರದ ಅಸಲಿಯತ್ತನ್ನೇ ಪ್ರಶ್ನಿಸಲಾಗಿತ್ತು!!

ಈ ದೂರಿನ ಮೇಲೆ ವಿಚಾರಣೆಯನ್ನು ಅನಿವಾರ್ಯವಾಗಿ ಹೊಸನಗರ ತಹಶೀಲ್ದಾರ್ ನಡೆಸಬೇಕಾಗಿ ಬಂತು. ರಾಘವನಿಗೆ ಆತನ ವಾರ್ಷಿಕ ವರಮಾನ 2.80 ಲಕ್ಷ ಎಂದು ದೃಢೀಕರಿಸುವ ದಾಖಲೆ ಕೊಡುವಂತೆ ತಹಶೀಲ್ದಾರ್‌ಗೆ ಕೋರ್ಟು ಆದೇಶಿಸಿತು. ಆದರೆ ಸುಳ್ಳು ದಾಖಲೆ ಕೊಟ್ಟು ಸಿಕ್ಕಿಬಿದ್ದಿದ್ದ ರಾಘವನಿಗೆ ನಿಜವಾದ ದಾಖಲೆಯನ್ನು ನಿಗದಿತ ಅವಧಿಯಲ್ಲಿ ಕೊಡಲು ಸಾಧ್ಯವಾಗಲೇ ಇಲ್ಲ, ಕೂಲಂಕಷವಾಗಿ ಪ್ರಕರಣ ಪರಿ ಶೀಲಿಸಿದ ತಹಶೀಲ್ದಾರ್‌ಗೆ ರಾಘವನಿಗೆ ಸುಳ್ಳು ವರಮಾನ ಪತ್ರ ಕೊಡಲಾಗಿದೆ ಎಂಬುದು ಖಾತ್ರಿಯಾಗಿ ಹೋಯ್ತು, ಹೀಗಾಗಿ ಹೊಸನಗರ ತಹಶೀಲ್ದಾರ್ ರಾಘವನಿಗೆ ಕೊಟ್ಟಿದ್ದ ಆದಾಯ ಪ್ರಮಾಣ ಪತ್ರವನ್ನು ನಂ.ವಾ.ಅ.ಸ.ವಿವ 319:2009-10 (ದಿನಾಂಕ 22.7.09) ರದ್ದು ಪಡಿಸುವಂತೆ ಸಾಗರದ ಉಪ ವಿಭಾಗಾಧಿಕಾರಿಗೆ ಶಿಫಾರಸ್ಸು ಮಾಡಬೇಕಾಯ್ತು, ಅಂತೆಯೇ ಎ.ಸಿ. ಸಾಹೇಬರಿಗೆ 29.7.09 ರಂದು ತಹಶೀಲ್ದಾರ್ ಪತ್ರವೊಂದನ್ನು ಬರೆದು ರಾಘವನಿಗೆ ಕೊಡಲಾಗಿರುವ ಆದಾಯ ಪ್ರಮಾಣ ಪತ್ರ ರದ್ದು ಮಾಡುವಂತೆ ಕೇಳಿಕೊಂಡರು.

ತಹಶೀಲ್ದಾರರೇ ರಾಘವನಿಗೆ ಕೊಡಲಾಗಿರುವ ಆದಾಯ ಪ್ರಮಾಣ ಪತ್ರ ಖೊಟ್ಟಿ ಎಂದ ಮೇಲೆ ಎ.ಸಿ. ಏನು ಮಾಡಲು ಸಾಧ್ಯ? ಸಾಕ್ಷ್ಯಾಧಾರ ಸಮೇತ ಸಿಕ್ಕಿಬಿದ್ದಿದ್ದ ರಾಘವನಿಗೆ ಆತ ನಂಬಿದ್ದ ಚಡ್ಡಿ ಮಂತ್ರಿ-ಮಾಂಡಲೀಕರ್‍ಯಾರೂ ನೆರವಿಗೆ ನಿಲ್ಲಲಾಗಲಿಲ್ಲ, ಪಾಪ! ಅಡಕತ್ತರಿಯಲ್ಲಿ ಸಿಕ್ಕ ಅಡಿಕೆಯಂತಾದ ಮಂತ್ರಿ-ಎಸಿ-ಇನ್ನಿತರ ಅಧಿಕಾರಿಗಳು ಕಾನೂನಿಗಂಜಿ ರಾಘವನ ನಕಲಿ ಆದಾಯ ಪ್ರಮಾಣ ಪತ್ರ ರದ್ದು ಮಾಡೇಬಿಟ್ಟರು! ಅಲ್ಲಿಗೆ ರಾಘವನ 'ವೇಷ'ವೂ ಕಳಚಿಬಿತ್ತು; ಈಗ ಗೋಕರ್ಣದಲ್ಲಿ ರಾಘವ ಅಕ್ರಮವಾಗಿ ಖರೀದಿಸಿರುವ ಭೂಮಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದೊಂದೇ ಬಾಕಿಯಿದೆ! ಆದರೆ ಹೇಗಾದರೂ ಮಾಡಿ ಈ ಆಕ್ರಮ ಸಕ್ರಮ ಮಾಡಿಕೊಳ್ಳಲೇಬೇಕೆಂಬ ಹಠಕ್ಕೆ ಬಿದ್ದಿರುವ ರಾಘವ ಆಳುವ ಚಡ್ಡಿಗಳಿಗೆ 'ಧರ್ಮ ಸಂಕಟ' ಉಂಟು ಮಾಡುತ್ತಿದ್ದಾನೆಂಬ ಗುಲ್ಲು ಗೋಕರ್ಣದಲ್ಲಿ ಎದ್ದಿದೆ.

ಆಳುವ ಚಡ್ಡಿ ಖೂಳರನ್ನು ತನ್ನ ಜೋಳಿಗೆಯಲ್ಲಿಟ್ಟುಕೊಂಡಿರುವ ರಾಘವ ಸೀಜ್ ಪ್ರಕ್ರಿಯೆ ಶುರುವಾಗದಂತೆ 'ಮಂತ್ರಾಕ್ಷತೆ' ಉದುರಿಸುತ್ತಿದ್ದರೆ, ಅತ್ತ ಆತ ಅಕ್ರಮವಾಗಿ ಕೊಂಡುಕೊಂಡಿರುವ ನೂರಾರು ಎಕರೆ ಭೂಮಿಯನ್ನೆಲ್ಲ ಸರ್ಕಾರ ಕಬ್ಜಾ ಮಾಡಲು ಎದುರಾಳಿ ಬ್ರಾಹ್ಮಣ ಬಣ ಶತಪ್ರಯತ್ನ ನಡೆಸುತ್ತಿದೆ! ಈ ಖೊಟ್ಟಿ ಸ್ವಾಮಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಭೂ ಮಾಲೀಕನಾಗಿದ್ದಾನೆ. ಇದೆಲ್ಲ ಕಾನೂನಿನಂತೆ ಸರ್ಕಾರಕ್ಕೆ ಸೇರಬೇಕಾದ ಜಮೀನು. ಒಟ್ಟಿನಲ್ಲಿ ರಾಘವೇಶ್ವರ ಸ್ವಾಮೀಜಿಯ ಹೊನ್ನಿನ ಖಯಾಲಿ ಜೊತೆಗೇ ಮಣ್ಣಿನ ದಾಹವೂ ಜಗಜ್ಜಾಹೀರಾದಂತೆ ಆಗಿದೆ!

ರಾಘವ ಕಾವಿ ಮರೆಯಲ್ಲಿ ನಡೆಸುತ್ತಿರುವ ಕರ್ಮಕಾಂಡಕ್ಕೆ ಕೊನೆಯುಂಟಾ?

• ನಹುಷ

ಇಂಗದ ದೇಗುಲ ದಾಹ !

ರಾಮಚಂದ್ರಾಪುರ ಮಠಾಧೀಶ-ಆಳುವ ಚಡ್ಡಿ ಚತು
ಪೊಲಿಟಿಕಲ್ ಪುರೋಹಿತ ರಾಘವೇಶ್ವರ ಭಾರತಿಯ ದೇ
ಲಯ ನುಂಗುವ ಹಪಾಹಪಿ ಅದ್ಯಾಕೋ ಕಮ್ಮಿ ಆಗುತ್ತ
ಇಲ್ಲ! ಕೋಟಿ-ಕೋಟಿ ಆದಾಯ-ಆಸ್ತಿಯ ಗೋಕರ್ಣ ಮ
ಬಲೇಶ್ವರ ದೇವಸ್ಥಾನವನ್ನು ಅನಾಮತ್ತು ನುಂಗಿದ ರಾ
ಅದನ್ನೀಗ ಅರಗಿಸಿಕೊಳ್ಳಲಾಗದೆ ಮಾಡುತ್ತಿರುವ ತರಹೇವ
ಸರ್ಕಸ್‌ಗಳು ಲೋಕಪ್ರಸಿದ್ಧವಾಗಿ ಹೋಗಿವೆ. ರಾಘವನ ದೆ
ಸ್ಥಾನ ದಾಹದಿಂದ ಗೋಕರ್ಣದಲ್ಲಿ ನಿತ್ಯ ಸಂಘರ್ಷ ನಡೆ
ತ್ತಿದೆ. ರಾಘವನ ಮಠದ ಗೂಂಡಾಗಳು ಮತ್ತು ಮಹಾಬಲೆ
ರನ್ನು ಬಂಡವಾಳ ಮಾಡಿಕೊಂಡು ಬದುಕುತ್ತಿದ್ದ ಶೋ
ಪುರೋಹಿತರು ಬೀದಿ ಕಾಳಗಳಲ್ಲಿ ನಿರತರಾಗಿದ್ದಾರೆ.
ಬ್ರಾಹ್ಮಣ ಗುರುವಿನ ಲೌಕಿಕ ಲೋಲುಪತೆಗೆ ಆ ಸಮಾಜ
ಎರಡಾಗಿ ಒಡೆದು ಜಿದ್ದಾಜಿದ್ದಿನ ಗುದ್ದಾಟ ನಡೆಸುತ್ತಿದೆ.

ಇದಕ್ಕೆ ಸಮಾನಾಂತರವಾಗಿ ಕೋರ್ಟ್-ಕಚೇರಿಗ
ವ್ಯಾಜ್ಯಗಳೂ ನಡೆಯುತ್ತಿವೆ. ಮಹಾಬಲೇಶ್ವರನ ಹಸ್ತಾಂ
ವಿರೋಧಿಸಿ ಸಲ್ಲಿಸಲಾಗಿರುವ ದಾವೆ, ರಿಟ್ ಪಿಟಿಷ
ನ್ಯಾಯಾಂಗ ನಿಂದನಾ ದಾವೆ, ಮಾನವ ಹಕ್ಕು ಉಲ್ಲಂಘ
ಒಂದೇ.... ಎರಡೇ... ಸುಪ್ರೀಮ್‌ಕೋರ್ಟ್- ಹೈಕೋರ್ಟ
ಡಿಸ್ಟ್ರಿಕ್ಟ್ ಕೋರ್ಟ್- ತಾಲ್ಲೂಕಾ ಕೋರ್ಟ್‌ಗಳಲ್ಲೆಲ್ಲ ರಾಘ
ರಗಳೆಯೇ ರಗಳೆ!! ಕೆಲವು ಕೇಸಲ್ಲಂತೂ ರಾಘವನಿಗೆ ಕ
ಮೋಕ್ಷವಾಗಿದೆ; ಕಾನೂನು ಭಂಜಕನೆಂಬುದು ಸಾಬೀತಾ
ಇಷ್ಟಾದರೂ ಈ ಸೋಗಲಾಡಿ ಸ್ವಾಮಿಗೆ ದೇವಸ್ಥಾನ
ನಿಧಿ-ಆದಾಯ ನುಂಗುವ ಚಟ ಮಾತ್ರ ಹೋಗಿಲ್ಲ!!

ಈಗ ರಾಘವೇಶನ ಕಣ್ಣು ಗೋಕರ್ಣದಲ್ಲಿ ಸ
ಆದಾಯ ಬರುವ ಮಹಾಗಣಪತಿ, ತಾಮ್ರಗೌರಿ, ಭದ್ರ
ಮತ್ತು ವೆಂಕಟರಮಣ ದೇವಾಲಯಗಳ ಮೇಲೆ ಬಿದ್ದಿದೆ.
ದೇವಸ್ಥಾನಗಳನ್ನು ತನ್ನ ಖಾಸಗಿ ಮಠಕ್ಕೆ ಹಸ್ತಾಂತರಿಸಿಕೊ
ಈತ ಒಳಗೊಳಗೇ ಕರಾಮತ್ತು ಶುರು ಹಚ್ಚಿಕೊಂಡಿದ
ಮುಜರಾಯಿ ಇಲಾಖೆ ವಶದಲ್ಲಿರುವ ಸದರಿ ದೇಗುಲಗ
ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ಬಿ
ಸರ್ಕಾರದ ಅಧಿಕಾರಿಗಳು ಆರಂಭಿಸಿದ್ದಾರೆ. ಮೊನ್ನೆ ಡಿಸೆಂ
2 ರಂದು ಮುಗುಮ್ಮಾಗಿ ದೇಗುಲಗಳ ಹಸ್ತಾಂತರ ಕು
ಅಭಿಪ್ರಾಯ ಸಂಗ್ರಹಣೆ ಎಂಬಾ ನಾಟಕವನ್ನು ಗೋಕರ್ಣ
ಅಧಿಕಾರಿಗಳು ನಡೆಸಿದರು. ತುಂಬ ತರಾತುರಿಯಲ್ಲಿ ಒಂದ
ಜನಪ್ರತಿನಿಧಿಗಳು, ರಾಘವ ಮತ್ತವನ ಮಠದ ಪರ
ವವರನ್ನಷ್ಟೇ ಫೋನಲ್ಲಿ ಸಂಪರ್ಕಿಸಿದ ತಹಶೀಲ್ದಾರ್, ಅಸಿಸ್ಟೆ
ಕಮೀಷನರ್‌ಗಳು 'ರಹಸ್ಯ ಸಭೆ' ನಡೆಸಿ ಜನರ ಒ
ಇದೆಯೆಂದು ಬಿಂಬಿಸಲು ಹವಣಿಸಿದರು. ಇದರ ವಾ
ಬಡಿದ ಗೋಕರ್ಣದ ನಾಗರಿಕರು ಈ ಸಭೆಗೆ ಲಗ್ಗೆ
ಮತ್ತಷ್ಟು ದೇವಾಲಯಗಳನ್ನು ರಾಘವನ ಜೋಳಿ
ಹಾಕುವುದರ ವಿರುದ್ಧ ಧ್ವನಿ ಎತ್ತಿದರು.

ರಾಘವನ ಗ್ಯಾಂಗ್ ಪ್ರಕಾರ ಮಹಾಗಣಪತಿ, ಭದ್ರ
ತಾಮ್ರಗೌರಿ ಮತ್ತು ವೆಂಕಟರಮಣ ದೇವಸ್ಥಾನ
ಮಹಾಬಲೇಶ್ವರ ದೇವಸ್ಥಾನದ ಪರಿವಾರದಲ್ಲಿರುವಂಥವು
ಆದರೆ ಈ ದೇವಾಲಯಗಳು ಮಹಾಬಲೇಶ್ವರ ದೇವಸ
ಸುತ್ತ-ಮುತ್ತಲಿಲ್ಲ, ಅವೆಲ್ಲ ದೇವಾಲಯದ ಪರಿವಾರ
ದೂರದಲ್ಲಿವೆ. ಹೀಗಾಗಿ ಅವು ಪರಿವಾರ ದೇವಾಲಯ
ಎಂಬುದು ಸ್ಥಳೀಯ ಹಿರಿಯರ-ಉದ್ದಾಮ ಪುರೋಹಿ
ವಾದ. ಇದರಲ್ಲಿ ಭದ್ರಕಾಳಿಯಂತೂ ದಲಿತರು-ಶೂ
ಆರಾಧಿಸುವ ದೈವ. ರೈತರು-ಕೂಲಿಕಾರರು- ವ್ಯಾಪಾರಿ
ಈ ದೇವಸ್ಥಾನಕ್ಕೆ ತಲತಲಾಂತರದಿಂದ ನಡೆದುಕೊಳ್ಳುತ್ತಿ
ಎರಡು ತಲೆಮಾರಿನ ಹಿಂದೆ ಈ ದೇವಸ್ಥಾನ ಬುಡ
ಹಾಲಕ್ಕಿ ಒಕ್ಕಲಿಗರ ಪಾರುಪತ್ಯಕ್ಕೆ ಒಳಪಟ್ಟಿತ್ತು. 'ಬಂಡಿಹ
ಹೊತ್ತಲ್ಲಿ ಉತ್ಸವಕ್ಕೆ ಒಯ್ಯುವ ಕೋಟ್ಯಂತರ ರೂಪಾ
ಬಂಗಾರದ 'ಕಲಶ' ಹಾಲಕ್ಕಿ ಗೌಡರ ಮನೆಯಲ್ಲೇ ಇರು
ಈ ದೇವಾಲಯವಂತೂ ಪರಿವಾರ ದೇವಾಲಯಕ್ಕೆ ಸೇರಿ
ಸಾಧ್ಯವೇ ಇಲ್ಲ.

ಈ ಕೋಟಿ-ಕೋಟಿಯ 'ಕಲಶ'ದ ಮೇಲೆ ರಾಘ
ಕಣ್ಣುಬಿದ್ದಿದೆ ಎಂದು ಗೋಕರ್ಣದಲ್ಲೀಗ ಚರ್ಚೆ ನಡೆ
ಇಲ್ಲದಿದ್ದರೆ ಪರಿವಾರಕ್ಕೆ ಸೇರದ ದೇವಸ್ಥಾನಗಳ
ಮಹಾಬಲೇಶ್ವರನ ಪರಿವಾರದವುಗಳೆಂದು ಬಿಂ
ಲಪಟಾಯಿಸಲು ರಾಘವನ ಗ್ಯಾಂಗು ಮಸಲತ್ತು ಮಾಡು
ಎಂಬುದು ಸ್ಥಳೀಯರ ಪ್ರಶ್ನೆ! ಒಟ್ಟಿನಲ್ಲಿ ಸರ
ಬಲ-ಗೂಂಡಾ ಬಲ ಮತ್ತು ಕರಾಮತ್ತಿನಿಂದ ಮಹಾಬಲೆ
ದೇವಸ್ಥಾನ ನುಂಗಿದಂತೆಯೇ ಈಗ ಇನ್ನಿತರ 'ಬೆಲೆಬಾಳ
ನಾಲ್ಕು ದೇಗುಲಗಳ ಸ್ವಾಹಕ್ಕೆ ರಾಘವ ಮತ್ತವನ ಆ
ಸಹಚರರು ಬಾಯಿ ತೆರೆದು ನಿಂತಿದ್ದಾರೆ. ಅಂ
ಮಹಾಬಲೇಶ್ವರ ದೇಗುಲದ ಆಡಳಿತ ರಾಮಚಂದ್ರಾ
ಮಠಕ್ಕೆ ಹಸ್ತಾಂತರಿಸುವಾಗ 'ಸಾರ್ವಜನಿಕ ಅಭಿಪ್ರಾಯ ಅ
ಪ್ರಹಸನ ಮಾಡಿ ದಾದಾಗಿರಿಯಿಂದ ದೇಗುಲದ ಬೀಗ ಒ
ಕಬ್ಜಾ ಮಾಡಿಕೊಳ್ಳಲಾಗಿತ್ತಲ್ಲವೇ?

ಅಂಥದೇ ಗೂಂಡಾಗಿರಿ ಮೂಲಕ ಈಗ ನಾಲ್ಕು
ಸ್ಥಾನಗಳನ್ನು ವಶಪಡಿಸಿಕೊಳ್ಳಲು ರಾಘವನ ರೌಡಿ ಪಡೆ
ಸನ್ನದ್ಧವಾಗಿದೆ. ಅರ್ಥಾತ್ ಗೋಕರ್ಣದ ನೆಮ್ಮದಿ ಮತ್ತೆ
ದ್ವೇಷ-ಈರ್ಷ್ಯೆಯ ಸಂಘರ್ಷ ನಿತ್ಯ ನೂತನವಾಗುವ ದಿನ
ವಾಗುತ್ತಿದೆ! ಇದು ಚಡ್ಡಿ ಸರ್ಕಾರದ ಧರ್ಮಕಾರಣದ 'ಕ
ಫಲ!!



ತೆರಿಗೆ ಕಾಸು ಕದ್ದ ಮಲ್ಯನ ವಂಚನೆ

ಹೆಂಡ-ಹೆಣ್ಣು-ಹಣ ಎಂಬ ತ್ರಿವಳಿ ಗುಂಗಿನಲ್ಲೇ ತೇಲಾಡುತ್ತಿದ್ದ ಉದ್ಯಮಿ ವಿಜಯ್ ಮಲ್ಯನ ಐಷಾರಾಮಿ ಕಿಂಗ್‌ಫಿಷರ್ ಏರ್‌ಲೈನ್ಸ್ ಕೋಟ್ಯಂತರ ರೂಪಾಯಿಗಳ ನಷ್ಟದಲ್ಲಿ ಸಿಲುಕಿಕೊಂಡು ಆತ ತನ್ನನ್ನು ಬಚಾವು ಮಾಡಲು ಕೇಂದ್ರ ಸರ್ಕಾರದ ಮುಂದೆ ಭಿಕ್ಷೆ ಪಾತ್ರೆ ಹಿಡಿದು ನಿಂತದ್ದು ಈಗ ಎಲ್ಲರಿಗೂ ಗೊತ್ತಿದೆ. ಆದರೆ ಜಟ್ಟಿ ಮಕಾಡೆ ಬಿದ್ದರೂ ತನ್ನ ಮೀಸೆ ಮಣ್ಣಾಗಲಿಲ್ಲ ಎಂದು ವಾದಿಸಿದಂತೆ ಮಲ್ಯ ಕೂಡ "ನಾನು ಸರ್ಕಾರದ ನೆರವು ಕೇಳುವಂತಹ ಕೀಳು ಮಟ್ಟಕ್ಕೆ ಇಳಿದಿಲ್ಲ, ಬದಲಾಗಿ ಬ್ಯಾಂಕುಗಳ ನೆರವು ಕೇಳುತ್ತಿದ್ದೇನೆ" ಎಂಬ ಭಂಡ ವಾದವನ್ನು ಮುಂದಿಟ್ಟಿದ್ದಾನೆ.

ಬ್ಯಾಂಕುಗಳಲ್ಲಿ ಹಣ ಇಟ್ಟಿರುವವರು ತನ್ನಂತಹ ಅಡ್ಡಕಸುಬುದಾರರು ಎಂಬಂತಿತ್ತು ಮಲ್ಯನ ವಾದ. ವಾಸ್ತವವಾಗಿ ಸರ್ಕಾರದ ಹಣ ಹೇಗೆ ಸಾರ್ವಜನಿಕರ ಹಣವೋ ಹಾಗೆಯೇ ಬ್ಯಾಂಕುಗಳಲ್ಲಿರುವ ಹಣವೂ ಸಾಮಾನ್ಯ ಜನರದ್ದು. ಇದೆಲ್ಲ ಈಗ ಕೆಲ ವಾರಗಳಷ್ಟು ಹಳೆಯದಾದ ಇತಿಹಾಸ ಬಿಡಿ.

ಮಲ್ಯನ ಹೊಸ ವಂಚನಾ ನಾಟಕ ಎಂತಹದ್ದೆಂದರೆ ಆತ ಒಂದೆಡೆ ತನ್ನ ಕಂಪನಿಯ ನೌಕರರನ್ನೂ, ಮತ್ತೊಂದೆಡೆ ಕೇಂದ್ರ ಸರ್ಕಾರವನ್ನೂ ಏಕಕಾಲದಲ್ಲಿ ಕೋಟ್ಯಂತರ ರೂಪಾಯಿಗಳ ಮೊತ್ತಕ್ಕೆ ವಂಚಿಸಿರುವುದು.

ಇವತ್ತು ಒಂದು ಸಣ್ಣ ಉದ್ಯಮವನ್ನೋ, ಪುಟ್ಟ ವ್ಯಾಪಾರವನ್ನೋ ನಡೆಸುತ್ತಿರುವವರಿಗೂ ತಾವು ತಮ್ಮ ನೌಕರರಿಗೆ ಕೊಡುವ ಸಂಬಳದಲ್ಲಿ ಕಡಿತ ಮಾಡುವ ತೆರಿಗೆಯನ್ನು ಕೆಲವೇ ದಿನಗಳಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕು ಎಂಬ ನಿಯಮವಿದೆ ಎಂದು ಗೊತ್ತಿದೆ. ಹಾಗೊಮ್ಮೆ ಅವರು ಆ ತೆರಿಗೆ ಹಣವನ್ನು ಸರ್ಕಾರಕ್ಕೆ ಸಲ್ಲಿಸದಿದ್ದರೆ ಆ ತೆರಿಗೆ ಹಣಕ್ಕಾಗಿ ತೆರಿಗೆ ಇಲಾಖೆಯಿಂದ ನೋಟಿಸ್‌ಗಳನ್ನು ಸ್ವೀಕರಿಸಬೇಕಾಗುತ್ತದೆ ಮತ್ತು ಆ ಹಣದ ಮೇಲೆ ಬಡ್ಡಿಯನ್ನೂ ಕಟ್ಟಬೇಕಾಗುತ್ತದೆ.

ಆದರೆ ಮಲ್ಯನಂತಹ ಉದ್ಯಮಿಯ ಪ್ರಭಾವ ಎಂತಹದ್ದು ನೋಡಿ. ಈತನ ಕಿಂಗ್‌ಫಿಷರ್ ಕಂಪನಿ ಈಗಾಗಲೇ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದೆ, ಅದಕ್ಕೂ ಹೆಚ್ಚಾಗಿ ಸಾಲದ ಕೂಪದಲ್ಲಿ ಮುಳುಗಿದೆ..

ಇದೆಲ್ಲದರ ಮಧ್ಯೆ, ಈತ ತನ್ನ ಕಿಂಗ್‌ಫಿಷರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಆದಾಯದಲ್ಲಿ ಸರ್ಕಾರಕ್ಕೆ ಕಟ್ಟಲೆಂದು ಟಿಡಿಎಸ್ ರೂಪದಲ್ಲಿ ಹಿಡಿದಿಟ್ಟುಕೊಂಡಿದ್ದ ಹಣವನ್ನು ತನ್ನಲ್ಲೇ ಇಟ್ಟುಕೊಂಡಿದ್ದಾನೆ. ಅದರ ಒಟ್ಟು ಮೌಲ್ಯವೇ ಸುಮಾರು 423 ಕೋಟಿ ರೂಪಾಯಿಗಳು!


ಇದಲ್ಲದೆ ಮಲ್ಯ ಮತ್ತಷ್ಟು ತೆರಿಗೆ ಹಣವನ್ನೂ ಸರ್ಕಾರಕ್ಕೆ ಪಾವತಿಸದೆ ತನ್ನಲ್ಲೇ ಇಟ್ಟುಕೊಂಡಿದ್ದಾನೆ. ಅವುಗಳಲ್ಲಿ ನೌಕರರ ವಿಮಾ ಖಾತೆಗೆ ಕಟ್ಟಬೇಕಿದ್ದ 75 ಲಕ್ಷ, ಪ್ರಾವಿಡೆಂಟ್ ಫಂಡಿಗೆ ಕೊಡಬೇಕಿದ್ದ 43 ಲಕ್ಷ, ಸರ್ವಿಸ್ ಟ್ಯಾಕ್ಸ್ ರೂಪದಲ್ಲಿ ಸಲ್ಲಿಸಬೇಕಿದ್ದ 1.04 ಕೋಟಿ ಮತ್ತು ಪ್ರೊಫೆಷನಲ್ ಟ್ಯಾಕ್ಸ್ ರೂಪದಲ್ಲಿ ಕೇಂದ್ರದ ಬೊಕ್ಕಸಕ್ಕೆ ಕೊಡಬೇಕಿದ್ದ 2.46 ಲಕ್ಷ ರೂಪಾಯಿಗಳೂ ಸೇರಿವೆ. ಇವನ್ನೆಲ್ಲ ಲೆಕ್ಕ ಹಾಕಿದರೆ ಕಿಂಗ್‌ಫಿಷರ್ ಏರ್‌ಲೈನ್ಸ್ ಅನ್ನು ಜೀವಂತವಾಗಿ ಉಳಿಸಿಕೊಳ್ಳುವುದಿರಲಿ, ಅದಕ್ಕಿಂತ ಮೊದಲು ಮಲ್ಯ ಸರ್ಕಾರಕ್ಕೆ ಸುಮಾರು 425 ಕೋಟಿ ರೂಪಾಯಿಗಳನ್ನು ಕಡಾಕಂಡಿತವಾಗಿ ಕಟ್ಟಲೇಬೇಕಿದೆ.

ಟಿಡಿಎಸ್ ಮತ್ತು ಇತರೆ ತೆರಿಗೆಗಳನ್ನು ಸೂಕ್ತ ಸಮಯದೊಳಗೆ ಕಟ್ಟದಿರುವ ಜನರನ್ನು, ಕಂಪನಿಗಳ ನಿರ್ದೇಶಕರನ್ನು ನಮ್ಮ ದೇಶದ ಕಾನೂನು ಜೈಲಿಗೆ ದೂಡುತ್ತದೆ. ಆದರೆ ಕೋಟ್ಯಾಧಿಪತಿ ಉದ್ಯಮಿ ಕಂ ತನ್ನ ಅಕ್ರಮ ಸಂಪಾದನೆಯಿಂದಲೇ ಸಂಸತ್ತಿನಲ್ಲಿ ಸ್ಥಾನ ಪಡೆದ ಮಲ್ಯನಿಗೂ, ಬಡಪಾಯಿ ಮಲ್ಲಿಗೂ ನಮ್ಮ ವ್ಯವಸ್ಥೆಯಲ್ಲಿ ಅಜಗಜಾಂತರ ವ್ಯತ್ಯಾಸ ಇರುವುದರಿಂದ ಮಲ್ಯ ಸದಾ ಹಾರಾಡುತ್ತಿರುತ್ತಾನೆ, ಮಲ್ಲಿ ಸದಾ ಬದುಕಲು ಹೋರಾಡುತ್ತಿರುತ್ತಾನೆ.

ಮಲ್ಯತರಹದ ತೆರಿಗೆ ವಂಚಕರಿಗೆ ಪಾಠ ಕಲಿಸುವವರು ಯಾರು?



ನಟ ಯಶ್‌ಗೆ ಕುಮಾರಣ್ಣನ ತಪರಾಕಿ?



ಯಶ್ ಎಂಬ ಹೊಸ ಹೀರೋನನ್ನ ಕರೆಸಿಕೊಂಡು ಕುಮಾರಣ್ಣ ಸಮಾ ತಪರಾಕಿ ಕೊಟ್ಟರಂತೆ!


ಒದೆ ತಿಂದ ಯಶ್ ರಾಧಿಕಾ ಮೇಡಮ್‌ಗೆ ಮುಖ ತೋರಿಸಲಾಗದೆ ತಲೆ ಮರೆಸಿಕೊಂಡಿದ್ದಾನಂತೆ!!

ಒಟ್ಟಿನಲ್ಲಿ ಮೂರು ಕೋಟಿ ಬಂಡವಾಳದ 'ಲಕ್ಕಿ' ಎಂಬ ಚಿತ್ರದ ಭವಿಷ್ಯ ಏನಾಗುತ್ತೋ ಎಂಬ ಕೊರಗಿನಲ್ಲಿ ರಮ್ಯಾ ಕಂಗಾಲಾಗಿದ್ದಾಳಂತೆ!!!

ಗಾಂಧಿನಗರದ ಯಾವ ಸಂಧಿಗೆ ಕಾಲಿಟ್ಟರೂ ಸಧ್ಯ ಹೊಗೆ ಯಾಡುತ್ತಿರುವುದು ಇದೇ ಸುದ್ದಿ. ಮಾಜಿ ಮುಖ್ಯಮಂತ್ರಿ ಕುಮಾರಣ್ಣ ಬಳ್ಳಾರಿ ಎಲೆಕ್ಷನ್ನಿನಲ್ಲೋ, ಲೋಕಾಯುಕ್ತ ಕೋರ್ಟು ಕಟಕಟೆಯಲ್ಲೋ ಅಥವಾ ಯಡ್ಡಿ ವಿರುದ್ಧದ ಹೆಣಗಾಟದಲ್ಲೋ ಬಿಜಿಯಾಗಿರಬಹುದೆಂದು ಲೆಕ್ಕಹಾಕಿದ ಯಾರಿಗಾದರೂ ಇದು ಕೊಂಚ ಕುತೂಹಲದ ಸುದ್ದಿ ಎನಿಸಲೇಬೇಕಲ್ಲಾ.

ಇತ್ತೀಚೆಗಷ್ಟೇ ಪತ್ರಿಕೆಗಳ ಶುಕ್ರವಾರದ ಸಿನಿಮಾ ಪುರವಣಿ ಯಲ್ಲೊಂದು ವಿಲಕ್ಷಣ ಜಾಹೀರಾತು ಪ್ರಕಟವಾಗಿದ್ದನ್ನು ಗಮನಿಸಿದವರಿಗೆ ಈ ಸುದ್ದಿಯ ಆಳ, ಮರ್ಮ ಅರ್ಥವಾಗಲೇಬೇಕು. ಅದು ರಾಧಿಕಾ ಮೇಡಮ್ ನಿರ್ಮಿಸು ತ್ತಿರುವ 'ಲಕ್ಕಿ' ಚಿತ್ರದ ಜಾಹೀರಾತು. ಹೊಸ ಹೀರೋ ಯಶ್ ಮತ್ತು ಹಳೇ ಹೀರೋಯಿನ್ ರಮ್ಯಾ ನಟಿಸುತ್ತಿರುವ 'ಲಕ್ಕಿ' ಹೆಸರಿನ ಚಿತ್ರದ ಜಾಹೀರಾತಿನಲ್ಲಿ ಪ್ರೊಡ್ಯೂಸರ್ ಹೆಸರು ರಾಧಿಕಾ ಕುಮಾರಸ್ವಾಮಿ ಎಂದಿತ್ತು.

ಅಲ್ಲಿಗೆ ಕುಮಾರಣ್ಣ ಏಕೆ ಹೀರೋ ಯಶ್‌ನನ್ನು ಕರೆಸಿಕೊಂಡು ತಪರಾಕಿ ಕೊಟ್ಟರೆಂಬುದರ ವಾಸನೆ ಹತ್ತಲೇಬೇಕು.



ರಾಧಿಕಾ ಮೇಡಮ್ 'ಲಕ್ಕಿ' ಚಿತ್ರಕ್ಕೆಂದು ಮೂರು ಕೋಟಿಯ ಬಂಡವಾಳ ಹಾಕಿದ್ದಾರಂತೆ. ಶೂಟಿಂಗೂ ಮುಗಿದಿದೆಯಂತೆ. ಪೋಸ್ಟ್ ಪ್ರೊಡಕ್ಷನ್ ಎಂದು ಡಬ್ಬಿಂಗ್ ಇತ್ಯಾದಿಯಷ್ಟೇ ಬಾಕಿಯಿದೆ. ಆದರೆ ತಲೆನೋವು ಎಂಬುದು ಹೀರೋ ಯಶ್‌ನ ರೂಪದಲ್ಲಿರುತ್ತದೆಯೆಂಬುದು ನಿರ್ಮಾಪಕಿ ರಾಧಿಕಾಗೆ ಯಾವ ಮಾಯದಲ್ಲಿ ಗೊತ್ತಾದೀತು? ಹೀರೋ ಯಶ್ ಇತ್ತೀಚೆಗಷ್ಟೇ ಕಣ್ಣುಬಿಟ್ಟ ಹುಡುಗ. ಹೊಸಬನಾದ್ದರಿಂದ ದುಡ್ಡೂ ಕಮ್ಮಿ ಕೆಲಸವೂ ಸಲೀಸು ಎಂದು ಲೆಕ್ಕ ಹಾಕಿದ ರಾಧಿಕಾ ಮೇಡಮ್ ಸಂಭಾವನೆಯೆಂದೇ ಸರಿಸುಮಾರು ನಲವತ್ತು ಲಕ್ಷ ಕೊಟ್ಟಿದ್ದರಂತೆ. ಬಹುಶಃ ಆಕೆಗೆ ಗೊತ್ತಿಲ್ಲದೇ ಇದ್ದದ್ದು ಒಮ್ಮೆ ಯಶ್‌ನನ್ನು ಹಾಕಿಕೊಂಡು ಸಿನಿಮಾ ಮಾಡಿದ ಯಾವ ನಿರ್ಮಾಪಕನೂ ಮತ್ತೊಮ್ಮೆ ಆತನತ್ತ ತಲೆ ಹಾಕಿ ಮಲಗೋಲ್ಲ ಮತ್ತು ಇಂಥ ಪ್ರೊಡ್ಯೂಸರ್‌ಗಳೆಲ್ಲ ಸೇರಿ ಆತನಿಗೆ ಕೊಟ್ಟ ಬಿರುದು 'ಕಿರಿಕ್ ರಾಜ'.

ಈ ಹಿಂದೆ ವಿನು ಬಳಂಜನ 'ಪ್ರೀತಿ ಇಲ್ಲದ ಮೇಲೆ' ಸೀರಿಯಲ್ಲಿನಲ್ಲಿ ನಟಿಸಿ ಕೊಂಡಿದ್ದ ಯಶ್‌ನನ್ನು ಕರೆತಂದು ಹೀರೋ ಪಟ್ಟ ಕಟ್ಟಿದವಳು 'ಜಂಬದ ಹುಡುಗಿ'ಯ ಹೀರೋಯಿನ್ ಪ್ರಿಯಾ ಹಾಸನ್. ಆನಂತರ 'ಮುಂಗಾರು ಮಳೆ ಕೃಷ್ಣಪ್ಪನ ದುಡ್ಡಲ್ಲಿ ಶಶಾಂಕ್ ತೆಗೆದ 'ಮೊಗ್ಗಿನ ಮನಸ್ಸು' ಚಿತ್ರಕ್ಕೆ ಯಶ್ ಕಾಟಾಚಾರದ ಹೀರೋ. ಆದಾದ ಮೇಲೆ 'ಕಳ್ಳರ ಸಂತೆ', ಆನಂತರ 'ಮೊದಲ ಸಲ', ತದನಂತರ 'ರಾಜಧಾನಿ' ಈಗ ಕಿರಾತಕ. ಹೀಗೆ ಸಾಗುವ ಯಶ್ ಸಿನಿಮಾ ಬದುಕು ಈಗ ಮಾಜಿ ಸಿಎಂ ಕೈಯಲ್ಲಿ ತಪರಾಕಿ ತಿನ್ನುವ ತನಕ ಬಂದು ನಿಂತಿದೆಯೆಂದರೆ ಅದಕ್ಕೊಂದು ಕಾರಣ ಇರಲೇಬೇಕಲ್ಲವೆ?



ಶುರುವಿನಲ್ಲಿ ಎಂಟೋ ಹತ್ತೋ ಲಕ್ಷಕ್ಕೆ ಬರುತ್ತಿದ್ದ ಯಶ್ ಈಗ ತನ್ನ ಸಂಭಾವನೆ ಯನ್ನು 40 ಲಕ್ಷಕ್ಕೆ ಏರಿಸಿದ್ದಾನೆ. ಇದಕ್ಕೂ ಮೊದಲೇ ಅರ್ಧ ಡಜನ್ ನಿರ್ಮಾಪಕ ರಿಗೆ ಯಶ್ ಬರೆ ಹಾಕಿದ್ದಾನೆ. ಏನೋ ಹೊಸ ಹುಡುಗ ಅಂತ ಕರೆದು ಛಾನ್ಸ್ ಕೊಟ್ಟರೆ ವಾರೊಪ್ಪತ್ತಿಗೆ ಆತನ ಹಾವಳಿ ಅರ್ಥವಾಗಿರುತ್ತದೆ. ಶೂಟಿಂಗಿಗೆ ಬರು ವಾಗಲೇ ನಾಲ್ಕೈದು ಮಂದಿ ಭಟ್ಟಂಗಿಗಳನ್ನು ಕರೆತರುತ್ತಾನೆ. ನಿರ್ಮಾಪಕ ಅವರೆಲ್ಲ ರಿಗೂ ಬಿಟ್ಟೀ ಊಟ ಹಾಕಬೇಕು. ಅದೂ ಯಶ್ ಹೇಳಿದ ಹೋಟೆಲಿನಿಂದಲೇ ಮಟನ್ ಫ್ರೈ ಚಿಕನ್ ಬಿರಿಯಾನಿ ಬರಬೇಕು. ಕೆಲವೊಮ್ಮೆ ಮೂಡೇ ಇಲ್ಲ ಎಂದು ಅರ್ಧಕ್ಕೇ ಹೊರಟುಬಿಡುತ್ತಾನೆ. ಮತ್ತೊಮ್ಮೆ ಇನ್ನೇನೋ ಕೆಲಸವಿದೆ ಎಂದು ಚಕ್ಕರ್ ಹಾಕುತ್ತಾನೆ.

ಇಂಥದ್ದೇ ಕಿರಿಕಿರಿಗೆ ರೋಸತ್ತು ಖ್ಯಾತ ನಿರ್ದೇಶಕ ಕೆ.ವಿ. ರಾಜು 'ರಾಜಧಾನಿ' ಶೂಟಿಂಗಿನಲ್ಲಿ ಯಶ್‌ಗೆ ವಾಚಾಮಗೋಚರ ಬೈದು ಬಿಟ್ಟರಂತೆ. ಆ ಸಿಟ್ಟಿಂದ ಯಶ್ ನಿರ್ಮಾಪಕಿ ಸೌಮ್ಯ ಸತ್ಯನ್‌ಗೆ ಕೊಟ್ಟ ಕಾಟ ಅಷ್ಟಿಷ್ಟಲ್ಲ. ಇಷ್ಟಾಗಿಯೂ ಕಿರಾತಕ ಬಿಡುಗಡೆಗೂ ಮುನ್ನ 'ರಾಜಧಾನಿ' ತೆರೆಕಾಣ ಕೊಡದೇ ಯಶ್ ಹಾವಳಿಯಿಟ್ಟ. ಅದೇ ಹೊತ್ತಿಗೆ ದಿನೇಶ್ ಬಾಬು ಕರೆದು ಕತೆ ಹೇಳಿದರೆ ಯಶ್ ಕೇಳಿದ್ದು 70 ಲಕ್ಷ. "ಅಲ್ಲಯ್ಯಾ... ನನ್ನ ಬಜೆಟ್ಟೇ ಅಷ್ಟಿಲ್ಲ, ಜೊತೆಗೆ ಪಬ್ಲಿಸಿಟಿಗೆ ಅಂತ 10 ಲಕ್ಷ ಎಕ್ಸ್‌ಟ್ರಾ ಕೇಳ್ತೀಯಲ್ಲ, ಸಿನಿಮಾ ಫೀಲ್ಡಲ್ಲಿ ನನಗೆ ಇರೋ ಎಕ್ಸ್‌ಪೀರಿಯನ್ಸ್‌ನಷ್ಟು ನಿನಗಿನ್ನೂ ವಯಸ್ಸಾಗಿಲ್ಲ.. ಗೆಟ್‌ಲಾಸ್ಟ್" ಅಂದರಂತೆ!

ಇದು ಯಶ್ ಕುರಿತು ನಿರ್ಮಾಪಕರ ಅನುಭವ. 'ಕಿರಾತಕ' ಚಿತ್ರದ ಕ್ಯಾಸೆಟ್ ಬಿಡುಗಡೆ ಕಾರ್ಯಕ್ರಮದ ವೇದಿಕೆಯಲ್ಲಿ ತನ್ನ ಜೊತೆ ಹೀರೋಯಿನ್ ಫೋಟೋ ಹಾಕಿದ್ದಕ್ಕೇ ಕ್ಯಾತೆ ತೆಗೆದ. ನಾನೇ ಹೀರೋ ಅಂದ ಮೇಲೆ ನನ್ನ ಚಿತ್ರ ತಾನೇ ದೊಡ್ಡದಾಗಿ ಹಾಕಬೇಕು? ಜೊತೆಗೆ ಹೀರೋಯಿನ್ ಫೋಟೋನೂ ಯಾಕ್ರಿ ಹಾಕಿದ್ದು? ಎಂದು ಹಠಕ್ಕೆ ಬಿದ್ದವನು ಕಾರ್ಯಕ್ರಮಕ್ಕೆ ಬರೋಲ್ಲ ಎಂದಿದ್ದ!

ಇದ್ಯಾವುದನ್ನೂ ಅರಿಯದ ರಾಧಿಕಾ ಮೇಡಮ್ ಹೊಸ ಹೀರೋ, ಖುಣಿಯಾಗಿರ್ತಾನೆ ಎಂದೇ ತಮ್ಮ 'ಲಕ್ಕಿ' ಚಿತ್ರಕ್ಕೆ ಹಾಕಿ ಕೊಂಡರೆ ಒಂದೇ ತಿಂಗಳಿಗೆ ಯಶ್ ಬುದ್ಧಿ ತೋರಿಸಿಬಿಟ್ಟ. ಇದ್ದಕ್ಕಿದ್ದಂತೆ ಶೂಟಿಂಗಿಗೆ ಚಕ್ಕರ್. ಬಂದರೂ ಮೂಡಿಲ್ಲ ಅನ್ನು ವುದು, ಜೊತೆಗೆ ಹುಡುಗರ ಗ್ಯಾಂಗ್ ಕಟ್ಟಿಕೊಂಡು ಬರುವುದು, ಇಂಥಾ ಹೋಟೆಲಿಂದಲೇ ಚಿಲ್ಲಿ ಚಿಕನ್ ತರಿಸಿ, ಇಂಥಾ ಕಾರೇ ಬೇಕು, ಇಂಥಾ ಡ್ರೆಸ್ಸು ನನಗೇ ಇರಲಿ; ಇತ್ಯಾದಿ ಕಾಟಕ್ಕಿಳಿದ. ಒಂದು ಹಂತದಲ್ಲಿ ಹೀರೋಯಿನ್ ರಮ್ಯಾ ಜೊತೆಗೇ ಜಗಳಕ್ಕೆ ಬಿದ್ದ. ದರ್ಶನ್ ಜೈಲಿಗೆ ಹೋದ ಸುದ್ದಿ ಬಂದಿದ್ದೇ ತಡ ಇನ್ನು ತಾನೇ ಅಸಲಿ ಮಂಡ್ಯದ ಗಂಡು ಎಂದು ಭೋಂಗು ಬಿಟ್ಟ. ಇದು ಯಾವ ಮಟ್ಟಕ್ಕೆಂದರೆ "ಪುನೀತ್ ಎನ್ರೀ ಡ್ಯಾನ್ಸ್ ಮಾಡೋದು? ನನ್ನಷ್ಟು ಹೈಟುಪೈಟು ಆತನಿಗಿದೆಯೇನ್ರಿ?" ಎಂದೆಲ್ಲ ಹರಟತೊಡಗಿದ.


ಇದೆಲ್ಲವನ್ನೂ ಹೇಗೋ ಸಹಿಸಿಕೊಂಡಿದ್ದ ರಾಧಿಕಾಗೆ ಶೂಟಿಂಗ್ ಬೇಗ ಮುಗಿಯದೇ ಒಂದು ತಿಂಗಳು ಹೆಚ್ಚಿಗೆ ಎಳೆದದ್ದು ಪಿತ್ತ ನೆತ್ತಿಗೇರಿಸಿದೆ. ಸಾಕಪ್ಪಾ ಸಾವಾಸ ಎಂದು ಡಬ್ಬಿಂಗ್ ಮುಗಿಸೋಣ ಎಂದರೆ ಯಶ್ ಪದೇಪದೇ ಚಕ್ಕರ್ ಹಾಕತೊಡಗಿದ. ಯಾಕಪ್ಪಾ ತೊಂದ್ರೆ ಕೊಡ್ತೀಯಾ ಎಂದರೆ ಪಬ್ಲಿಸಿಟಿಗೂ ಮುನ್ನ ನನ್ನ ಕಂಡೀಷನ್ನೇ ನಡೀಬೇಕು, ರಮ್ಯಾಗಿಂತಲೂ ನನ್ನ ಚಿತ್ರಾನೇ ದೊಡ್ಡದಿರಬೇಕು, ಜಾಹೀರಾತಿನಲ್ಲೂ ನನ್ನನ್ನೇ ಹೈಲೈಟ್ ಮಾಡಿ ಎಂದೆಲ್ಲ ಕಾಟಕ್ಕಿಳಿದ.

ಬರುಬರುತ್ತ ಯಶ್ ದಿನಕ್ಕೊಂದು ಹೊಸ ಕಂಡೀಷನ್ ಹಾಕತೊಡಗಿದ್ದು ರಾಧಿಕಾ ಸಹನೆಯನ್ನೇ ಕೆದಕಿದೆ. ಇನ್ನು ಈತ ಸರಿಹೋಗಲ್ಲ ಎನ್ನಿಸಿರಬೇಕು. ಪತಿ ಕುಮಾರ ಸ್ವಾಮಿ ಬಳಿ ಹೇಳಿಕೊಂಡು 'ಆತನಿಂದ ಎಷ್ಟೆಲ್ಲಾ ಲಾಸು....' ಎಂದು ತಲೆಚಚ್ಚಿಕೊಂಡ ರಂತೆ. ಇನ್ನು ಕುಮಾರಣ್ಣ ಕೇಳಬೇಕೆ? ತಕ್ಷಣವೇ ಡಾಲರ್ಸ್ ಕಾಲನಿಯ ಕಿರುಮನೆಗೆ ಯಶ್‌ನನ್ನು ಕರೆಸಿಕೊಂಡಿದ್ದೇ ವಾಚಾಮ ಗೋಚರ ಉಗಿದು ತಪರಾಕಿ ಕೊಟ್ಟರಂತೆ!

ಇದಾಗಿ 15 ದಿನಕ್ಕೆ ಯಶ್ ತನ್ನ ಪರ ಮಾಪ್ತರ ಬಳಿ ಕುಮಾರಣ್ಣನ ತಪರಾಕಿ ಹೇಳಿ ಕೊಂಡು ಹಣೆ ಚಚ್ಚಿಕೊಂಡಾಗಲೇ ಸುದ್ದಿ ಗಾಂಧಿನಗರವನ್ನು ತಲುಪಿದ್ದು!

ಸದ್ಯ ಗಾಂಧಿನಗರದ ಮಂದಿ ತಲೆಕೆರೆದುಕೊಳ್ಳುತ್ತಿರುವುದು ಯಶ್‌ಗೆ ಸಿಕ್ಕ ತಪರಾಕಿಗಾಗಲಿ, 'ಲಕ್ಕಿ' ಚಿತ್ರದ ದುರ್ಗತಿಗಾಗಲಿ ಅಲ್ಲ, ಅವರ ಪ್ರಕಾರ ತಲೆಬುಡ ವಿಚಾರಿಸದೇ ಯಶ್‌ನನ್ನು ಹಾಕಿಕೊಂಡಿದ್ದು ರಾಧಿಕಾ ಮಾಡಿದ ಮೊದಲ ತಪ್ಪು, ಹಾಕಿಕೊಂಡ ತಪ್ಪಿಗೆ ತೆಪ್ಪಗೆ ಯಶ್‌ನನ್ನು ಸಾಗಹಾಕದೇ ಕುಮಾರಣ್ಣನ ಗಮನಕ್ಕೆ ತಂದದ್ದು ಎರಡನೇ ತಪ್ಪು!

'ಲಕ್ಕಿ' ಚಿತ್ರದ ಲಕ್ಕೇ ಸರಿಯಿಲ್ಲವೋ ಅಥವಾ ರಾಧಿಕಾ ಮೇಡಮ್ ಟೈಮೇ ಕೈಕೊಟ್ಟಿದೆಯೋ ಬಲ್ಲವರ್‍ಯಾರು?




ಕೆಲಿ ಮತ್ತು ಪತ್ರಿಕೋದ್ಯಮಕ್ಕೆ ಅದೇನೋ ನಂಟು. ಪತ್ರಿಕೋದ್ಯಮಕ್ಕೆ ಬಂದ ಕಲಾವಿದರು ಬಹಳಷ್ಟು ಬಾರಿ ಬರಹಗಾರರಾಗಿ, ವರದಿಗಾರರಾಗಿ ರೂಪುಗೊಂಡು ಬಿಡುತ್ತಾರೆ. ಇನ್ನು ಕೆಲವರು ಕಲಾವಿದರಾಗೇ ಹೆಚ್ಚು ಖ್ಯಾತರಾಗುತ್ತಾರೆ. ಅಂಥವರಲ್ಲಿ ಮುರಳೀಧರ ವಿ.ರಾಠೋಡ್ ಕೂಡಾ ಒಬ್ಬರು. ಕಲೆಯೊಂದಿಗೆ ನಾಡಿನ ಪ್ರಗತಿಪರ ಚಳವಳಿಗಳಲ್ಲೂ ತೊಡಗಿಸಿಕೊಂಡಿರುವ ರಾಠೋಡ್ ರೈತ ಸಂಘ, ದಲಿತ್ ಸಂಘರ್ಷ ಸಮಿತಿಗಳಲ್ಲಿ ಇಂದಿಗೂ ಸಕ್ರಿಯರಾಗಿದ್ದಾರೆ. ಜಮಖಂಡಿಯ ಈ ಲಂಬಾಣಿ ಯುವಕ ಎಲ್ಲರೊಂದಿಗೂ ಬೆರೆಯುವ ಸ್ನೇಹಜೀವಿ.

ನಾಡಿನ ಹಲವಾರು ಪತ್ರಿಕೆಗಳಲ್ಲಿ ತಮ್ಮ ಮೊನಚು ಗೆರೆಗಳ ಸುಂದರ ರೇಖಾ ಚಿತ್ರಗಳು, ವ್ಯಂಗ್ಯಚಿತ್ರಗಳಿಂದ ಎಲ್ಲರ ಗಮನ ಸೆಳೆದಿರುವ ರಾಠೋಡ್ ಕೋಲ್ಕತ್ತಾ, ನವದೆಹಲಿ, ಮುಂಬೈ, ಗೋವಾದಂಥ ಸ್ಥಳಗಳಲ್ಲಿ ನಡೆದ ಅನೇಕ ಸಮೂಹ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಜೊತೆಗೆ 2008ರ ಕರ್ನಾಟಕ ಸರ್ಕಾರ ನೀಡುವ ಸುವರ್ಣ ಕರ್ನಾಟಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇದೀಗ ಬೆಂಗಳೂರಿನಲ್ಲಿ ಏಕವ್ಯಕ್ತಿ ಕಲಾಪ್ರದರ್ಶನವನ್ನು ಹಮ್ಮಿಕೊಂಡಿರುವ ರಾಠೋಡ್ ಪ್ರಸ್ತುತ ಸಂದರ್ಭದ ವಿಚಾರಗಳನ್ನು ಕಲಾಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ.

ಬದುಕು, ವ್ಯವಸ್ಥೆಗಳ ಬಗ್ಗೆ ರಾಠೋಡ್ ಕುಂಚದಲ್ಲಿ ಅರಳಿರುವ ಈ ಕಲಾಕೃತಿಗಳ ಪ್ರದರ್ಶನವು ಕಸ್ತೂರ ಬಾ ರಸ್ತೆಯಲ್ಲಿರುವ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಡಿಸೆಂಬರ್ 9ರಿಂದ ಐದು ದಿನಗಳ ಕಾಲ ನಡೆಯಲಿದೆ. ರಾಠೋಡ್‌ಗೆ ಒಳ್ಳೆಯದಾಗಲಿ...





ಪಕ್ಷದ ಹೆಸರೇ ಜನಶ್ರೀ ಪಾರ್ಟಿ? ಗಣಿ ಕಳ್ಳರಿಗೆ 120 ಸೀಟು ಜೆಡಿಎಸ್‌ಗೆ 100 ಸೀಟು

ಬಹುಶಃ ಜೆಡಿಎಸ್ ಬಿಟ್ಟರೆ ಗಣಿ ದೊರೆಗಳಿಗೆ ಬೇರೆ ದಾರಿಯಿಲ್ಲ ಎಂಬುದು ಕುಮಾರಣ್ಣನ ನಿರೀಕ್ಷೆಯಿರಬಹುದು. ಎಷ್ಟೇ ಅಂದರೂ ಹೊಸ ಪಕ್ಷ ಕಟ್ಟುವ ಮಟ್ಟಕ್ಕೆ ಜನಾರ್ದನ ರೆಡ್ಡಿಯಾಗಲಿ, ಶ್ರೀರಾಮುಲು ಆಗಲಿ ಇಳಿಯಲಾರರೆಂದೇ ಕುಮಾರಸ್ವಾಮಿ ಲೆಕ್ಕ ಹಾಕಬಹುದು. ಆದರೆ ಜೈಲಲ್ಲಿ ಕೂತು ತನ್ನ ಗಾಯ ನೆಕ್ಕುತ್ತಿರುವ ಜನಾರ್ದನ ರೆಡ್ಡಿಯ ಲೆಕ್ಕಾಚಾರವೇ ಬೇರೆಯಿದೆ. ಅದು ಶ್ರೀರಾಮುಲುಗಷ್ಟೇ ಅಲ್ಲ ಇಡೀ ಗಣಿಕಳ್ಳರ ಗ್ಯಾಂಗಿಗೇ ಪಕ್ಕಾ ಗೊತ್ತಿರುವಂತಿದೆ. ಶ್ರೀರಾಮುಲು ಅಂತಃಪುರದಿಂದಲೇ ಬಂದ ಮಾಹಿತಿಯ ಪ್ರಕಾರ ಮುಂಬರುವ ವಿಧಾನಸಭೆ ಚುನಾವಣೆ ಹೊತ್ತಿಗೆ ಗಣಿಧೈತ್ಯರ ಮಾಸ್ಟರ್‌ಪ್ಲಾನ್ ರೆಡಿಯಾಗಿರುತ್ತದೆ. ಅದು ಪವರ್ ಡೀಲು. ಆ ಪ್ರಕಾರ ಗಣಿಕಳ್ಳರ ಪಕ್ಷಕ್ಕೆ 120 ಸೀಟು ಮತ್ತು ಜೆಡಿಎಸ್‌ಗೆ 100 ಸೀಟಂತೆ. ಇದನ್ನು ಒಪ್ಪಿಕೊಳ್ಳಲು ದೇವೇಗೌಡರಿಗೆ ಗಣಿ ಪಾರ್ಟಿಗಳಿಂದ ಮುನ್ನೂರು ಕೋಟಿ ಪಾರ್ಟಿ ಫಂಡು ಕೊಡುವುದಂತೆ!

-ರಾ.ಸೋಮನಾಥ್

ಈಗಾಗಲೇ ಗಣಿಕಳ್ಳರ ಟಿವಿ ಎಂದೇ ಚಾಲ್ತಿಯಲ್ಲಿರುವ ಜನಶ್ರೀ ಚಾನೆಲ್ಲಿನ ಹಾಗೆ ಪಕ್ಷಕ್ಕೂ ಅದೇ ಹೆಸರಿಟ್ಟರೆ ಹೇಗೆ? ಅಥವಾ 'ಕನ್ನಡ ನಾಡು' ಪಕ್ಷ ಎಂಬ ಹೆಸರಿಡಬಹುದೆ? ಏಕೆಂದರೆ 'ಈ ನಮ್ಮ ಕನ್ನಡನಾಡು' ಎಂಬ ದಿನಪತ್ರಿಕೆಯೊಂದು ಈಗಾಗಲೇ ಬಳ್ಳಾರಿ ಪ್ರಾಂತ್ಯದಲ್ಲಿ ಅಸ್ತಿತ್ವದಲ್ಲಿದೆ. ಕನ್ನಡ ಬರುತ್ತೋ ಇಲ್ಲವೋ ಅದಕ್ಕೂ ಜನಾರ್ದನ ರೆಡ್ಡಿಯೇ ಸಂಪಾದಕ. ಎಂಟು ಪುಟಗಳ ಪತ್ರಿಕೆಯೊಂದನ್ನು ಕೇವಲ ಒಂದು ರೂಪಾಯಿಗೆ ರಿಯಾಯಿತಿ ದರದಲ್ಲಿ ನೀಡಿದ ಹೆಗ್ಗಳಿಕೆ, ಯಾರೂ ಓದದೇ ಹೋದರೂ ಬಿಟ್ಟಿಗೆ ಹಂಚುವ ಔದಾರ್ಯದ ಕಾರಣಕ್ಕೋ ಅಥವಾ ಕೊಂದ ಪಾಪಕ್ಕೆ ತಿಂದು ಪರಿಹಾರ ಎಂಬಂತೆ ನೆಲಬಗೆದು ಅದಿರು ದೋಚಿದ ಪ್ರಾಯಶ್ಚಿತಕ್ಕಾಗಿ ಕನ್ನಡ ತಾಯಿಯ ಋಣ ಚುಕ್ತಾರ್ಥ ಕನ್ನಡ ಪತ್ರಿಕೆಯೊಂದನ್ನು ತಂದ ಪಾಪಪ್ರಜ್ಞೆಯೋ ಗೊತ್ತಿಲ್ಲ.

ಗಣಿಕಳ್ಳರ ಹೊಸ ಪಕ್ಷಕ್ಕೆ 'ಕನ್ನಡ ನಾಡು ಪಕ್ಷ' ಎಂಬ ಹೆಸರನ್ನೂ ಇಡುವ ದುರಾಲೋಚನೆ ಕೂಡ ಶ್ರೀರಾಮುಲುಗಿದೆಯಂತೆ!


ನಿಖರವಾಗಿ ಹೇಳಬೇಕೆಂದರೆ ಇಂಥ ಡೈಲಾಗುಗಳೆಲ್ಲ ಗಣಿ ಸಾಮ್ರಾಜ್ಯದ ಸೋಕಾಲ್ಡ್ ದಳಪತಿ ಶ್ರೀರಾಮುಲು ಬಾಯಿಂದ ಹೊರಬೀಳುತ್ತಿವೆಯಾದರೂ ಇದಕ್ಕೆಲ್ಲ ಮೆದುಳು ಮಾತ್ರ ಸದ್ಯ ಜೈಲು ಕಂಬಿಗಳ ಕೌಂಟಿಂಗ್ ಕಾಯಕದಲ್ಲಿರುವ ಜನಾರ್ದನ ರೆಡ್ಡಿಯೇ. ಹೊಸ ಪಕ್ಷ ಯಾರಿಗೆ ಬೇಕೋ ಬೇಡವೋ ಗೊತ್ತಿಲ್ಲ ಗಣಿಕಳ್ಳರಿಗಂತೂ ಬೇರೆ ದಾರಿಯೇ ಇಲ್ಲ.

ಅತ್ತ ಹೈದರಾಬಾದಿನ ಚಂಚಲಗುಡ ಜೈಲಿನಲ್ಲಿರುವ ಗಾಲಿ ಜನಾರ್ದನ ರೆಡ್ಡಿ ಸದ್ಯಕ್ಕೆ ಜೈಲಿಂದ ಹೊರಬರುವ ಯಾವುದೇ ಲಕ್ಷಣಗಳಿಲ್ಲ. ಅಷ್ಟರೊಳಗೆ ಶ್ರೀರಾಮುಲು, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ, ಕಂಪ್ಲಿ ಶಾಸಕ ಸುರೇಶ್ ಬಾಬು, ಕೂಡ್ಲಿಗಿಯ ನಾಗೇಂದ್ರ; ಇತ್ಯಾದಿ ಅರ್ಧ ಡಜನ್ ಗಣಿ ಶಾಸಕರು ಕೂಡ ಜೈಲು ಪಾಲಾದರೆ ಯಾವುದೇ ಅಚ್ಚರಿಯಿಲ್ಲ. ಹಾಗಾಗಬಾರದು ಅಂದರೆ ಕೇಂದ್ರದ ಕಾಂಗ್ರೆಸ್ಸನ್ನು ಒಲೈಸಬೇಕು. ತಾವು ರಾಜ್ಯದ ಬಿಜೆಪಿ ಸರ್ಕಾರವನ್ನು ಉಚ್ಚಾಟಿಸುತ್ತೇವೆಂದು ನಂಬಿಸಬೇಕು. ತಾವು ಬಿಜೆಪಿಯ ಜೊತೆಗಿಲ್ಲ ಎಂಬುದನ್ನು ಮೊದಲು ನಿರೂಪಿಸಬೇಕು. ಅದಕ್ಕೆ ಮುನ್ಸೂಚನೆಯೇ ಶ್ರೀರಾಮುಲು ಬಿಜೆಪಿಯ ಋಣ ಹರಿದುಕೊಂಡದ್ದು ಮತ್ತು ಪಕ್ಷೇತರನಾಗಿ ನಿಂತಿದ್ದು. ಮಾತು ಮಾತಿಗೆ ಶ್ರೀರಾಮುಲು ಜೈಲಲ್ಲಿರುವ ಗೆಳೆಯ ಜನಾರ್ದನ ರೆಡ್ಡಿಯ ಜೊತೆ ಮಾತಾಡುತ್ತೇನೆಂದೂ, ಆತನ ಸಲಹೆ ಪಡೆದ ನಂತರವೇ ಹೊಸ ಪಕ್ಷದ ಬಗ್ಗೆ ಯೋಚಿಸುತ್ತೇನೆಂದೂ, ಬಿಜೆಪಿಯಿಂದ ತಮಗಾದ ಅನ್ಯಾಯವನ್ನು ರಾಜ್ಯದ ಜನತೆಯ ಮುಂದೆ ಬಿಚ್ಚಿಡುತ್ತೇನೆಂದೂ ಏಕೆ ಹೇಳುತ್ತಿದ್ದಾನೆಂದರೆ ಅದು ಪರೋಕ್ಷವಾಗಿ ಕೇಂದ್ರದ ಕಾಂಗ್ರೆಸ್ ನಾಯಕತ್ವಕ್ಕೆ ರವಾನಿಸಬಯಸುವ ಸಿಗ್ನಲ್ಲುಗಳೇ ಹೊರತು ಮತ್ತೇನಲ್ಲ.

ಜೈಲಲ್ಲಿರುವ ಜನಾರ್ದನ ರೆಡ್ಡಿ ಹೊರಬರಬೇಕು ಅಂದರೆ, ಆತನ ಹಾಗೆ ಶ್ರೀರಾಮುಲು, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ ಮುಂತಾದವರೆಲ್ಲ ಜೈಲು ಪಾಲಾಗಬಾರದು ಅಂದರೆ, ಸಿಬಿಐ ಅಷ್ಟೂ ಗಣಿ ಖದೀಮರ ಸ್ಥಿರ ಚರಾಸ್ಥಿಗಳಿಗೆಲ್ಲ ಕೈ ಹಾಕದೇ ನಿಷ್ಕ್ರಿಯಗೊಳ್ಳಬೇಕೆಂದರೆ; ಗಣಿಗಳ್ಳರಿಗೆ ಉಳಿದಿರುವ ಏಕೈಕ ಮಾರ್ಗವೇ ಹೊಸ ಪಕ್ಷ!

ಮುಂಬರುವ ಲೋಕಸಭಾ ಚುನಾವಣೆಯ ಹೊತ್ತಿಗೆ ಆಂಧ್ರದಲ್ಲಿ ಹೇಗೆ ವೈ.ಎಸ್.ಆರ್. ಕಾಂಗ್ರೆಸ್ ಅಸ್ತಿತ್ವಕ್ಕೆ ಬರುತ್ತೋ ಹಾಗೆ ಕರ್ನಾಟಕದಲ್ಲಿ ಬಿಎಸ್‌ಆರ್ ಕಾಂಗ್ರೆಸ್ ಚಾಲ್ತಿಗೆ ಬರುತ್ತೆ ಎಂದು ಶ್ರೀರಾಮುಲು ತನ್ನ ಅಂತಃಪುರದಲ್ಲಿ ಕಾಗೆ ಹಾರಿಸಿದ್ದು ಸುಳ್ಳೇನಲ್ಲ. ಬಿಎಸ್‌ಆರ್ ಅಂದರೆ ಬಿ. ಶ್ರೀರಾಮುಲು ಎಂದರ್ಥವಂತೆ. ಕರ್ನಾಟಕದ ಜನ ಆಂಧ್ರದ ಹಾಗಲ್ಲ ಕಣ್ರೀ.... ತುಂಬಾ ಸೂಕ್ಷ್ಮ. ಇಂಥದ್ದನ್ನೆಲ್ಲ ಹುಚ್ಚಾಟ ಅಂದುಕೊಂಡ್ರೆ ಯಡವಟ್ಟು. ಅದಕ್ಕೇ ಕನ್ನಡನಾಡು ಅಥವಾ ಜನಾಶ್ರೀ ಪಾರ್ಟಿ ಅಂತ ಹೆಸರಿಟ್ಟರೆ ಗ್ಯಾರಂಟಿ ಸಕ್ಸಸ್ಸು ಕಣ್ರೀ.....! ಎಂದು ಯಾರೋ ಸಲಹೆ ಕೊಟ್ಟದ್ದಕ್ಕೆ, ಶ್ರೀರಾಮುಲು ತಲೆದೂಗಿದನಂತೆ. ಕನ್ನಡ ನಾಡು ಹೆಸರಿಗಿಂತಲೂ ಜನಾಶ್ರೀ ಅಥವಾ 'ಜನಶ್ರೀ' ಎಂಬ ಹೆಸರೇ ಆಪ್ಯಾಯಮಾನವಾಗಿ ಕಾಣಿಸಿತಂತೆ.

ಇದು ಗಣಿಕಳ್ಳರ ಲೇಟೆಸ್ಟ್ ಕಾರ್ಯತಂತ್ರವಾದರೆ ಇಂಥದೊಂದು ಕಾರ್ಯಾಚರಣೆಯ ಹಿಂದಿನ ಬೆಳವಣಿಗೆಗಳು ಇನ್ನೂ ಸ್ವಾರಸ್ಯಕರ. ಸದ್ಯ ಕುಮಾರಣ್ಣನ ಧೂತನಂತೆ ಶ್ರೀರಾಮುಲು ಪರವಹಿಸಿ ಬಳ್ಳಾರಿಯ ಕೌಲ್‌ಬಜಾರ್ ಏರಿಯಾದ ಸರಿಸುಮಾರು 16 ಸಾವಿರದಷ್ಟು ಮುಸ್ಲಿಮರ ಓಟುಗಳು ಕಾಂಗ್ರೆಸ್ಸಿಗಾಗಲಿ, ಬಿಜೆಪಿಗಾಗಲಿ ಹೋಗದಂತೆ ನೋಡಿಕೊಂಡ ಜಮೀರ್ ಅಹ್ಮದ್ ಇವತ್ತಲ್ಲಾ ನಾಳೆ ಇಡೀ ಗಣಿ ಧಣಿಗಳೆಲ್ಲ ಜೆಡಿಎಸ್‌ಗೆ ಬಂದೇ ಬಿಡುತ್ತಾರೆಂದು ನಂಬಿದ್ದಾನೆ. ಅದೇ ಭರವಸೆಯಲ್ಲೇ ಡಿಸೆಂಬರ್ 7 ರ ಬುಧವಾರ ಬೆಳಗ್ಗೆ ಶ್ರೀರಾಮುಲು ಪ್ರಮಾಣವಚನದ ಪ್ರಯುಕ್ತ ಬಸ್ಸುಗಟ್ಟಲೇ ಜನರನ್ನೂ ಸೇರಿಸಿದ್ದಾನೆ. ಇತ್ತ ಬಿಡದಿಯ ಈಗಲ್‌ಟನ್ ರೆಸಾರ್ಟ್‌ನಲ್ಲಿ ತನ್ನ ಪಕ್ಷದ ಶಾಸಕರನ್ನೆಲ್ಲ ಕಲೆಹಾಕಿದ ಕುಮಾರಸ್ವಾಮಿ ಕೂಡ ಶ್ರೀರಾಮುಲು ಜೆಡಿಎಸ್‌ಗೆ ಬರುವುದಾದರೆ ಅವರಿಗೆ ಹೃತ್ಪೂರ್ವಕ ಸ್ವಾಗತ.... ಇತ್ಯಾದಿಯಾಗಿ ಯಾವುದೋ ಲೆಕ್ಕಾಚಾರದಲ್ಲೇ ಸ್ಟೇಟ್‌ಮೆಂಟ್ ಹೊರಡಿಸಿದ್ದಾರೆ.



ಬಹುಶಃ ಜೆಡಿಎಸ್ ಬಿಟ್ಟರೆ ಗಣಿ ದೊರೆಗಳಿಗೆ ಬೇರೆ ದಾರಿಯಿಲ್ಲ ಎಂಬುದು ಕುಮಾರಣ್ಣನ ನಿರೀಕ್ಷೆಯಿರಬಹುದು. ಎಷ್ಟೇ ಅಂದರೂ ಹೊಸ ಪಕ್ಷ ಕಟ್ಟುವ ಮಟ್ಟಕ್ಕೆ ಜನಾರ್ದನ ರೆಡ್ಡಿಯಾಗಲಿ, ಶ್ರೀರಾಮುಲು ಆಗಲಿ ಇಳಿಯಲಾರರೆಂದೇ ಕುಮಾರಸ್ವಾಮಿ ಲೆಕ್ಕ ಹಾಕಬಹುದು. ಆದರೆ ಜೈಲಲ್ಲಿ ಕೂತು ತನ್ನ ಗಾಯ ನೆಕ್ಕುತ್ತಿರುವ ಜನಾರ್ದನ ರೆಡ್ಡಿಯ ಲೆಕ್ಕಾಚಾರವೇ ಬೇರೆಯಿದೆ. ಅದು ಶ್ರೀರಾಮುಲುಗಷ್ಟೇ ಅಲ್ಲ ಇಡೀ ಗಣಿಕಳ್ಳರ ಗ್ಯಾಂಗಿಗೇ ಪಕ್ಕಾ ಗೊತ್ತಿರುವಂತಿದೆ. ಶ್ರೀರಾಮುಲು ಅಂತಃಪುರದಿಂದಲೇ ಬಂದ ಮಾಹಿತಿಯ ಪ್ರಕಾರ ಮುಂಬರುವ ವಿಧಾನಸಭೆ ಚುನಾವಣೆ ಹೊತ್ತಿಗೆ ಗಣಿಧೈತ್ಯರ ಮಾಸ್ಟರ್‌ಪ್ಲಾನ್ ರೆಡಿಯಾಗಿರುತ್ತದೆ. ಅದು ಪವರ್ ಡೀಲು. ಆ ಪ್ರಕಾರ ಗಣಿಕಳ್ಳರ ಪಕ್ಷಕ್ಕೆ 120 ಸೀಟು ಮತ್ತು ಜೆಡಿಎಸ್‌ಗೆ 100 ಸೀಟಂತೆ. ಇದನ್ನು ಒಪ್ಪಿಕೊಳ್ಳಲು ದೇವೇಗೌಡರಿಗೆ ಗಣಿ ಪಾರ್ಟಿಗಳಿಂದ ಮುನ್ನೂರು ಕೋಟಿ ಪಾರ್ಟಿ ಫಂಡು ಕೊಡುವುದಂತೆ!

. ಯಾರಿಗುಂಟು ಯಾರಿಗಿಲ್ಲ? ಖರ್ಚಿಗೆ ಮುನ್ನೂರು ಕೋಟಿಯನ್ನು ಕೊಟ್ಟು 100 ಸೀಟುಗಳನ್ನು ಬಿಟ್ಟುಕೊಡುತ್ತೇವೆಂದರೆ ಕುಮಾರಣ್ಣನಲ್ಲ ಅವರಪ್ಪನೂ ಖಂಡಿತಾ ಒಪ್ಪಿಕೊಳ್ಳುತ್ತಾರೆಂಬ ಲೆಕ್ಕಾಚಾರ ಗಾಲಿರೆಡ್ಡಿಯದು. ಅದಕ್ಕೇ ಕುಮಾರಣ್ಣ ಶ್ರೀರಾಮುಲುವನ್ನು ಜೆಡಿಎಸ್‌ಗೆ ಆಹ್ವಾನಿಸುವ ಮಾತಾಡಿದರೆ ಶ್ರೀರಾಮುಲು ಆಹಿಂದ, ಪ್ರಾದೇಶಿಕ ಪಕ್ಷ ಎಂದೆಲ್ಲಾ ಭಿನ್ನ ರಾಗ ತೆಗೆಯುತ್ತಿದ್ದಾನೆ. ಹೇಗೂ ಉತ್ತರ ಕರ್ನಾಟಕದಲ್ಲಿ ಜೆಡಿಎಸ್‌ಗೆ ಹಿಡಿತವಿಲ್ಲ. ಆ ಭಾಗದಲ್ಲಿ ಗಣನೀಯ ಪ್ರಾಬಲ್ಯವಿರುವುದು ರೆಡ್ಡಿಗಳಿಗೇ. ಜೊತೆಗೆ ಬಿಎಸ್‌ಪಿ, ಕಮ್ಯುನಿಸ್ಟ್ ಪಕ್ಷಗಳು, ರೈತಸಂಘ, ದಲಿತ ಸಂಘಟನೆಗಳು, ವಾಟಾಳ್ ಇತ್ಯಾದಿಗಳಿಗೆಲ್ಲ ತಲಾ


ತಲಾ ಓಟು ಐನೂರರ ನೋಟು

ಶ್ರೀರಾಮುಲು ಗೆದ್ದದ್ದು, ತಾಕತ್ತು, ಸಪೋರ್ಟು, ಜನಬೆಂಬಲ ಎಂದೆಲ್ಲ ಯಾರೇನೇ ಅಂದರೂ ಅಲ್ಲಿ ರೊಕ್ಕ ಎಂಥ ಪಾತ್ರ ವಹಿಸಿದೆಯೆಂಬುದು ಎಲ್ಲರಿಗೂ ಗೊತ್ತು. ಆ ಕಾಲದಿಂದಲೂ ಗಣಿರೆಡ್ಡಿಗಳನ್ನು ವಿರೋಧಿಸಿಕೊಂಡೇ ಬಂದ ಬಳ್ಳಾರಿ ಜೆಡಿಎಸ್ ನಾಯಕ ಸೂರ್ಯನಾರಾಯಣ ರೆಡ್ಡಿ ಕೊನೇಗಳಿಗೆಯಲ್ಲಿ ಶ್ರೀರಾಮುಲು ಪರ ಪ್ರಚಾರಕ್ಕಿಳಿದದ್ದು, ದಿವಾಕರ್ ಬಾಬು ತಟಸ್ಥನಾಗಿದ್ದು, ಅನಿಲ್ ಲಾಡ್ ರೊಕ್ಕ ಬಿಚ್ಚದೇ ಹೋಗಿದ್ದು ಎಲ್ಲಕ್ಕೂ ಮೂಲ ಕಾರಣ ದುಡ್ಡು!



ಯಾರೆಲ್ಲ ಬಿಜೆಪಿ ನಾಯಕರು ಶ್ರೀರಾಮುಲು ವಿರುದ್ಧ ತೊಡೆತಟ್ಟಿದ್ದರೋ ಎಲೆಕ್ಷನ್ನಿಗೆ ಇನ್ನೆರಡು ದಿನ ಇರುವಂತೆ ನಾಪತ್ತೆಯಾಗಿದ್ದರು. ಮಾಜಿ ಸಂಸದ ಕೊಳೂರು ಬಸವನಗೌಡ ಮತ್ತು ಮಾಜಿ ಶಾಸಕ ಶಿವರಾಮ ರೆಡ್ಡಿ ಬಿಜೆಪಿ ಪಾಳಯದಲ್ಲಿ ಹಾರಾಡಿದ್ದೇ ಬಂತು. ಏನೇ ಪಕ್ಷನಿಷ್ಠೆ, ಪಾಲಿಟಿಕ್ಸು ಎಂದರೂ ಓಡಾಡಲು ಸ್ಕಾರ್ಪಿಯೋ ಗಾಡಿ ಕೊಟ್ಟು, ಮಂತ್ಲಿ ಖರ್ಚಿಗೆಂದು 25 ಸಾವಿರ ರೂಪಾಯಿ ಸಂಬಳ ಕೊಡುವ ಗಣಿ ರೆಡ್ಡಿಗಳ ಮುಂದೆ ಕೊಳೂರು, ಶಿವರಾಮ ರೆಡ್ಡಿಗೆ ಬಿಜೆಪಿ ಹಂಗು ಯಾವ ಲೆಕ್ಕ? ಗಾದಿಲಿಂಗಪ್ಪನ ಜೊತೆಗಿದ್ದೇ ಶ್ರೀರಾಮುಲು ಪರ ಜೈ ಎಂದ ಕೊಳೂರು ಮತ್ತು ಶಿವರಾಮ ರೆಡ್ಡಿಯಂಥವರನ್ನು ನಂಬಿ ಯಡ್ಡಿ ತಾನೇ ಏನು ಗುಡ್ಡೆ ಹಾಕಲು ಸಾಧ್ಯ?


ಒಂದು ಹಂತದಲ್ಲಿ ಹಣದ ಹೊಳೆಯನ್ನೇ ಹರಿಸಲು ಬಿಜೆಪಿ ಅಣಿಯಾಗಿತ್ತು. ಬಳ್ಳಾರಿಯ ಪ್ರಮುಖ ಬಿಜೆಪಿ ನಾಯಕರಿಗೆ ಹಣದ ಕಂತೆಗಳನ್ನು ಕೊಟ್ಟೂ ಆಗಿತ್ತು. ಯಾವತ್ತು ಲಿಂಗಾಯತರೆಲ್ಲಾ ಒಂದಾಗುತ್ತಿದ್ದಾರೆ ಎಂಬುದು ಬಳ್ಳಾರಿಯಲ್ಲಿ ಬಹಿರಂಗವಾಯಿತೋ ಉಳಿದೆಲ್ಲ ಜಾತಿಗಳು ಅನಿವಾರ್ಯವಾಗಿ ಶ್ರೀರಾಮುಲು ಬೆನ್ನಿಗೆ ನಿಲ್ಲಬೇಕಾಯ್ತು. ಅದು ಬಳ್ಳಾರಿಯ ಮಣ್ಣಿನ ಗುಣ. ಅಲ್ಲಿ ಲಿಂಗಾಯತರ ವಿರುದ್ಧ ಮಿಕ್ಕೆಲ್ಲಾ ಜಾತಿಗಳೂ ಪಕ್ಷಭೇದ ಮರೆಯುತ್ತಾರೆ. ಇದು ಗೊತ್ತಾಗಿದ್ದೇ ತಡ ಬಿಜೆಪಿಯ ನಾಯಕರೆಲ್ಲ ಬಂದ ದುಡ್ಡನ್ನು ಒಳಗೊಳಗೇ ನುಂಗಿಬಿಟ್ಟರು. ಪ್ರತಿ ಓಟಿಗೆ ಐನೂರರಂತೆ ಬಿಚ್ಚಿದ್ದು ಶ್ರೀರಾಮುಲು ಮಾತ್ರ. ಉಳಿದಂತೆ ಕಾಂಗ್ರೆಸ್ ಕೊಟ್ಟದ್ದು ಪ್ರತಿ ಓಟಿಗೆ ನೂರು ರೂಪಾಯಿ ಮಾತ್ರ.



ಇನ್ನು ಕಾಂಗ್ರೆಸ್ಸಿನಲ್ಲಿ ಕೊಂಡಯ್ಯನನ್ನು ಕಂಡರೆ ದಿವಾಕರ್ ಬಾಬುಗೆ ಆಗಲ್ಲ. ದಿವಾಕರ್ ಬಾಬು ತಲೆಕಂಡರೆ ಕೊಂಡಯ್ಯ ನಿಲ್ಲುವುದಿಲ್ಲ. ತಾನು ಹೇಳಿದವರಿಗಷ್ಟೇ ಮುಂದಿನ ಲೋಕಸಭೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೊಟ್ಟರೆ ಮಾತ್ರ ತಾನು ದುಡ್ಡು ಬಿಚ್ಚೋದು ಎಂದವನು ಅನಿಲ್ ಲಾಡ್. ಅಷ್ಟಕ್ಕೂ ಕಾಂಗ್ರೆಸ್ ಅಭ್ಯರ್ಥಿ ರಾಂಪ್ರಸಾದ್ ನಿನ್ನೆಮೊನ್ನೆ ತನಕ ದಿವಾಕರ್ ಬಾಬು ಜೊತೆಗಿದ್ದವನು ಈಗ ನಿಷ್ಠೆಯನ್ನು ಕೊಂಡಯ್ಯನತ್ತ ವರ್ಗಾಯಿಸಿದ್ದಾನೆ. ಹೀಗಾಗಿ ಕಾಂಗ್ರೆಸ್ಸಿನ ಮೂಲ ಓಟುಗಳ ಪೈಕಿ 3 ಸಾವಿರದಷ್ಟು ಕೈತಪ್ಪಿ ಹೋಯ್ತು. ಮುಸ್ಲಿಮರೇ ಕಾಂಗ್ರೆಸ್ ಕೈಹಿಡಿಯಲಿಲ್ಲ. ಕುರುಬರದ್ದೂ ಇದೇ ಪಾಡು. ಅವರಿಗೊಬ್ಬ ನಾಯಕನೇ ಇರಲಿಲ್ಲ. ಕೊನೆಕೊನೆಯಲ್ಲಿ ಲಿಂಗಾಯತರ ವಿರುದ್ಧ ಮಿಕ್ಕೆಲ್ಲಾ ಜಾತಿಗಳು ಕೈಜೋಡಿಸುತ್ತಿರುವುದನ್ನು ಗಮನಿಸಿದ ಅನೇಕ ಲಿಂಗಾಯಿತ ಹಳ್ಳಿಗಳೇ ಬಿಜೆಪಿಗೆ ಉಲ್ಟಾ ಹೊಡೆದು ಶ್ರೀರಾಮುಲು ಬೆನ್ನಿಗೆ ನಿಂತವು.


ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಏನೇ ವೀರಾವೇಶದ ಭಾಷಣಗೈದರೂ ಗ್ರೌಂಡ್ ರಿಯಾಲಿಟಿಯೇ ಬೇರೆಯಿತ್ತು. ಶ್ರೀರಾಮುಲು ಬಿಚ್ಚಿದ ರೊಕ್ಕದ ಮುಂದೆ ಎಲ್ಲರ ಲೆಕ್ಕಾಚಾರವೂ ತಲೆ ಕೆಳಗಾಗಿತ್ತು.

ಒಕ್ಕಲಿಗ+ವಾಲ್ಮೀಕಿ+ರೆಡ್ಡಿ=?



ಹೇಗೆ ಮೈಸೂರು ಪ್ರಾಂತ್ಯದ ಒಕ್ಕಲಿಗರಿಗೆ ದೇವೇಗೌಡರು ಅನಿವಾರ್ಯವೋ ಹಾಗೆ ಉತ್ತರ ಕರ್ನಾಟಕದಲ್ಲಿ ಗಣನೀಯವಾಗಿರುವ ಬೇಡ ವಾಲ್ಮೀಕಿ ನಾಯಕರಿಗೆ ತಾನು ಅನಿವಾರ್ಯ ನಾಯಕನಾಗಬೇಕೆಂಬುದು ಶ್ರೀರಾಮುಲು ಲೆಕ್ಕಾಚಾರ. ಹೇಗೂ ಸಿದ್ದರಾಮಯ್ಯ ಈಗ ಅಹಿಂದದಲ್ಲಿ ಸಕ್ರಿಯವಾಗಿಲ್ಲ, ತಾನು ಆ ಸ್ಥಾನವನ್ನು ಹಿಡಿದರೆ ಕೇವಲ ವಾಲ್ಮೀಕಿ ಜನಾಂಗಕ್ಕಷ್ಟೇ ಅಲ್ಲ, ಬೋವಿಗಳು, ದಲಿತರು, ಮುಸ್ಲಿಮರು, ಉಪ್ಪಾರರು ಇತರೇ ಸಣ್ಣಪುಟ್ಟ ಜಾತಿಗಳನ್ನೂ ಆಕರ್ಷಿಸಬಹುದೆಂಬುದು ಆತನ ನಿರೀಕ್ಷೆ. ಆದಕ್ಕೆಂದೇ ಮಾತುಮಾತಿಗೆ ಅಹಿಂದ, ವಿಚಾರವಾದಿಗಳು, ಬುದ್ಧಿಜೀವಿಗಳು, ಮುಸ್ಲಿಮರು ಎಂದೆಲ್ಲ ಪದಪಂಕ್ತಿ ಉದುರಿಸುತ್ತಾನೆ. ಇದು ಎಷ್ಟರಮಟ್ಟಿಗೆ ಫಲಕೊಡುತ್ತೋ ಗೊತ್ತಿಲ್ಲ. ಆದರೆ ರೊಕ್ಕವಿದೆಯಲ್ಲ ಅದು ಖಂಡಿತ ಮಾತಾಡುತ್ತದೆ!


ಸದ್ಯ ಶ್ರೀರಾಮುಲು ಪಾಲಿಗೆ ಹೇಗೆ ಗಾಲಿರೆಡ್ಡಿ ಗಾಡ್‌ಫಾದರೋ ಅದೇರೀತಿ ಅಹಿಂದ, ದಲಿತರು, ಪ್ರಾದೇಶಿಕ ಪಕ್ಷ, ವಿಚಾರವಾದಿಗಳ ಜೊತೆ ಚರ್ಚೆ ಇತ್ಯಾದಿಗಳಿಗೆಲ್ಲ ಆತ ಅವಲಂಭಿಸಿರುವುದು ಅಹಿಂದದ ಮಾಜಿ ನಾಯಕರನ್ನು. ಜನಶ್ರೀ ಚಾನೆಲ್‌ನಲ್ಲಿನ ರೂವಾರಿ ಅನಂತ್ ಚಿನಿವಾರರ ಮೂಲಕ ಪದೇಪದೇ ಆ ನಾಯಕರನ್ನೆಲ್ಲ ಬರಮಾಡಿಕೊಂಡು ಶ್ರೀರಾಮುಲು ಟ್ಯೂಷನ್ ಪಡೆಯುತ್ತಿರುವುದು ಗುಟ್ಟೇನಲ್ಲ. ಉತ್ತರ ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ, ರಾಯಚೂರು, ಕೊಪ್ಪಳ, ಗದಗ ಗೋಕಾಕ್‌ನಿಂದ ಹಿಡಿದು ಗುಲ್ಬರ್ಗಾದ ತನಕ ಗಣನೀಯವಾಗಿರುವ ವಾಲ್ಮೀಕಿ ಬೇಡರೆಲ್ಲ ಸಹಜವಾಗೇ ಶ್ರೀರಾಮುಲು ಬೆನ್ನಿಗೆ ನಿಲ್ಲುತ್ತಾರೆ. ಉಳಿದಂತೆ ಗಡಿಭಾಗದ ರೆಡ್ಡಿಗಳನ್ನು ಜನಾರ್ದನ ರೆಡ್ಡಿ ಆಕರ್ಷಿಸಬಲ್ಲ. ಇತ್ತ ದಕ್ಷಿಣ ಕರ್ನಾಟಕದ ಅದರಲ್ಲೂ ಮೈಸೂರು ಪ್ರಾಂತ್ಯದಲ್ಲಿ ಒಕ್ಕಲಿಗರೆಲ್ಲ ದೇವೇಗೌಡ-ಕುಮಾರಣ್ಣನ ಜೊತೆ ನಿಂತರೆಂದರೆ ಕರ್ನಾಟಕದ ರಾಜಕೀಯದ ಮಟ್ಟಿಗೆ ಹೊಸ ಸಾಮಾಜಿಕ ಸಮೀಕರಣವೊಂದು ರೂಪುಗೊಳ್ಳುತ್ತದೆ. ಆಂಧ್ರಮೂಲದ ರೆಡ್ಡಿಗಳ ಜೊತೆ ವಾಲ್ಮೀಕಿ ಬೇಡರು, ಇವರ ಜೊತೆ ನೊಗ ಹೊರಲು ಒಕ್ಕಲಿಗರು. ಕಾದು ನೋಡಬೇಕಷ್ಟೆ.




ಒಂದೋ ಎರಡೋ ಸೀಟನ್ನು ಬಿಟ್ಟುಕೊಟ್ಟರೂ ಜೆಡಿಎಸ್‌ನ ನೂರು ಸೀಟುಗಳಿಗೆ ಏನೂ ಭಂಗವಿಲ್ಲ. ತಮಗಿಂತ ಅಧಿಕ ಸ್ಥಾನಗಳಿಗೆ ಗಣಿಪಕ್ಷ ಸ್ಪರ್ಧಿಸಿದರೂ ಉತ್ತರ ಕರ್ನಾಟಕ ಲಿಂಗಾಯತರು ಯಡ್ಡಿಯ ಕೈಬಿಡುವುದಿಲ್ಲವಾದ್ದರಿಂದ ಮೈಸೂರು ಪ್ರಾಂತ್ಯದಲ್ಲಿ ಜೆಡಿಎಸ್ ಗಳಿಸುವ ಸ್ಥಾನಗಳಿಗಿಂತ ಹೆಚ್ಚಿಗೆ ಗಳಿಸಲು ಸಾಧ್ಯವೇ ಇಲ್ಲ. ಯಾರಿಗೆ ಅಧಿಕ ಸೀಟು ಬರುತ್ತೋ ಅವರಿಗೇ ಸಿಎಂಗಿರಿ ಎಂಬ ಸೂತ್ರದ ಮೇಲೆ ತಮ್ಮದೇ ಸರ್ಕಾರವೆಂದು ಲೆಕ್ಕಹಾಕುವ ದೇವೇಗೌಡರು ಬೇರೇನಕ್ಕೆ ಅಲ್ಲದಿದ್ದರೂ 300 ಕೋಟಿಯ ಆಸೆಗೆ ಬಿದ್ದು ತಮ್ಮ ಷರತ್ತುಗಳನ್ನು ಖಂಡಿತಾ ಒಪ್ಪುತ್ತಾರೆಂದೇ ಗಾಲಿ ರೆಡ್ಡಿ ಭಾವಿಸಿದ್ದಾನೆ. ಇದೇ ಹೊತ್ತಿಗೆ ಆಂಧ್ರದಲ್ಲಿ ಜಗನ್ ನೇತೃತ್ವದಲ್ಲಿ ವೈಎಸ್‌ಆರ್ ಕಾಂಗ್ರೆಸ್ಸೂ ಕಣಕ್ಕಿಳಿದಿರುತ್ತದೆ. ಆಂಧ್ರ ಮತ್ತು ಕರ್ನಾಟಕ ಸೇರಿ ಗಣಿಕೂಟದ ಕನಿಷ್ಠ ಮೂವತ್ತು ಸಂಸದರು ಗೆದ್ದು ಬಂದರೂ ಮುಂದೆ ಕೇಂದ್ರದಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದರೂ ಅಥವಾ ಬಿಜೆಪಿ ಕೂಟವೇ ಮೆಜಾರಿಟಿ ಸಾಧಿಸಿದರೂ ತಮ್ಮ ಕೂಟದ ಬೆಂಬಲ ಅನಿವಾರ್ಯವಾಗಲೇಬೇಕು. ಆಗ ತಮ್ಮ ಮೇಲೆ ಸಿಬಿಐ ಹಾಕಿದ ಕೇಸು, ಜಪ್ತಿಗೊಂಡ ಸೊತ್ತು ಇತ್ಯಾದಿಗಳೆಲ್ಲದರಿಂದಲೂ ಮುಕ್ತರಾಗಬಹುದೆಂಬ ಲೆಕ್ಕಾಚಾರ ಗಾಲಿ ರೆಡ್ಡಿಗಿದೆ.

ಎಷ್ಟೆಂದರೂ ಕೇಂದ್ರ ಸಚಿವ ವೀರಪ್ಪ ಮೊಯ್ಲಿ ಜೊತೆಗೆ ಜಗನ್ ರೆಡ್ಡಿಗೆ ಆತ್ಮೀಯತೆಯಿದೆ. ಹಿಂದೆ ವೈಎಸ್‌ಆರ್ ಮುಖ್ಯಮಂತ್ರಿಯಾಗಿದ್ದಾಗ ಆಂಧ್ರದ ಉಸ್ತುವಾರಿಯಲ್ಲಿದ್ದದ್ದು ಇದೇ ಮೊಯ್ಲಿ. ವೈಎಸ್‌ಆರ್ ಮತ್ತು ಮೊಯ್ಲಿ ಗೆಳೆತನದ ಆಳ ಅಗಲವನ್ನು ಚೆನ್ನಾಗಿ ಬಲ್ಲ ಜಗನ್‌ಮೋಹನ್ ರೆಡ್ಡಿ ಮತ್ತು ಗಾಲಿ ರೆಡ್ಡಿಗೆ ಮೊಯ್ಲಿ ಜೊತೆ ಹೇಗೆ ಡೀಲು ಕುದುರಿಸಬೇಕೆಂಬ ಕಲೆ ಕರಗತವಾಗಿದೆ. ಈಗ ಸಿಬಿಐ ಗಣಿರೆಡ್ಡಿಯನ್ನು ಹಿಡಿದು ಜೈಲಿಗೆ ದಬ್ಬಿದ್ದು, ಗಣಿಲೂಟಿಯ ಪಾಲುದಾರ ಎಂದೇ ಆಂಧ್ರದ ಐಎಎಸ್ ಅಧಿಕಾರಿ ಶ್ರೀಲಕ್ಷ್ಮಿಯನ್ನು ಬಂಧಿಸಿದ್ದು, ಜನಾರೆಡ್ಡಿಯ ಐಷಾರಾಮಿ ಉಪಕರಣಗಳನ್ನೆಲ್ಲ ಜಪ್ತಿ ಮಾಡಿದ್ದು ಮೇಲ್ನೋಟಕ್ಕೆ ಕೋರ್ಟ್ ಆದೇಶದ ಮೇರೆಗೆ ಆದರೂ ಇದು ರಾಜ್ಯ ಬಿಜೆಪಿಯನ್ನು ಹಣಿಯಲು ಗಣಿರೆಡ್ಡಿಗಳ ಬಾಲ ಕತ್ತರಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಕೈಗೊಂಡ ಪ್ರೊಸೆಸ್ ತಂತ್ರವೇ ಎಂದು ಗಾಲಿರೆಡ್ಡಿ ನಂಬಿದ್ದಾನೆ.

ಏಕೆಂದರೆ ಆಂಧ್ರದಲ್ಲಿ ಬಂಡೆದ್ದ ಜಗನ್‌ರೆಡ್ಡಿಯನ್ನು ಕಾಂಗ್ರೆಸ್ ಪಳಗಿಸುತ್ತಿರುವುದು ಇದೇ ಶೈಲಿಯಲ್ಲಿ, ಅದೇರೀತಿ ತನ್ನನ್ನು ಕೇಂದ್ರ ಪಳಗಿಸಲೆತ್ನಿಸುತ್ತಿದೆ ಎಂದು ಸಿಕ್ಕ ಪಾಳದಷ್ಟು ದಕ್ಕಿನಲ್ಲಿ ಗಣಿರೆಡ್ಡಿ ಜೊತೆಗೆ ಯಡ್ಡಿ ಮೇಲೆ ಗಾಲಿ ರೆಡ್ಡಿಗೆ ವಿಪರೀತ ಸಿಟ್ಟಿದೆ. ಆದರೆ ನೇರವಾಗಿ ಬಿಜೆಪಿ ಸರ್ಕಾರವನ್ನೂ ಮೇಲೆಳೆದುಕೊಳ್ಳುವಂತಿಲ್ಲ; ಈಗಾಗಲೇ ಬಳ್ಳಾರಿ ಸಾಮ್ರಾಜ್ಯದ ಜಿಲ್ಲಾಧಿಕಾರಿ, ಎಸ್ಪಿ ಸಹಿತ ರೆಡ್ಡಿಗಳು ನೇಮಿಸಿಕೊಂಡಿದ್ದ ಬಹುತೇಕ ಅಧಿಕಾರಿಗಳನ್ನು ಸರ್ಕಾರ ಎತ್ತಂಗಡಿ ಮಾಡಿದೆ. ಹಾಗಂತ ಏಕಾಏಕಿ ರಾಜ್ಯ ಸರ್ಕಾರದ ಬುಡಕ್ಕೂ ಕೈಹಾಕುವಂತಿಲ್ಲ. ಹಾಕಿದ್ದೇ ಆದಲ್ಲಿ ಸದಾನಂದಗೌಡರ ಸರ್ಕಾರ ಸುಮ್ಮನೇ ಬಿಡುವುದಿಲ್ಲ! ಜೊತೆಗೆ ಕೇಂದ್ರದ ಕಾಂಗ್ರೆಸ್ ಜೊತೆಗೆ ಇನ್ನೂ ಪಕ್ಕಾ ಒಪ್ಪಂದವಾಗಿಲ್ಲ, ಅದಕ್ಕಿನ್ನೂ ಕಾಲ ಕೂಡಿಬರಬೇಕು. ಅತ್ತ ಕಾಂಗ್ರೆಸ್ಸು, ಇತ್ತ ಬಿಜೆಪಿ ಎರಡನ್ನೂ ಒಟ್ಟೊಟ್ಟಿಗೆ ಮೇಲೆಳೆದುಕೊಂಡರೆ ತಮ್ಮ ಪಾಡೇ ಹೀನಾಯ. ಹೀಗಾಗಿ ಇಬ್ಬರಿಂದಲೂ ನಿರ್ದಿಷ್ಟ ಅಂತರವೊಂದನ್ನು ಕಾಯ್ದುಕೊಳ್ಳಬೇಕು.



ಬಿಜೆಪಿಯ ಕತೆ ಮುಗಿಸಲು ತಮ್ಮನ್ನು ಬಳಸಿಕೊಳ್ಳಬೇಕೆಂದು ಕಾಂಗ್ರೆಸ್ಸಿಗೂ ಸಂದೇಶ ರವಾನೆಯಾಗಬೇಕು ಮತ್ತು ಏಕಾಏಕಿ ಬಿಜೆಪಿ ತಮ್ಮನ್ನು ಮುಗಿಸದ ಹಾಗೆಯೂ ನಿಲ್ಲಿಸಬೇಕು. ಇದ್ದಕ್ಕಿದ್ದಂತೆ ಜೆಡಿಎಸ್ ಸೇರಿಕೊಂಡರೆ ಲಾಭ ಇನ್ನೂ ಕಮ್ಮಿ. ಏಕೆಂದರೆ ದೇವೇಗೌಡರಿಗೆ ಅವರದೇ ಆದ ಹಿತಾಸಕ್ತಿ, ಲೆಕ್ಕಾಚಾರ ಇದ್ದೇ ಇದೆ. ಅದನ್ನೆಲ್ಲ ಬಿಟ್ಟು ತಮ್ಮನ್ನು ರಕ್ಷಿಸಲು ಜೆಡಿಎಸ್ ಆಗಲಿ ಕುಮಾರಸ್ವಾಮಿಯಾಗಲಿ ಏಕೆ ತಲೆಕೆಡಿಸಿಕೊಳ್ಳುತ್ತಾರೆ? ಇದಕ್ಕೆಲ್ಲ ಒಂದೇ ಮದ್ದೆಂದರೆ ತಮ್ಮದೇ ಪ್ರತ್ಯೇಕ ಪಕ್ಷವೊಂದನ್ನು ಸ್ಥಾಪಿಸುವುದು. ಅದಕ್ಕೆಂದು ಸಾವಿರ ಕೋಟಿ ಕೈಬಿಟ್ಟರೂ ಸರಿ. ಮುಂಬರುವ ಚುನಾವಣೆಯಲ್ಲಿ ಪ್ರತಿ ಕ್ಷೇತ್ರಕ್ಕೆ ಕನಿಷ್ಠ ಐದು ಕೋಟಿ ಎತ್ತಿಟ್ಟರೂ ಅದು 600 ಕೋಟಿ ಮೀರುವುದಿಲ್ಲ. ಜೆಡಿಎಸ್‌ಗೆಂದು ಕೊಡುವ 300 ಕೋಟಿ ಸೇರಿದರೆ ಒಟ್ಟು 900 ಕೋಟಿಯಾಗುತ್ತದೆ. ಉಳಿದಂತೆ ಜಾಹೀರಾತು, ಮೀಡಿಯಾ, ಇತ್ಯಾದಿಗಳ ಖರ್ಚು ಎಂದರೂ ಅದು ನೂರು ಕೋಟಿಯ ಒಳಗೇ!




ಸಾವಿರ ಕೋಟಿ ಸುರಿದು ಜೆಡಿಎಸ್ ನಲವತ್ತೋ ಐವತ್ತೋ ಗೆದ್ದು ತಾವು ಅರವತ್ತೋ ಎಪ್ಪತ್ತೋ ಸೀಟುಗಳನ್ನು ಹಿಡಿದರೆ ಖಂಡಿತಾ ತಮ್ಮದೇ ಸರ್ಕಾರ. ಆಂಧ್ರದಲ್ಲಿ ಜಗನ್ ಗುಂಪು ಒಂದಿಪ್ಪತ್ತು ಎಂಪಿಗಳನ್ನು ಗೆಲ್ಲಿಸಿಕೊಂಡು ಇತ್ತ ಕರ್ನಾಟಕದಲ್ಲಿ ತಾವು ಕನಿಷ್ಠ ಹತ್ತನ್ನು ವಶಪಡಿಸಿಕೊಂಡರೂ ಅದು 30 ಮಂದಿ ಸಂಸದರ ತಂಡವಾಗುತ್ತದೆ. ಜೊತೆಗೆ ಜೆಡಿಎಸ್ ಕನಿಷ್ಠ ಐದರಲ್ಲಿ ಗೆದ್ದರೂ ಕೇಂದ್ರದ ವಿಷಯಕ್ಕೆ ಬಂದಾಗ ತಮ್ಮ ಹಂಗನ್ನು ತೊರೆಯಲು ಸಾಧ್ಯವೇ ಇಲ್ಲ. ಆಗ ಬಿಜೆಪಿಯೇ ಮೆಜಾರಿಟಿ ಸಾಧಿಸಲಿ ಅಥವಾ ಕಾಂಗ್ರೆಸ್ ಕೂಟವೇ ಮುಂದಿರಲಿ ಎತ್ತಿಂದೆತ್ತ ಬಂದರೂ ತಮ್ಮನ್ನು ಅವಲಂಬಿಸಲೇಬೇಕು. ಆಗ ತಮ್ಮ ವಿರುದ್ಧ ಸಿಬಿಐ ಅನ್ನು ನಿಷ್ಕ್ರಿಯಗೊಳಿಸುವ ಷರತ್ತಿಟ್ಟರೆ ತಮ್ಮೆಲ್ಲಾ ಬಾರಾಖೂನ್ ಮಾಫಿಗೊಂಡಂತೆಯೇ. ದೋಚಿದ 20 ಸಾವಿರ ಕೋಟಿಯಲ್ಲಿ ಎಷ್ಟನ್ನು ದಕ್ಕಿಸಿಕೊಂಡರೂ ಲಾಭ ತಾನೆ?

ಇಂಥದೊಂದು ಲೆಕ್ಕ ಹಾಕಿಯೇ ಗಾಲಿ ಜನಾರ್ದನ ರೆಡ್ಡಿ ಜೈಲಿಂದ ಪಗಡೆ ಆಡುತ್ತಿದ್ದರೆ ಅದಕ್ಕೆ ಶ್ರೀರಾಮುಲು ಕೇವಲ ದಾಳವಷ್ಟೆ. ಕಾಂಗ್ರೆಸ್ಸನ್ನು ಪಳಗಿಸಲು ಬಿಜೆಪಿಯನ್ನು ಗುರಾಣಿ ಹಿಡಿಯುವುದು ಬಿಜೆಪಿಯನ್ನು ಬೆದರಿಸಲು ಸರ್ಕಾರವನ್ನೇ ಬೀಳಿಸುವ ಆಟ ತೋರಿಸುವುದು ರೆಡ್ಡಿಗಳ ತಂತ್ರ. ಮಾಡಿದ ಪಾಪವನ್ನು ಮುಚ್ಚಿಕೊಳ್ಳಬೇಕೆಂದರೆ ಅದಕ್ಕೆ ಸಾವಿರ ಕೋಟಿಯನ್ನಾದರೂ ಸುರಿಯಲೇಬೇಕಲ್ಲವೇ?

ಇಲ್ಲದಿದ್ದರೆ ಶ್ರೀರಾಮುಲು ನನ್ನ ಮಿತ್ರ ಜನಾರ್ದನ ರೆಡ್ಡಿ ಜೈಲಿಂದ ಬಂದ ನಂತರವೇ ಮುಂದಿನ ಹೆಜ್ಜೆ ಎಂದು ಏಕೆ ಹೇಳುತ್ತಾನೆ? ಹೊಸ ಪಕ್ಷ ಕಟ್ಟಿದ ಯಾರೂ ಉದ್ಧಾರವಾಗಿಲ್ಲ ಎಂಬುದನ್ನು ಸುಳ್ಳು ಮಾಡಿ ತೋರಿಸುತ್ತೇನೆ ಎಂದು ಏಕೆ ಹಠಕ್ಕೆ ಬೀಳುತ್ತಾನೆ. ಸದ್ಯ ಚೆಂಡಿರುವುದು ಮಾತ್ರ ಕೇಂದ್ರದ ಕಾಂಗ್ರೆಸ್ ಅಂಗಳದಲ್ಲೇ. ಸಿಬಿಐ ಉರುಳು ಬಿಗಿಯಾದಷ್ಟೂ ರೆಡ್ಡಿ ಬಾಯಿ ಬಿಡುತ್ತಾನೆ. ಕಾಂಗ್ರೆಸ್ ಡೀಲು ಕುದುರಿದ ಹಾಗಿಲ್ಲ, ಅದು ಅಖೈರುಗೊಂಡ ನಂತರವೇ ಸಿಬಿಐ ಮುಷ್ಟಿ ಸಡಿಲಗೊಳ್ಳುತ್ತದೆ. ಅಥವಾ ಹಾಗಾಗುವಂತೆ ಒಲೈಸಲು ರೆಡ್ಡಿಯೇ ದಾಳ ಉರುಳಿಸಬಹುದು. ಅದು ಸರ್ಕಾರವನ್ನೇ ಬೀಳಿಸುತ್ತಾ? ಹೊಸ ಪಕ್ಷ ಸ್ಥಾಪನೆಗೊಂಡ ನಂತರವೇ ರೆಡ್ಡಿ ಸರ್ಜರಿಗೆ ಕೈಯಿಡುತ್ತಾನಾ? ಅದರ ವಿರುದ್ಧ ಯಡ್ಡಿ ಯಾವ ಆಪರೇಷನ್ನಿಗೆ ಕೈಹಾಕಬಹುದು? ರೆಡ್ಡಿ ವಿರುದ್ಧದ ಯಡ್ಡಿಯ ಸಿಟ್ಟು ಎಲ್ಲಿಗೆ ಬಂದು ನಿಲ್ಲಬಹುದು? ಈ ಮಧ್ಯೆ ಕುಮಾರಸ್ವಾಮಿ ಇನ್ನೆಂಥ ಆಟಕ್ಕಿಳಿಯಬಹುದು?

ಗಣಿ ಪಾಪದಲ್ಲೇ ಅಧಿಕಾರ ಹಿಡಿದ ಬಿಜೆಪಿ ಅದೇ ಪಾಪಕ್ಕಾಗಿ ಈಗ ದಂಡ ಕಟ್ಟಲೇಬೇಕು.

ಕಾಂಗ್ರೆಸ್ಸಿನ ಪಟಾಕಿ ಕುಮಾರಣ್ಣನ ಕೈಯಲ್ಲಿ ಬೆಂಕಿ!



ರೇವಣ್ಣ


ಸೋಮಣ್ಣ

ನೋಡ್ತಾ ಇರಿ, ಹೊಸ ವರ್ಷದ ಹೊತ್ತಿಲಲ್ಲೇ ಬಿಜೆಪಿಗೆ ಚಂದ್ರಗ್ರಹಣ ಶುರುವಾಗ್ತದೆ. ಬೇರೆಯವರ ತಟ್ಟೆಗೆ ಕೈಹಾಕೋದಿರಲಿ ಮೊದಲು ತಮ್ಮ ಬುಡ ಸರಿಯಾಗಿದೆಯಾ ನೋಡಿಕೊಳ್ಳಲಿ.... ಇತ್ಯಾದಿಯಾಗಿ ಮಣ್ಣಿನ ಮಗ ರೇವಣ್ಣ ಬಿಡದಿ ರೆಸಾರ್ಟಿನಲ್ಲಿ ಗುಟುರು ಹಾಕಿದ್ದಕ್ಕೂ ಕಾರಣವಿದೆ. ಶ್ರೀರಾಮುಲು ಪಡೆ ಎಲ್ಲಿ ಸರ್ಕಾರಕ್ಕೆ ಕಂಟಕವಾಗುತ್ತೋ ಎಂದು ಮುಂಜಾಗ್ರತಾ ಕ್ರಮವಾಗಿ ಯಡ್ಡಿ ಗ್ಯಾಂಗ್ ಜೆಡಿಎಸ್‌ನ ಐವರು ಶಾಸಕರಿಗೆ ಬಲೆ ಬೀಸಿತ್ತು. ಚಿತ್ರದುರ್ಗದ ಬಸವರಾಜನ್, ರಾಮನಗರದ ರಾಜು, ಮಾಗಡಿಯ ಬಾಲಕೃಷ್ಣ ಮುಂತಾದ ಜೆಡಿಎಸ್ ಶಾಸಕರಿಗೆಲ್ಲ ಯೋಗೀಶ್ವರ್ ಮತ್ತು ಸೋಮಣ್ಣ ಗಾಳ ಹಾಕಿದ್ದೂ ಉಂಟು. ಬಹುಶಃ ರೇಟು ಕುದುರಲ್ಲಿಲ್ಲವೇನೋ. ಮಾತೆತ್ತಿದರೆ ಐದು ಕೋಟಿ, ಹತ್ತು ಕೋಟಿ ಲೆಕ್ಕದಲ್ಲಿ ಚೌಕಾಶಿಗಿಳಿದ ಬಸವರಾಜನ್ ಥರದವರ ದುರಾಶೆ ಕಂಡೇ ಯಡ್ಡಿಗೆ ಅಸಹ್ಯ ಹುಟ್ಟಿದೆ. ಅದರ ಬದಲು ಬಳ್ಳಾರಿ ಗ್ಯಾಂಗಿಗೇ ಇನ್ನಷ್ಟು ಆಮಿಷ ಒಡ್ಡಿದರಾಯ್ತು ಎಂದು ಲೆಕ್ಕ ಹಾಕಿರಬೇಕು. ತಕ್ಕ ರೇಟು ಸಿಕ್ಕರೆ ಈಗಲೂ ಬೇಲಿ ಹಾರಲು ಜೆಡಿಎಸ್‌ನ ಒಂದು ಗುಂಪು ರೆಡಿಯಂತೆ!

ಇದು ಗೊತ್ತಾಗಿದ್ದೇ ತಡ ಹುಷಾರಾದ ಕುಮಾರಸ್ವಾಮಿ ಬಿಡದಿಯ ಈಗಲ್‌ಟನ್‌ನಲ್ಲಿ ಶಾಸಕರ ಪಂಚಾಯ್ತಿ ಶುರುಹಚ್ಚಿಕೊಂಡರೆ ಅಲ್ಲಿಗೆ ಬಂದ ಅಣ್ಣ ರೇವಣ್ಣ ಇನ್ನೆಂಥದೋ ಸ್ಕೆಚ್ಚು ಹಾಕಿದ್ದಾನೆ. ಆ ಪ್ರಕಾರ ಶ್ರೀರಾಮುಲು ಮುಂದೆ ಬಿಡುವುದು ಮತ್ತು ಸಾಧ್ಯವಾದಷ್ಟು ಬಿಜೆಪಿ ಶಾಸಕರಿಗೆ ಗಾಳ ಹಾಕುವುದು. ಹೇಗಿದ್ದರೂ ಹೊಸಪೇಟೆ ಶಾಸಕ ಆನಂದ್‌ಸಿಂಗ್ ಕುಮಾರಣ್ಣನ ಪರಮಾಪ್ತ. ಜೊತೆಗೆ ಗೂಳಿಹಟ್ಟಿ, ಶಿವನಗೌಡ ನಾಯಕ, ಪಾವಗಡ ವೆಂಕಟರಮಣಪ್ಪ, ಬಾಲಚಂದ್ರ ಜಾರಕಿಹೊಳಿ ಕೈಗೊಡಿಸಿದರೆಂದರೆ ಉಳಿಯುವುದು ಶಂಕರಲಿಂಗೇಗೌಡ, ಬೆಳ್ಳುಬ್ಬಿ ಮತ್ತು ಬಗಲಿಯಂಥ ಅತಂತ್ರರು ಮಾತ್ರ. ಇವರನ್ನು ಪಳಗಿಸುವುದು ಗಣಿ ರೆಡ್ಡಿಗಾಗಲಿ, ಕುಮಾರಸ್ವಾಮಿಗಾಗಲಿ ಎಷ್ಟು ಹೊತ್ತು?

ಈ ಥರದ ಸಾಧ್ಯತೆಯೊಂದನ್ನು ಲೆಕ್ಕ ಹಾಕಿಯೇ ಕುಮಾರಸ್ವಾಮಿ ಅವಧಿಗೆ ಮುನ್ನ ಎಲೆಕ್ಷನ್ನಿನ ಮಾತಾಡುತ್ತಿದ್ದಾರೆ. ಇದು ಬಿಜೆಪಿ ಸರ್ಕಾರವನ್ನು ಅತಂತ್ರಗೊಳಿಸುವ ಸೈಕಾಲಜಿ ಕೂಡ. ಒಂದೋ ಅತೃಪ್ತ ಶಾಸಕರನ್ನು ಒಲೈಸಲು ಯಡ್ಡಿ ಬಣ ಇನ್ನಷ್ಟು ಜೇಬು ಖಾಲಿ ಮಾಡಿಕೊಳ್ಳಬೇಕು. ಸಿಕ್ಕಸಿಕ್ಕವರಿಗೆಲ್ಲ ಮಂತ್ರಿಗಿರಿ ಕೊಡಬೇಕು. ನಿಗಮ ಮಂಡಳಿಗಳನ್ನು ಬಿಟ್ಟುಕೊಡಬೇಕು. ಇಲ್ಲದಿದ್ದರೆ ಸರ್ಕಾರ ಅಲುಗಾಡುವುದು ಗ್ಯಾರಂಟಿ. ಈ ಮಧ್ಯೆ ಜೆಡಿಎಸ್ ಬುಟ್ಟಿಗೆ ಯಡ್ಡಿಯೇ ಕೈಹಾಕುತ್ತಾರಾ ಅಥವಾ ಬಿಜೆಪಿ ಬುಡಕ್ಕೆ ಗಣಿ ಕಳ್ಳರೇ ಕೈಹಾಕುತ್ತಾರಾ ಗೊತ್ತಿಲ್ಲ, ಪಟಾಕಿ ಇಟ್ಟಿದ್ದು ಮಾತ್ರ ಕಾಂಗ್ರೆಸ್!


ಬಸವರಾಜನ್


ಶಂಕರಲಿಂಗೇಗೌಡ



ಸಿಲ್ಕ್ ಸ್ಮಿತಾ ಸತ್ತರೂ ಬಿಡದ ಸೆಕ್ಸಿ ಇಮೇಜ್



• ಪಾಂಡು

ಸ್ಮಿತಾ ಜೀವಂತವಿದ್ದಾಗ ಇಡೀ ದಕ್ಷಿಣ ಭಾರತದ ಚಿತ್ರರಂಗ ಆಕೆಯ ದೇಹಸಿರಿಯನ್ನು ಬಂಡವಾಳವಾಗಿ ಮಾಡಿಕೊಂಡರೆ, ಈಗ ಬಾಲಿವುಡ್ ಆಕೆಯ ಸೆಕ್ಸಿ ಇಮೇಜಿನ ನೆನಪಿನಲ್ಲೇ ಕೋಟ್ಯಂತರ ಹಣ ಬಾಚುತ್ತಿದೆ. ಒಬ್ಬ ಖಾಸಗಿ ವ್ಯಕ್ತಿಯಾಗಿ ಸ್ಮಿತಾಳಿಗೆ ಯಾವ ಇಮೇಜು ಬೇಡವಾಗಿತ್ತೋ, ಯಾವ ಇಮೇಜು ಆಕೆಯ ಖಾಸಗಿ ಬದುಕನ್ನು ಘಾಸಿಗೊಳಿಸಿತ್ತೋ ಅದೇ ಇಮೇಜು ಇವತ್ತು ಬಂಡವಾಳವಾಗಿದ ಮತ್ತದು ಲಾಭಮಾಡಿಕೊಟ್ಟಿದೆ...

ದಕ್ಷಿಣ ಭಾರತದ ಮೋಹಕ ನಟಿ ಸಿಲ್ಕ್ ಸ್ಮಿತಾಳ ಜೀವನ ಕತೆಯನ್ನಾಧರಿಸಿದ ಹಿಂದಿ ಚಿತ್ರ 'ಡರ್ಟಿ ಪಿಕ್ಚರ್' ಬಿಡುಗಡೆಯಾಗಿ ವಾರ ಕಳೆಯುವುದರೊಳಗೆ ಬರೋಬ್ಬರಿ 30 ಕೋಟಿ ರೂಪಾಯಿಗಳನ್ನು ಬಾಚಿದೆ. ಸಿಲ್ಕ್ ಸ್ಮಿತಾಳ ಜನುಮ ದಿನದಂದೇ ಬಿಡುಗಡೆಯಾಗಿರುವ ಈ ಚಿತ್ರ ಬಿಡುಗಡೆಗೂ ಮುನ್ನವೇ ಹಲವು ರೀತಿಯಲ್ಲಿ ವಿವಾದಗಳಿಗೆ ಗುರಿಯಾಗಿತ್ತು. ಹಿಂದಿ ಕಿರುತೆರೆಯ ನಿರ್ಮಾಪಕಿ ಏಕ್ತಾ ಕಪೂರ್ ನಿರ್ಮಿಸಿರುವ ಈ ಚಿತ್ರದಲ್ಲಿ ವಿದ್ಯಾ ಬಾಲನ್ ಸ್ಮಿತಾ (ಸಿಕ್ಸ್) ಪಾತ್ರಧಾರಿಯಾಗಿ ನಟಿಸುತ್ತಿದ್ದಾಳೆಂಬ ಕಾರಣಕ್ಕಾಗಿ ಕುತೂಹಲ ಕೆರಳಿಸಿತ್ತಾದರೂ ಈ ಪರಿಯಲ್ಲಿ ಗಲ್ಲಾಪೆಟ್ಟಿಗೆ ದೋಚುತ್ತದೆಂಬ ಲೆಕ್ಕಾಚಾರವನ್ನು ಯಾವ ಸಿನಿಮಾ ಪಂಡಿತನೂ ಮಾಡಿರಲಿಲ್ಲ.

ತನ್ನ ಮಾದಕ ನೃತ್ಯ-ನೋಟದಿಂದ ನೋಡುಗರೆದೆಗೆ ಕಿಚ್ಚು ಹಚ್ಚುತ್ತಿದ್ದ ಸಿಲ್ಕ್ ಸ್ಮಿತಾ ಎಂಬ ನಟಿ ಅಕ್ಷರಶಃ ರಸಿಕರ ರಾಣಿಯಾಗಿದ್ದವಳು. ದಕ್ಷಿಣ ಭಾರತದ ಖ್ಯಾತ ನಾಮರ ಜೊತೆಯಲ್ಲೆಲ್ಲಾ ಹೆಜ್ಜೆ ಹಾಕಿದ್ದ ಸ್ಮಿತಾ ಹಣ-ಜನಪ್ರಿಯತೆ ಎರಡನ್ನೂ ಯಥೇಚ್ಛವಾಗಿ ಸಂಪಾದಿಸಿದ್ದ ಕಲಾವಿದೆ. ಹಾಗಾಗಿ ಬಚ್ಚಮ್ಮಂದಿರ ಪರ್ವವೇ ಚಿತ್ರರಂಗವನ್ನಾಳುತ್ತಿದ್ದರೂ ಒಂದು ಕಾಲದ ಏಜ್ ಓಲ್ಡ್ ನಟಿಯಾಗಿದ್ದ ಸ್ಮಿತಾಳ ಜೀವನ ಕತೆಯನ್ನಾಧರಿಸಿದ ಈ ಚಿತ್ರ ಇದೀಗ ಸಿನಿ ಪಂಡಿತರ ಬಿಸಿ ಬಿಸಿ ಚರ್ಚೆಗೆ ಗ್ರಾಸವಾಗಿದೆ.


ತೆರೆಯ ಮೇಲೆ ತನ್ನ ಸೆಕ್ಸಿ ಗ್ಲಾಮರ್ ಇಮೇಜಿನಿಂದ ಕಂಗೊಳಿಸುತ್ತಿದ್ದ ಸ್ಮಿತಾಳ ವೈಯಕ್ತಿಕ ಬದುಕು ಹೇಗಿತ್ತು? ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗಲೇ ಆಕೆ ನೇಣಿಗೆ ಕೊರಳೊಡ್ಡಬೇಕಾದ ಸ್ಥಿತಿ ಏಕೆ ನಿರ್ಮಾಣವಾಯಿತು? ಕಲಾವಿದೆಯಾಗಿ ಚಿತ್ರರಂಗದಲ್ಲಿ ಆಕೆಗಿದ್ದ ಸ್ಥಾನಮಾನವೇನು? 'ಡರ್ಟಿ ಪಿಕ್ಚರ್' ಎಂಬ ಚಿತ್ರ ವಿವಾದ ಕ್ಕೀಡಾದಾಗ ಇಂಟರ್‌ನೆಟ್ ಹಾಗೂ ಯೂಟ್ಯೂಬ್‌ಗಳಲ್ಲಿ ಆಕೆಯ ಅರೆಬೆತ್ತಲೆ ಇಮೇಜುಗಳು, ವಿಡಿಯೋ ತುಣುಕುಗಳು ರಾರಾಜಿಸಿದವೇ ಹೊರತು ಒಬ್ಬ ನಟಿಯಾಗಿ ಆಕೆಯ ಅಸ್ತಿತ್ವದ ಬಗ್ಗೆ ಒಂದೇ ಒಂದು ಲೇಖನವಾಗಲೀ, ಬರಹವಾಗಲೀ ಪ್ರಕಟವಾಗಲಿಲ್ಲ.

ಪ್ರತೀವರ್ಷ ಸ್ಮಿತಾಳ ಜನ್ಮದಿನದಂದು ಆಕೆ ನಟಿಸಿದ ಸಾಫ್ಟ್‌ಪೋರ್ನ್ ಚಿತ್ರಗಳ ತುಣುಕುಗಳನ್ನು ಪ್ರದರ್ಶಿಸಿ ಪುಕ್ಕಟೆಯಾಗಿ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಟಿವಿ ವಾಹಿನಿಗಳು ಸ್ಮಿತಾಳನ್ನು ಸೇಲಬಲ್ ಐಟಂ ಎಂಬ ಕಾರಣಕ್ಕೆ ನೆನಪು ಮಾಡಿಕೊಳ್ಳುತ್ತವೆಯೇ ವಿನಃ ಒಬ್ಬ ನಟಿಯಾಗಿ ಆಕೆಗೆ ಗೌರವ ಸೂಚಿಸುವ ಯಾವ ಚಿತ್ರಣವೂ ಅಲ್ಲಿರುವುದಿಲ್ಲ. ಬೆರಳೆಣಿಕೆಯ ಚಿತ್ರಪ್ರೇಮಿಗಳು ಮಾತ್ರ ಒಂದೆರಡು ಬ್ಲಾಗ್‌ಗಳಲ್ಲಿ ಆಕೆಯನ್ನು ಚಿತ್ರರಂಗ ಬಳಸಿಕೊಂಡ ಪರಿಯನ್ನು ಕುರಿತು ಕಟುವಾದ ಟೀಕೆಯನ್ನು ದಾಖಲಿಸಿ, ಆಕೆಯ ವ್ಯಕ್ತಿತ್ವದಲ್ಲಿದ್ದ ಮಾನವೀಯ ಮುಖಕ್ಕೆ ಕನ್ನಡಿ ಹಿಡಿಯುವ ಪ್ರಯತ್ನ ಮಾಡಿದ್ದಾರೆಂಬುದೇ ಸಮಾಧಾನಕರ ಸಂಗತಿ.

ದುರಂತ ಸಾವನ್ನಪ್ಪಿದ ಸ್ಮಿತಾ ಬರೆದಿಟ್ಟಳೆನ್ನಲಾದ ಡೆತ್‌ನೋಟ್ ಆಕೆ ತನ್ನ ಖಾಸಗಿ ಜೀವನದಲ್ಲಿ ಅನುಭವಿಸಿದ ನೋವು ಸಂಕಟಗಳಿಗೆ ಕನ್ನಡಿ ಹಿಡಿಯುವಂತೆ ಇದೆ.

"ದೇವರೇ! ಏಳು ವರ್ಷ ನನ್ನಷ್ಟಕ್ಕೆ ನಾನು ಕಷ್ಟಪಡುತ್ತಿದ್ದೇನೆ. ನನಗೆ ನನ್ನವರು ಅಂತ ಯಾರೂ ಇಲ್ಲ, ನಾನು ನಂಬಿದವರೆಲ್ಲಾ ನನಗೆ ಮೋಸ ಮಾಡಿದರು. ಬಾಬು ಬಿಟ್ಟು ನನ್ನ ಮೇಲೆ ಯಾರಿಗೂ ಪ್ರೀತಿ ಇಲ್ಲ. ನನ್ನವರೆಲ್ಲರೂ ಜೀವನದಲ್ಲಿ ಸೆಟಲ್ ಆಗಿದ್ದಾರೆ. ಬಾಬು ಬಿಟ್ಟು ಎಲ್ಲರೂ ನನ್ನ ಕಷ್ಟದ ಗಳಿಕೆಯನ್ನು ತಿಂದವರೇ. ನನ್ನ ಗಂಟು ತಿಂದವರು ನಾಶವಾಗಲಿ.

"ಜೀವನದಲ್ಲಿ ನನಗೆ ಬಹಳಷ್ಟು ಆಸೆಗಳಿವೆ. ಆದರೆ ನನ್ನ ಸುತ್ತ ಇರುವವರು ನನಗೆ ಮನಶಾಂತಿ ಇಲ್ಲದೆ, ಸಾಯೋ ಹಾಗೆ ಮಾಡಿದರು. ಇಷ್ಟೆಲ್ಲಾ ಸಾಧಿಸಿದರೂ ನನಗೆ ಮನಶಾಂತಿ ಇಲ್ಲದಂತೆ ಮಾಡಿದರು. ಎಲ್ಲರಿಗೂ ಬಹಳ ಒಳ್ಳೆಯದನ್ನೇ ಮಾಡಿದ್ದೇನೆ. ಆದರೂ ನನ್ನ ಬದುಕು ಹೀಗೆ ಮಾಡಿದರು. ಇದು ಯಾವ ನ್ಯಾಯ?



ಸಿಲ್ಕ್ ಸ್ಮಿತಾ

"ನನಗೆ ಇರುವ ಹಣವನ್ನು ನನ್ನ ಮತ್ತು ಬಾಬು ಕುಟುಂಬಕ್ಕೆ ಸಮಾನವಾಗಿ ಹಂಚಬೇಕು. ನನ್ನ ಆಸೆಗಳನ್ನು ಇಬ್ಬರ ಮೇಲೆ ಇಟ್ಟುಕೊಂಡೆ. ಆತ ನನಗೆ ಮೋಸ ಮಾಡಿದ. ದೇವರು ಇದ್ದರೆ ಅವನನ್ನು ನೋಡಿಕೊಳ್ಳಲಿ.

"ಪ್ರತಿ ದಿನ ಈ ಟಾರ್ಚರ್ ನಾನು ಭರಿಸಲಾರೆ. ಒಂದು ಸಾರಿ ಒಡವೆ ಕೊಂಡುಕೊಂಡೆ. ಹಾಕಿಕೊಳ್ಳಲಿಕ್ಕೆ ಬಿಡಲಿಲ್ಲ... ದೇವರು ದೇಶದ ಸಲುವಾಗಿ ಹುಟ್ಟಿಸಿದ್ದಾನೆ. ರಾಮು, ರಾಧಾಕೃಷ್ಣ ನನಗೆ ಬಹಳ ಪ್ರೀತಿ ತೋರಿಸಿದ್ದಾರೆ. ನಾನು ಎಷ್ಟು ಒಳ್ಳೆಯದು ಮಾಡಿದರೂ ಕೆಡುಕು ಮಾಡಲಿಲ್ಲ. ದೇವರು ಇದ್ದರೆ ನೋಡಿಕೊಳ್ತಾನೆ.

"ನನ್ನ ರೆಕ್ಕೆ ಮುರಿದು ದುಡಿದದ್ದನ್ನು ಎಲ್ಲಾ ತಿಂದಿದ್ದಾರೆ. (ಬಾಬು ಬಿಟ್ಟು) ಆದರೂ ಯಾರಿಗೂ ವಿಶ್ವಾಸವಿಲ್ಲ. ಐದು ವರ್ಷಗಳ ಹಿಂದೆ ನನಗೆ ಒಬ್ಬ ಜೀವನ ಕೊಡುತ್ತೇನೆ ಅಂದ. ಈಗ ಇಲ್ಲ ಅಂದ. ನನ್ನ ಜೀವನದಲ್ಲಿ ಎಷ್ಟೋ ನೋವು ಭರಿಸಿದ್ದೇನೆ. ಆದರೆ ಇದು ಭರಿಸುವುದಕ್ಕಾಗುವುದಿಲ್ಲ. ಇದು ಬರೆಯುವುದಕ್ಕೆ ಎಷ್ಟು ನೋವು ಪಟ್ಟಿದ್ದೇನೋ ನನಗೆ ಗೊತ್ತು......."

ಸ್ಮಿತಾಳೇ ಬರೆದಿದ್ದಳು ಎನ್ನಲಾದ ಈ ಪತ್ರ ಸ್ಮಿತಾಳ ಸಾವಿನಷ್ಟೇ ಸಂಶಯಗಳಿಗೆ ಆಸ್ಪದವಾಗಿದೆ. ಆದರೆ ಆಕೆಯ ಖಾಸಗಿ ಬದುಕು ಎಷ್ಟು ದಯನೀಯವಾಗಿತ್ತು ಎಂಬುದಕ್ಕಂತೂ ಇದು ಕನ್ನಡಿ ಹಿಡಿಯುವಂತಿದೆ.

ಆಂಧ್ರ ಪ್ರದೇಶದ ಏಲೂರಿನ ಕಡುಬಡತನದ ಕುಟುಂಬವೊಂದರಲ್ಲಿ 25/12/1962 ರಂದು ಜನಿಸಿದ ಸ್ಮಿತಾಳ ಮೂಲ ಹೆಸರು ವಡ್ಲಪಟ್ಲ ವಿಜಯಲಕ್ಷ್ಮಿ. ತಾರುಣ್ಯಕ್ಕೆ ಕಾಲಿಡುತ್ತಿದ್ದಂತೆಯೇ ಮನೆಯವರ ನಿಷ್ಠುರ ಕಟ್ಟಿಕೊಂಡು, ಸಿನಿಮಾ ಸೇರಿ ಕೈತುಂಬಾ ಹಣ ಸಂಪಾದಿಸಲು ಮದ್ರಾಸಿನತ್ತ ಹೆಜ್ಜೆ ಹಾಕಿದಳು. ಅಲ್ಲಿ ಅನ್ನಪೂರ್ಣಮ್ಮ ಎಂಬಾಕೆಯ ಮನೆಯಲ್ಲಿ ಮನೆಗೆಲಸ ಮಾಡುತ್ತ, ಅವಳ ಸಹಾಯದಿಂದ ಮಲಯಾಳಂ ಚಿತ್ರವೊಂದರಲ್ಲಿ ಪ್ರಪ್ರಥಮವಾಗಿ ನಟಿಸಿದಳು. ಅವಳ ಎರಡನೆಯ ಚಿತ್ರ 'ವಂಡಿಚಕ್ರಂ'. ಈ ಚಿತ್ರದ ಮೂಲಕವೇ ವಿಜಯಲಕ್ಷ್ಮಿ ಸಿಲ್ಕ್ ಸ್ಮಿತಾ ಆಗಿ ಪರಿವರ್ತನೆಗೊಂಡಿದ್ದು. ಯಾಕೆಂದರೆ ಆ ಚಿತ್ರದಲ್ಲಿ ಆಕೆಗೆ 'ಸಿಲುಕು' ಎಂಬ ಅಡ್ಡನಾಮವಿತ್ತು. ಸಿನಿಮಾಗಳಲ್ಲಿ ಎಲ್ಲವನ್ನೂ ಕಳಚಿ ನಟಿಸಲು ಕೆಲವರಷ್ಟೇ ಮುಂದೆ ಬರುತ್ತಾರೆ ಎಂಬಂತ ಕಾಲಘಟ್ಟವದು. ಇಂತಹ ಕಳಚುವ ಹೊಸ ಹುಡುಗಿಯರಿಗಾಗಿ ಚಿತ್ರರಂಗ ಹುಡುಕಾಟದಲ್ಲಿದ್ದಾಗ ಸಿಕ್ಕವಳೇ ಸಿಲ್ಕ್ ಸ್ಮಿತಾ. ಬಿಚ್ಚುವುದೆಂದರೇನು? ಯಾವ ಮಟ್ಟಕ್ಕಾದರೂ ಸರಿ. ನಿರ್ದೇಶಕ ಹಾಗೂ ಪ್ರೇಕ್ಷಕರು ತನ್ನಿಂದ ಏನನ್ನು ನಿರೀಕ್ಷಿಸುತ್ತಾರೆಂದು ಸ್ಮಿತಾಳಿಗೆ ಚೆನ್ನಾಗಿ ಗೊತ್ತಿತ್ತು. ಅವರು ನಿರೀಕ್ಷಿಸುವುದಕ್ಕಿಂತ ಹೆಚ್ಚಾಗಿ ಯಾವ ತಕರಾರಿಲ್ಲದೆ ಆಕೆ ನೀಡುತ್ತಿದ್ದುದರಿಂದ ಬಹಳ ಬೇಗ ಯಶಸ್ಸು ಮತ್ತು ಹಣ ಸಂಪಾದಿಸಿದಳು.

ಸಿಲ್ಕ್ ಸ್ಮಿತಾ ಓದಿದ್ದು ಕೇವಲ ಮೂರನೆಯ ತರಗತಿಯವರೆಗೆ ಮಾತ್ರ. ತೆಲುಗು ಬಿಟ್ಟು ಬೇರೆ ಭಾಷೆ ಆಕೆಗೆ ಬರುತ್ತಿರಲಿಲ್ಲ. ಹಣವನ್ನಾಗಲೀ, ಯಶಸ್ಸನ್ನಾಗಲೀ ಹೇಗೆ ಕಾಪಾಡಬೇಕೆಂದು ಆಕೆಗೆ ತಿಳಿಯುತ್ತಿರಲಿಲ್ಲ. ಸಿನಿಮಾ ನಿರ್ಮಾಪಕರು ಹಣ ಕೊಟ್ಟರೆ ಕೊಟ್ಟರು, ಇಲ್ಲವಾದರೆ ಇಲ್ಲ.

ಅದ್ಯಾವ ಪುಣ್ಯಾತ್ಮ ಅವಳಿಗೆ ಸಿಲ್ಕ್ ಎಂದು ನಾಮಕರಣ ಮಾಡಿದನೋ! ರೇಶ್ಮೆಗೂಡಿನಂತೆ ಸಿಲ್ಕ್ ಸುಮಾರು ಹದಿನೈದು ವರ್ಷಗಳ ಚಿತ್ರ ಜೀವನದುದ್ದಕ್ಕೂ ಸಿಲ್ಕನ್ನು ಎಳೆಎಳೆಯಾಗಿ ಬಿಡಿಸಿಕೊಂಡೇ ಬೆಳೆದಳು. ಆದರೆ ಗೂಡಿನೊಳಗಿನ ಹುಳು ಸತ್ತಿರುವಂತೆ ಅವಳ ಆದರ್ಶಗಳು ಎಂದೋ ಸತ್ತು ಹೋಗಿದ್ದವು. ಆದರೆ ಆಸೆಗಳು ದಿನ ದಿನಕ್ಕೂ ಜೀವಂತವಾಗುತ್ತಿದ್ದವು.

ಆಕೆ ಹಣ, ಹೆಸರು, ಪ್ರೀತಿ ಎಲ್ಲವನ್ನೂ ದಂಡಿದಂಡಿಯಾಗಿ ಬಯಸುತ್ತಿದ್ದಳು. ತನ್ನನ್ನು ಅಪಾರವಾಗಿ ಪ್ರೀತಿಸುವ ಗಂಡ, ಮುದ್ದಾದ ಮಕ್ಕಳು ಅವಳ ಬದುಕಿಗೆ ಎಂದೂ ಎಟುಕದ ಕನಸುಗಳಾದವು. ಮುಖ-ಮೈಗೆ ಬಣ್ಣ ಮೆತ್ತಿಕೊಂಡಾಗ ಮಾತ್ರ ಸಿಲ್ಕ್ ಆಗುತ್ತಿದ್ದ ಸ್ಮಿತಾಳ ನಿಷ್ಕಲ್ಮಷತೆಯನ್ನು, ಸರಳತೆಯನ್ನು ಕಂಡವರು ಬಹಳ ಕಡಿಮೆ. 'ಸ್ಮಿತಾ ನನ್ನ ಗೆಳತಿಯಾಗಿದ್ದಳು' ಎಂದು ಎದೆತಟ್ಟಿ ಹೇಳಿಕೊಳ್ಳುವ ಸ್ನೇಹಿತರ್ಯಾರೂ ಸಿಗದಿದ್ದುದಕ್ಕೆ ಕಾರಣವಿತ್ತು. ಅವಳ 'ಸೆಕ್ಸಿ ಇಮೇಜ್' ಅವಳನ್ನು ಎಲ್ಲರೂ ದೂರ ಇಡುವಂತೆ ಮಾಡಿತ್ತು. ಸ್ಮಿತಾ ಇಂತಹ ಅಭದ್ರತೆಯ ಸ್ಥಿತಿಯಲ್ಲಿ

ಡರ್ಟಿಯ ಭರ್ತಿ ಗಳಿಕೆ

ಖುದ್ದು ನಿರ್ಮಾಪಕಿಯನ್ನೇ ದಿಗಿಲಾಗಿಸುವಂತೆ ಓಪನಿಂಗ್ ಕಂಡಿರುವ 'ದಿ ಡರ್ಟಿ ಪಿಕ್ಚರ್' ಚಿತ್ರದಲ್ಲಿ ಸಿಲ್ಕ್ ಸ್ಮಿತಾಳ ನೆರಳು ಚೆನ್ನಾಗೆ ಕೆಲಸ ಮಾಡಿರುವುದನ್ನು ಮೊದಲ ವಾರದ ಆದಾಯವೇ ಹೇಳುತ್ತಿದೆ. ಸಿಲ್ಕ್‌ಳ ಜನ್ಮ ದಿನಕ್ಕೆ ಸರಿಯಾಗಿ ಡಿಸೆಂಬರ್ 2ನೇ ತಾರೀಖು ತೆರೆಗೆ ಬಂದ ಪಿಕ್ಚರ್ ಮೊದಲ ದಿನವೇ 9.05 ಕೋಟಿ ಗಳಿಸುವುದರ ಮೂಲಕ 2011ನೇ ಸಾಲಿನಲ್ಲಿ ಬಿಂದಾಸ್ ಓಪನಿಂಗ್ ಕಂಡ ಟಾಪ್ ಫೈವ್ ಚಿತ್ರಗಳಲ್ಲಿ ಒಂದೆಂದು ದಾಖಲಾಗಿ ಹೋಗಿದೆ. ತೆಲುಗು, ತಮಿಳು ಭಾಷೆಗಳಲ್ಲೂ ಅಪ್ಪಳಿಸಿರುವ ಚಿತ್ರದ ಹಿಂದಿ ಅವತರಣಿಕೆಯೊಂದೇ ಮೊದಲ ದಿನ 8.85 ಕೋಟಿಯ ಆದಾಯವನ್ನು ಗಳಿಸಿಕೊಟ್ಟಿದೆ. ಇನ್ನು ಎರಡನೇ ದಿನದ ಗಳಿಕೆ 10.78 ಕೋಟಿ, ಭಾನುವಾರದ್ದಂತೂ ಬರೋಬ್ಬರಿ 12 ಕೋಟಿಯನ್ನೂ ಕ್ರಾಸ್ ಮಾಡುವ ಮೂಲಕ ಮೂರೇ ದಿನಗಳಲ್ಲಿ ಅನಾಮತ್ತು 34.25 ಕೋಟಿಗಳನ್ನು ನಿರ್ಮಾಪಕಿ ಏಕ್ತಾ ಕಪೂರ್‌ಳ ಅಕೌಂಟು ತುಂಬಿಸಿದೆ.

ಚಿತ್ರದ ಬಗ್ಗೆ ಇನ್ನಿಲ್ಲದಂತೆ ನಿರೀಕ್ಷೆ ಇಟ್ಟುಕೊಂಡಿದ್ದ ಏಕ್ತಾ, ನಾಯಕಿ ವಿದ್ಯಾ ಬಾಲನ್‌ಳನ್ನು ಬಳಸಿಕೊಂಡು ವಿಭಿನ್ನವಾಗೇ ಪ್ರಚಾರ ನೀಡಿದ್ದಳು. ಬಿಗ್ ಬಾಸ್ ರಿಯಾಲಿಟಿ ಶೋನಲ್ಲಿ ವಿದ್ಯಾ, ತುಷಾರ್ ಕಪೂರ್, ಇಮ್ರಾನ್ ಹಶ್ಮಿ ಮುಂತಾದವರೆಲ್ಲ ಭಾಗವಹಿಸಿ ಚಿತ್ರವನ್ನು ಪ್ರಮೋಟ್ ಮಾಡಿದ್ದರು. ಇನ್ನು ಏಕ್ತಾಳ ಟಿವಿ ಸೀರಿಯಲ್ 'ಬಡೆ ಅಚ್ಚೆ ಲಗ್ತೆ ಹೈ' ನಲ್ಲಿ ವಿದ್ಯಾ ಭಾಗವಹಿಸಿದ್ದಲ್ಲದೆ ಚಿತ್ರದ ಒಂದು ಹಾಡಿಗೆ ಧಾರಾವಾಹಿಯ ನಟಿಯೊಂದಿಗೆ ಹೆಜ್ಜೆ ಹಾಕಿದ್ದಳು. ಇವೆಲ್ಲಾ ಈಗ ವರ್ಕ್‌ಔಟ್ ಆಗುತ್ತಿವೆ. ಚಿತ್ರದ ರಿಲೀಸಿಗೆ ಸರಿಯಾಗಿ ಮೊಹರಂ ರಜೆಯು ಸೇರಿಕೊಂಡಿದ್ದರಿಂದ ಮೊದಲ ಐದು ದಿನದ ಕಲೆಕ್ಷನ್ 40 ಕೋಟಿಯನ್ನೂ ಮೀರಿ ನಡೆದಿದೆ.

ಇದೆಲ್ಲಾ ಪಿಕ್ಚರ್‌ನ ಬೆಳ್ಳಿತೆರೆಯ ಗಳಿಕೆಯಾದರೆ ಟಿವಿ ಹಾಗೂ ಆಡಿಯೋ ರೈಟ್ಸ್ ಮಾರಾಟದಲ್ಲೂ ಚಿತ್ರ ಹಿಂದೆ ಬಿದ್ದಿಲ್ಲ. ಚಿತ್ರದ ಟಿವಿ ರೈಟ್ಸ್ ಸೋನಿ ಚಾನಲ್‌ಗೆ 8 ಕೋಟಿಗೆ ಮಾರಾಟವಾಗಿದ್ದರೆ ಟಿ-ಸಿರೀಸ್ ಸಂಸ್ಥೆಯು 2 ಕೋಟಿಗೆ ಆಡಿಯೋ ಹಕ್ಕನ್ನು ಖರೀದಿ ಮಾಡಿದೆ. ಇಂಗ್ಲೆಂಡ್, ಮಲೇಷಿಯಾ, ಸಿಂಗಾಪುರ್, ಕೀನ್ಯಾ ಇಂಡೋನೇಷಿಯಾ, ನ್ಯೂಜಿಲೆಂಡ್ ಮುಂತಾದ ಕಡೆಯೂ ತೆರೆ ಕಂಡಿದ್ದ ಈ ಚಿತ್ರ ಅಲ್ಲಿಂದ 3.5 ಕೋಟಿಯ ಓಪನಿಂಗ್ ಅಕೌಂಟ್ ತೆರೆಯುವ ಮೂಲಕ ವಿದೇಶದಲ್ಲೂ ಹಿಟ್ ಎನಿಸಿದೆ. ಇಷ್ಟೆಲ್ಲಾ ಕಮಾಯಿಗೆ ನಿಂತಿರುವ ಈ ಚಿತ್ರಕ್ಕೆ ಖರ್ಚಾಗಿರುವುದಾದರೂ ಕೇವಲ 21 ಕೋಟಿ ಮಾತ್ರ. ಪ್ರಚಾರದ ಬಾಬ್ತು ಅಂತ ಸೇರಿಸಿದರೂ ಬಜೆಟ್ 31 ಕೋಟಿ ಮುಟ್ಟಬಹುದಷ್ಟೆ. ವಿದ್ಯಾ ಬಾಲನ್, ಇಮ್ರಾನ್, ನಾಸಿರುದ್ದೀನ್ ಷಾರನ್ನೂ ಸೇರಿಸಿ ಚಿತ್ರದ ನಂಟರಿಗೆಂದು ನೀಡಿರುವುದು 11 ಕೋಟಿಯನ್ನು. ಇದೇ ವಾರ ತೆರೆಕಂಡ ಅಕ್ಷಯ್ ಕುಮಾರ್ ಹಾಗೂ ಜಾನ್ ಅಬ್ರಹಾಮ್‌ನಂತಹ ನಟರಿರುವ 'ದೇಸಿ ಬಾಯ್ಸ್' ಚಿತ್ರದ ಬಜೆಟ್‌ಗೆ ಹೋಲಿಸಿಕೊಂಡರೆ ಇದು ಏನೇನೂ ಅಲ್ಲ. ಆದರೂ ಗಳಿಕೆಯಲ್ಲಿ ಅದನ್ನೂ ಮೀರಿಸುವಂತೆ ಮುನ್ನಡೆದಿದೆ. ಒಟ್ಟಾರೆ ಸಿಲ್ಕ್ ಸ್ಮಿತಾಳ ಬದುಕಿನ ಅದೃಷ್ಟ ಎಂಬುದು ಎಂದೂ ತಲೆಹಾಕದಿದ್ದರೂ ಆಕೆಯ ಜೀವನವನ್ನಾಧರಿಸಿ ನಿರ್ಮಾಣಗೊಂಡಿರುವ ಚಿತ್ರ ಬಾಕ್ಸ್ ಆಫೀಸಿನಲ್ಲಿ ಅದೃಷ್ಟ ಕಂಡಿದೆ.



ಾಗ ಆಕೆಗಿಂತ ಎರಡರಷ್ಟು ವಯಸ್ಸಾದ ವ್ಯಕ್ತಿಯೊಬ್ಬ ಅಭಿಮಾನಿಯ ಹೆಸರಲ್ಲಿ ಆಕೆಯ ಜೀವನದಲ್ಲಿ ಕಾಣಿಸಿಕೊಂಡ. ಆತ ವೃತ್ತಿಯಲ್ಲಿ ಡಾಕ್ಟರ್. ಮೂರನೇ ತರಗತಿ ಓದಿದ್ದ ಹಳ್ಳಿ ಹುಡುಗಿ ತಾಳನ್ನು ಇಂಗ್ಲಿಷ್‌ಬಲ್ಲ ಡಾಕ್ಟರೊಬ್ಬ ಮೆಚ್ಚುವುದೆಂದರೇನು? ಹೆಂಡತಿ ಮಕ್ಕಳನ್ನು ಆದಾಗಲೇ ಬಿಟ್ಟಿದ್ದ ಡಾ. ರಾಧಾಕೃಷ್ಣ ಲಸವನ್ನೂ ಬಿಟ್ಟು ಸ್ಮಿತಾಳ ಬದುಕನ್ನು ಪ್ರವೇಶಿಸಿದ.

ಸ್ಮಿತಾಳ ಸಾವಿನ ದಿನ ಆಕೆಯೊಂದಿಗೆ ಸಹವರ್ತಿಯಾಗಿ ಬದುಕಿದ್ದ ಡಾ.ರಾಧಾಕೃಷ್ಣನೀಡಿದ ಹೇಳಿಕೆ ಕೂಡ ಸ್ಮಿತಾಳ ಬದುಕಿನ ಮತ್ತೊಂದು ಆಯಾಮವನ್ನು ಪರಿಚಯಿಸುವಂತಿತ್ತು.

"ನಾನು ಆಕೆಯೊಡನೆ ಇರಲು ಪ್ರಾರಂಭಿಸಿದ ನಂತರ ಆಕೆಯ ಬದುಕಿಗೆ ಒಂದು ಅರ್ಥ ಬಂತು. ಶಿಕ್ಷಕನನ್ನು ನೇಮಿಸಿ ಆಕೆಗೆ ಎರಡು ವರ್ಷ ಇಂಗ್ಲಿಷ್ ಕಲಿಸಿದೆ. ಆಕೆಗೆ ಬರಬೇಕಾದ ಬಾಕಿ ಹಣವನ್ನು ವಸೂಲು ಮಾಡಿದೆ. ಆಕೆಯ ಜೀವನಕ್ಕೆ ಈ ಮೂಲಕ ಭದ್ರತೆ ಒದಗಿಸಿದೆ. ಆಕೆ ತುಂಬಾ ಒಳ್ಳೆಯವಳು. ಸ್ವಲ್ಪ ಸಿಡುಕು ಅಷ್ಟೆ. ನನ್ನ ಇಬ್ಬರು ಹೆಣ್ಣು ಹಾಗೂ ಒಬ್ಬ ಗಂಡು ಮಗನನ್ನು ಆಕೆ ತುಂಬಾ ಪ್ರೀತಿಸುತ್ತಿದ್ದಳು. ಈಗ ಮಗಳು-ಅಳಿಯ ಮೊಮ್ಮಕ್ಕಳು ಎಲ್ಲಾ ಕೂಡಿ ಇಲ್ಲೇ ಸ್ಮಿತಾಳ ಮನೆಯಲ್ಲೇ ವಾಸವಾಗಿದ್ದೇವೆ. ನನ್ನ ಮಗಳ ಮಗಳಾದ ಉತ್ತರಾಳನ್ನು ಬಹಳ ಹಚ್ಚಿಕೊಂಡಿದ್ದಳು. ತನ್ನ ಪಕ್ಕವೇ ಮಲಗಿಸಿಕೊಳ್ಳುತ್ತಿದ್ದಳು. ಸಾಯುವ ಹಿಂದಿನ ದಿನ ಉತ್ತರಾಳನ್ನು ಕರೆದುಕೊಂಡು ಜೂಗೆ ಸಹಾ ಹೋಗಿ ಬಂದಿದ್ದಳು. ಡಿಯರ್ ಎಂದು ಯಾಕೆ ಸಾಯುವ ನಿರ್ಧಾರ ಕೈಗೊಂಡಳೋ ಅರ್ಥವಾಗುತ್ತಿಲ್ಲ.

"ಹೆಸರು ಹಣ ಸಂಪಾದಿಸಿದ ನಂತರ ಸ್ಮಿತಾಗೆ ತನ್ನ ಇಮೇಜ್ ಬಗ್ಗೆ ಅಸಹ್ಯ ಹುಟ್ಟಿಬಿಟ್ಟಿತ್ತು. ಅದರಿಂದ ಹೇಗಾದರೂ ಹೊರಬರಲು ಪ್ರಯತ್ನ ಪಡುತ್ತಲೇ ಇದ್ದಳು.

"ಆಕೆ ಮಹತ್ವಾಕಾಂಕ್ಷಿ. ಸಿನಿಮಾಗಳಲ್ಲಿ ಹೀರೋಯಿನ್ ಆಗಿ ಮಿಂಚಬೇಕೆಂದು ಬಹಳ ಆಸೆಯಿತ್ತು. ಇದಕ್ಕಾಗಿ ತಮಿಳು, ತೆಲುಗು, ಮಲೆಯಾಳಂನಲ್ಲಿ ಚಿತ್ರ ನಿರ್ಮಿಸಿ ಕೈಸುಟ್ಟುಕೊಂಡಳು.

"ಹದಿನೈದು ವರ್ಷಗಳ ಕಾಲ ಅವಳ ಜೊತೆಯಲ್ಲಿದ್ದೀನಿ. ಅಂದಿನಿಂದ ಇಂದಿನವರೆಗೂ ಆಕೆಗೆ ಅಭದ್ರತೆಯ ಭಾವನೆ ಕಾಡುತ್ತಲೇ ಇತ್ತು. ಆಸೆ ಹೆಚ್ಚಾಗಿ ಅದು ನಡೆಯದೇ ನಿರಾಶೆ ಅನುಭವಿಸುತ್ತಿದ್ದಳು. ಬೇಸರವಾದಾಗಲೆಲ್ಲಾ 'ಎಷ್ಟೊಂದು ಹಣವಿದ್ದರೇನು? ಬೇರೆ ಸಾಮಾನ್ಯ ಜನರಂತೆ ನನ್ನ ಬದುಕಿಲ್ಲ, ಥೂ ಇದು ಒಂದು ಬದುಕಾ' ಎಂದು ಅಸಹ್ಯಿಸಿಕೊಳ್ಳುತ್ತಿದ್ದಳು.

"ಈ ಹಿಂದೆ ಎರಡು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಳು. ನಾನಂತೂ ನನ್ನ ಇಡೀ ಜೀವನವನ್ನು ಅವಳಿಗಾಗಿ ಮುಡಿಪಾಗಿಟ್ಟೆ. ಆ ಅರ್ಥದಲ್ಲಿ ನಾನೇ ಅವಳಿಗೆ ಸೆಕ್ರೆಟರಿ ಎಂದು ಹೇಳಬಹುದು. ನಾನು ಮತ್ತು ನನ್ನ ಇಡೀ ಕುಟುಂಬ (ಹಳೆಯ ಹೆಂಡತಿ ಬಿಟ್ಟು) ಎಲ್ಲರೂ ಅವಳ ಜೊತೆ ಸಂತೋಷವಾಗಿದ್ದೆವು. ಇದ್ದಕ್ಕಿದ್ದಂತೆ ಯಾಕೆ ಹೀಗೆ ಮಾಡಿದಳೋ ಅರ್ಥವಾಗುತ್ತಿಲ್ಲ.

"ಅವಳಿಗಿಷ್ಟವಾದವರು – ಅದು ಚಿಕ್ಕ ಮಕ್ಕಳಾದರೂ ಸರಿ – ಬೇರೆಯವರಿಗೆ ಇಷ್ಟ ಆಗಲೇಬಾರದು. ಅಷ್ಟೊಂದು ಪೊಸೆಸಿವ್. ಹಾಗಾಗಿ ಅವಳಿಗೆ ಸ್ನೇಹಿತರು, ಆತ್ಮೀಯರು ಇರಲೇ ಇಲ್ಲ. ಮಕ್ಕಳನ್ನು ಕಂಡರೆ ಬಹಳ ಪ್ರೀತಿ. ಯಾವುದೇ ಮಕ್ಕಳಾದರೂ ಸರಿ, ಕುಣಿಯುತ್ತಾ ಚಿಕ್ಕಮಗುವಿನ ಹಾಗೆ ಆಟವಾಡುತ್ತಿದ್ದಳು. ಮಗು ಬೇಕೆಂದು ಇತ್ತೀಚೆಗೆ ಬಹಳ ಹಟ ಮಾಡುತ್ತಿದ್ದಳು. ನಾನೇ 'ಕೈ ತುಂಬಾ ಸಿನಿಮಾಗಳಿವೆ. ಎರಡು ವರ್ಷಗಳ ನಂತರ ಮಗು ಮಾಡಿಕೊಳ್ಳೋಣ' ಎಂದಿದ್ದೆ

"ಟೆನ್ನಿಸ್ ಆಕೆಗೆ ಬಹಳ ಇಷ್ಟ. ಅತ್ಯಂತ ಜನಪ್ರಿಯರಾದ ಮಹಿಳೆಯರ ಬಗ್ಗೆ ತುಂಬಾ ವ್ಯಾಮೋಹ, ಹೊಟ್ಟೆಕಿಚ್ಚು. ಸ್ಟೆಫಿ ಗ್ರಾಫ್, ಡಯಾನಾ ಇತ್ಯಾದಿ ಮಹಿಳೆಯರನ್ನು ಮೆಚ್ಚಿಕೊಳ್ಳುತ್ತಿದ್ದಳು. ಮರುಕ್ಷಣವೇ ತನ್ನ ಜನಪ್ರಿಯತೆಗೂ ಅವರ ಜನಪ್ರಿಯತೆಗೂ ಹೋಲಿಸಿ ಖಿನ್ನಳಾಗುತ್ತಿದ್ದಳು. ಆಗೆಲ್ಲಾ ಎಲ್ಲರ ಬಗ್ಗೆ ತಿರಸ್ಕಾರ ಹುಟ್ಟಿ ಬಿಡುತ್ತಿತ್ತು. ಎಷ್ಟೇ ಪ್ರಯತ್ನಪಟ್ಟರೂ ಆಕೆಯನ್ನು ಸಮಾಧಾನ ಮಾಡಲು ಸಾಧ್ಯವಾಗುತ್ತಿರಲಿಲ್ಲ.


"ಕೈತುಂಬಾ ಸಿನಿಮಾಗಳಿದ್ದವು. ಅವಳು ಕಡೆಯದಾಗಿ ಕನ್ನಡದ 'ಬದುಕು ಜಟಕಾ ಬಂಡಿ' ಚಿತ್ರದಲ್ಲಿ ನಟಿಸಿದ್ದಳು. ಇನ್ನೆರಡು ದಿನಗಳಲ್ಲಿ ತೆಲುಗು ಚಿತ್ರವೊಂದರ ಶೂಟಿಂಗ್ ಪ್ರಾರಂಭವಾಗುವುದರಲ್ಲಿತ್ತು. ಸಾಯುವ ಹಿಂದಿನ ರಾತ್ರಿ ವಸ್ತ್ರವಿನ್ಯಾಸಕರಿಗೆ ಫೋನ್ ಮಾಡಿ ಬಟ್ಟೆ ತರಿಸಿಕೊಂಡಿದ್ದಳು.

"ಆಕೆ ತನ್ನ ಪ್ರಿಯಕರನ ಬಗ್ಗೆ ಪತ್ರದಲ್ಲಿ ಹೇಳಿದ್ದಾಳೆ. ಅವನಾರೆಂಬುದಾಗಲೂ ನನಗಿದು ಗೊತ್ತಿಲ್ಲ. ನನಗೆ ಸಾಕಷ್ಟು ಆಸ್ತಿಯಿದೆ. ಆಕೆಯ ಆಸ್ತಿಯಿಂದ ಒಂದು ನಯಾಪೈಸೆಯೂ ನನಗೆ ಬೇಡ" ಎಂದು ವಿರಾಗಿಯಂತೆ ಹೇಳಿದ್ದ.

ಹದಿನೈದು ವರ್ಷಗಳಷ್ಟು ಕಾಲ ಸಹಜೀವನ ನಡೆಸಿದ ವ್ಯಕ್ತಿಯ ಜೊತೆಗೇ ಆಕೆ ಅಭದ್ರತೆಯ ನೆರಳಲ್ಲಿ ಬದುಕುತ್ತಿದ್ದಳೆಂದರೆ, ತನಗೆ ನೆಮ್ಮದಿ ನೀಡುವ ಬದುಕಿಗಾಗಿ ಹಂಬಲಿಸುತ್ತಿದ್ದಳೆಂದರೆ ತೆರೆಯ ಮೇಲೆ ಕೇವಲ ತನ್ನನ್ನು ಕಾಮದ ಬೊಂಬೆಯನ್ನಾಗಿ ಪ್ರದರ್ಶಿಸಿ ಬಾಚಿಕೊಳ್ಳುತ್ತಿದ್ದ ನಿರ್ಮಾಪಕರು, ತನ್ನೊಳಗಿನ ಕಲಾವಿದೆಯನ್ನು ಗುರುತಿಸದೇ ಕೇವಲ ವ್ಯಾಂಪ್ ಪಾತ್ರಗಳಿಗೆ ತನ್ನನ್ನು ಸೀಮಿತಗೊಳಿಸಿದ ನಿರ್ದೇಶಕರ ಬಗ್ಗೆ ಅದಿನ್ನೆಂತಾ ಅಸಮಾಧಾನ ಇದ್ದಿರಬಹುದು.

ಸ್ಮಿತಾ ಜೀವಂತವಿದ್ದಾಗ ಇಡೀ ದಕ್ಷಿಣ ಭಾರತದ ಚಿತ್ರರಂಗ ಆಕೆಯ ದೇಹಸಿರಿಯನ್ನು ಬಂಡವಾಳವಾಗಿ ಮಾಡಿಕೊಂಡರೆ, ಈಗ ಬಾಲಿವುಡ್ ಆಕೆಯ ಸೆಕ್ಸೀ ಇಮೇಜಿನ ನೆನಪಿನಲ್ಲೇ ಕೋಟ್ಯಂತರ ಬಾಚುತ್ತಿದೆ. ಒಬ್ಬ ಖಾಸಗಿ ವ್ಯಕ್ತಿಯಾಗಿ ಸ್ಮಿತಾಳಿಗೆ ಯಾವ ಇಮೇಜು ಬೇಡವಾಗಿತ್ತೋ, ಯಾವ ಇಮೇಜು ಆಕೆಯ ಖಾಸಗಿ ಬದುಕನ್ನು ಘಾಸಿಗೊಳಿಸಿತ್ತೋ ಅದೇ ಇಮೇಜು ಇವತ್ತು ಬಂಡವಾಳವಾಗಿದೆ ಮತ್ತದು ಲಾಭಮಾಡಿಕೊಟ್ಟಿದೆ. ವಿಪರ್ಯಾಸ ಎಂದರೆ ಇದೇ ಅಲ್ಲವೇ?

ಯಡ್ಡಿಗೆ ಲಂಚದ ಲಾಡು ಅಂಗನವಾಡಿ ಮಕ್ಕಳಿಗೆ ತೌಡು



ಗಣಿ ಕಂಪನಿಗಳಿಂದ ಲಂಚ ಪಡೆದ, ಬೆಂಗಳೂರಿನಲ್ಲಿರುವ ಬೆಲೆ ಬಾಳುವ ಭೂಮಿಯನ್ನು ನುಂಗಿದ, ತನ್ನ ಮಕ್ಕಳ ಹೆಸರಲ್ಲಿ ಕಾಲೇಜು, ಹೋಟೆಲ್ಲು, ಆಸ್ಪತ್ರೆ ಸೇರಿದಂತೆ ಕೋಟ್ಯಂತರ ರೂಪಾಯಿಗಳ ಸಾಮ್ರಾಜ್ಯವನ್ನು ಅಕ್ರಮವಾಗಿ ಕಟ್ಟಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಎಂತಹ ಧನ ಪಿಶಾಚಿ ಎಂದರೆ ಆತ ಬಡಮಕ್ಕಳ ತಟ್ಟೆಗೂ ಕೈಹಾಕಿ ಕೋಟ್ಯಂತರ ರೂಪಾಯಿಗಳನ್ನು ದೋಚಿದ್ದರ ಕತೆ ಇದು.

ನಿಮಗೆ ಗೊತ್ತಿದೆ, ರಾಜ್ಯ ಸರ್ಕಾರ ನಡೆಸುವ ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಮಕ್ಕಳಿಗೆ ಪ್ರತಿದಿನ ಬಿಸಿ ಊಟವನ್ನು ಕೊಡಬೇಕೆಂಬ ಯೋಜನೆ ಇದೆ. ಈ ಯೋಜನೆಯ ಉದ್ದೇಶ ಬಡವರ ಮಕ್ಕಳಿಗೂ ಉಚಿತವಾಗಿ ಶಿಕ್ಷಣ ಸಿಗುವಂತೆ ಮಾಡುವುದು ಮತ್ತು ಆ ಮಕ್ಕಳ ಆರೋಗ್ಯ ಮತ್ತು ಹಾಜರಾತಿ ಹೆಚ್ಚಿಸಲು ಅವರಿಗೆ ಪೌಷ್ಟಿಕ ಆಹಾರವನ್ನು ಕೊಡುವುದೇ ಆಗಿದೆ. ಹೆಚ್ಚಾಗಿ ಕೂಲಿ ಕಾರ್ಮಿಕರ, ಭೂರಹಿತರ, ದಲಿತ ಮತ್ತು ಹಿಂದುಳಿದ ವರ್ಗಗಳ ಮಕ್ಕಳೇ ಇಂತಹ ಸರ್ಕಾರಿ ಶಾಲೆಗಳಿಗೆ ಮತ್ತು ಅಂಗನವಾಡಿಗಳಿಗೆ ಬರುತ್ತಾರೆ. ಅಂತಹ ಮಕ್ಕಳಿಗೆ ಮನೆಯಲ್ಲಿ ಒಂದು ಹೊತ್ತಿನ ಊಟ ಸಿಗುವುದೂ ದುಸ್ತರವಾಗಿರುತ್ತದೆ. ಆದ್ದರಿಂದ ಆ ಬಡಮಕ್ಕಳ ತಂದೆ-ತಾಯಂದಿರು ಶಾಲೆ ಮತ್ತು ಅಂಗನವಾಡಿಯಲ್ಲಾದರೂ ತಮ್ಮ ಮಕ್ಕಳಿಗೆ ಒಂದು ಹೊತ್ತಿನ ಮಟ್ಟಿಗಾದರೂ ಹೊಟ್ಟೆ ತುಂಬುವಷ್ಟು ಆಹಾರ ಸಿಗುತ್ತದೆ ಎಂದು ನಂಬಿರುತ್ತಾರೆ.



ಆದರೆ ಅಂತಹ ಬಡ ಮತ್ತು ಅಸಹಾಯಕ ಕಂದಮ್ಮಗಳ ತಟ್ಟೆಗೆ ಕೈಹಾಕಿದ ಯಡಿಯೂರಪ್ಪ ಮಕ್ಕಳಿಗೆ ಕೊಳೆತ ಹಿಟ್ಟನ್ನು, ತನ್ನ ಜೇಬಿಗೆ ಕೋಟ್ಯಂತರ ರೂಪಾಯಿಗಳ ಕಿಕ್‌ಬ್ಯಾಕ್‌ಅನ್ನೂ ಹಾಕಿಕೊಳ್ಳುತ್ತಾನೆಂದರೆ ಈ ಮನುಷ್ಯನ ನೀಚತನಕ್ಕೆ ಏನನ್ನಬೇಕು?

ಸರ್ಕಾರಿ ನಿಯಮ ಮತ್ತು ಸುಪ್ರೀಂಕೋರ್ಟಿನ ಆದೇಶದ ಪ್ರಕಾರ ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳಲ್ಲಿ ಕಲಿಯುವ ಮಕ್ಕಳಿಗೆ ಆವತ್ತೇ ಮಾಡಿದ ಬಿಸಿ ಊಟ ಹಾಕಬೇಕು ಮತ್ತು ಆ ಊಟವನ್ನು ತಯಾರಿಸಲು ಸ್ಥಳೀಯವಾಗಿ ಅಕ್ಕಿ, ಬೇಳೆ, ತರಕಾರಿ, ಸೊಪ್ಪು ಇತ್ಯಾದಿಗಳನ್ನು ಖರೀದಿಸಬೇಕು. ಅಂದರೆ, ಯಾವುದೇ ಕಾರಣಕ್ಕೂ ಮೊದಲೇ ತಯಾರಿಸಿರುವ ಪ್ಯಾಕೆಟ್‌ಗಳಲ್ಲಿರುವ ಪೌಡರ್ ಊಟವನ್ನು ಮಕ್ಕಳಿಗೆ ಕೊಡಬಾರದು. ಬಡಮಕ್ಕಳ ಉದ್ಧಾರಕ್ಕಾಗಿ ರೂಪುಗೊಂಡಿರುವ ಈ ಯೋಜನೆಗೆಂದು ಪ್ರತೀವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 51,400 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತವೆ.

ಆದರೆ ಯಡಿಯೂರಪ್ಪ ಮಾಡಿರುವುದನ್ನು ನೋಡಿದರೆ ನಮ್ಮ ರಾಜ್ಯದ ಬಡಮಕ್ಕಳ ಭವಿಷ್ಯದ ಬಗ್ಗೆ ಆತಂಕವಾಗುತ್ತದೆ ಮತ್ತು ಯಡ್ಡಿಯ ಭ್ರಷ್ಟತನದ ಬಗ್ಗೆ ಕೇವಲ ಜಿಗುಪ್ಸೆಯಲ್ಲ ಅದರ ಜೊತೆಗೆ ಅಸಹ್ಯವೂ ಹುಟ್ಟುತ್ತದೆ.


2006ರಲ್ಲಿ ಜನತಾದಳದ ನಾಯಕ ಕುಮಾರಸ್ವಾಮಿಯ ರಾಜಕೀಯ ದಾಳಕ್ಕೆ ಅಂದಿನ ಕಾಂಗ್ರೆಸ್-ಜೆಡಿಎಸ್‌ನ ಸಮ್ಮಿಶ್ರ ಸರ್ಕಾರ ಪತನಗೊಂಡಿತಲ್ಲದೆ ತಾನೆಂದೂ ಅಧಿಕಾರವನ್ನು ಅನುಭವಿಸುವುದಿಲ್ಲ ಎಂದು ಗೋಳಾಡುತ್ತಿದ್ದ ಬಿಜೆಪಿಯ ಯಡ್ಡಿಯ ರಾಜಕೀಯ ಬದುಕಿನ ಅದೃಷ್ಟದ ಬಾಗಿಲನ್ನೂ ತೆರೆಯಿತು. ಹೊಸ ಮೈತ್ರಿಯಿಂದಾಗಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ, ಯಡ್ಡಿ ಉಪಮುಖ್ಯಮಂತ್ರಿಯಾಗಿ ಅಧಿಕಾರದ ಗದ್ದುಗೆಯನ್ನೇರಿದರು. ಅಧಿಕಾರದ ಜೊತೆಗೆ ಹಣಕ್ಕೂ ಹಪಹಪಿಸುತ್ತಿದ್ದ ಯಡ್ಡಿಯ ದುಷ್ಟ ಕಣ್ಣುಗಳು ಆಗ ಬಿದ್ದದ್ದೇ ನಮ್ಮ ರಾಜ್ಯದ ಅಂಗನವಾಡಿಗಳಲ್ಲಿ ಒಂದಿಷ್ಟು ಆಟ, ಒಂದಿಷ್ಟು ಪಾಠ ಕಲಿಯುತ್ತಿರುವ ಆರು ವರ್ಷ ವಯಸ್ಸಿಗಿಂತಲೂ ಚಿಕ್ಕವರಾದ 14 ಲಕ್ಷ ಬಡಮಕ್ಕಳ ಮೇಲೆ.



ಕರ್ನಾಟಕದಲ್ಲಿ 61,000ಕ್ಕೂ ಹೆಚ್ಚು ಅಂಗನವಾಡಿಗಳಿವೆ. ಆ ಅಂಗನವಾಡಿಗಳಿಗೆ ಪ್ರತಿದಿನ ಲಕ್ಷಾಂತರ ಬಡಮಕ್ಕಳು ಹೋಗುತ್ತಾರೆ. 2006ರ ತನಕ ಅಂಗನವಾಡಿಯಲ್ಲಿನ ಈ ಮಕ್ಕಳಿಗೂ ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಂತೆ ಬಿಸಿಯೂಟ ಸಿಗುತ್ತಿತ್ತು. ಆದರೆ ಯಾವಾಗ ಯಡ್ಡಿ ತನ್ನ ಜೇಬು ತುಂಬಿಸಿಕೊಳ್ಳಲು ನಿರ್ಧರಿಸಿದನೋ ಆಗ ಈ ಮಕ್ಕಳ ಹೊಟ್ಟೆಗೆ ಸಿಗಲಾರಂಭಿಸಿದ್ದು ಕಳಪೆ ಪ್ಯಾಕೆಟ್ ಆಹಾರ. ಪರಿಣಾಮವಾಗಿ ಯಡ್ಡಿಯ ಅಕ್ರಮ ಆಸ್ತಿಪಾಸ್ತಿಗಳು ದಷ್ಟಪುಷ್ಟವಾಗಿ ಬೆಳೆಯುತ್ತಾ ಹೋದಂತೆ ಈ ಬಡಮಕ್ಕಳ ಆರೋಗ್ಯ ಕುಸಿಯುತ್ತಾ ಹೋಯಿತು.

ಅದೆಲ್ಲ ಆದದ್ದು ಹೀಗೆ..

ತಮಿಳುನಾಡಿನ ನಮ್ಮಕ್ಕಳ್ ಜಿಲ್ಲೆಯಲ್ಲಿ ಕ್ರಿಸ್ಟಿ ಫ್ರೈಡ್‌ಗ್ರಾಮ್ ಎಂಬ ಕಂಪನಿಯನ್ನು ಸ್ಥಾಪಿಸಿರುವ ಟಿ.ಎಸ್.ಕುಮಾರಸಾಮಿ ಎಂಬಾತ ಕರ್ನಾಟಕದ ಬಿಸಿಯೂಟದ ಯೋಜನೆಯೊಳಗೆ ನುಸುಳಿಕೊಳ್ಳಲು ಬಹಳದಿನಗಳಿಂದ ಪ್ರಯತ್ನಿಸುತ್ತಿದ್ದರೂ ಆ ನಿಟ್ಟಿನಲ್ಲಿ ಆತ ವಿಫಲನಾಗಿದ್ದ. ಆದರೆ ಯಾವಾಗ ಕುಮಾರಸ್ವಾಮಿ-ಯಡ್ಡಿ ನೇತೃತ್ವದಲ್ಲಿ 'ಕೋ-ಜಾ' ಸರ್ಕಾರ ಅಧಿಕಾರಕ್ಕೆ ಬಂತೋ ಆಗ 'ನಾಯಿ ಹಸಿದಿತ್ತು ಅನ್ನ ಹಳಸಿತ್ತು' ಎಂಬ ನಾಣ್ಣುಡಿಗೆ ಹೇಳಿಮಾಡಿಸಿದಂತಹ ಅವಕಾಶ ಕುಮಾರಸಾಮಿಯ ಮುಂದೆ ಉದ್ಭವಿಸಿತು. ಯಡ್ಡಿಯ ಕುಖ್ಯಾತ ಸುಪುತ್ರರನ್ನೋ ಅಥವಾ ದಗಲ್ಬಾಜಿ ಅಳಿಯನನ್ನೋ ಹಿಡಿದ ಕುಮಾರಸಾಮಿ ಯಡ್ಡಿಯೊಂದಿಗೆ ಒಂದು ಡೀಲ್ ಅನ್ನು ಕುದುರಿಸಿದ. ಆ ಡೀಲಿನ ಪ್ರಕಾರ 2007ರಿಂದ ಎರಡು ವರ್ಷಗಳ ಕಾಲ ರಾಜ್ಯದ ಸಾವಿರಾರು ಅಂಗನವಾಡಿಗಳಲ್ಲಿ ನಿಯಮದ ಪ್ರಕಾರ ಬಿಸಿಯೂಟ ಕೊಡುವ ಬದಲಾಗಿ ಕುಮಾರಸಾಮಿಯ ಕ್ರಿಸ್ಟಿ ಕಂಪನಿ ತಯಾರಿಸುವ 'ಪೌಷ್ಟಿಕ ಪೌಡರ್' ಆಹಾರವನ್ನು ಮಕ್ಕಳಿಗೆ ಕೊಡುವುದಾಗಿತ್ತು. ಈ ಪೌಷ್ಟಿಕ 'ಆಹಾರ'ಕ್ಕೆಂದು ರಾಜ್ಯ ಸರ್ಕಾರ ಪ್ರತಿವರ್ಷ ಕುಮಾರಸಾಮಿಯ ಕ್ರಿಸ್ಟಿ ಕಂಪನಿಗೆ ಬರೋಬ್ಬರಿ 900 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡಿತು.



ಆದರೆ ಈ ಡೀಲ್‌ನ ನಿಜ ಅರ್ಥ: ರಾಜ್ಯದ ಬಡಮಕ್ಕಳ ಹೊಟ್ಟೆಗೆ ತೌಡು ಕೊಡುವುದೂ, ಕ್ರಿಸ್ಟಿ ಕಂಪನಿಗೆ ಕೋಟ್ಯಂತರ ಲಾಭವನ್ನು ತರುವುದೂ ಮತ್ತು ಯಡ್ಡಿಯ ಜೋಳಿಗೆಗೆ ಅಪಾರ ಲಂಚವನ್ನು ಪಡೆಯುವುದೇ ಆಗಿತ್ತು.

ಈ ಕತೆ ಇಲ್ಲಿಗೇ ಮುಗಿಯುವುದಿಲ್ಲ. ಎರಡು ವರ್ಷಗಳ ಕಾಲ ಬಡಮಕ್ಕಳು ಅಂಗನವಾಡಿಗಳಲ್ಲಿ ಬಿಸಿಯೂಟದ ಬದಲಾಗಿ ಕಳಪೆ- ಕೊಳೆತ ಹಿಟ್ಟನ್ನು ಅದು ಹೇಗೋ ತಿಂದು ಸುಮ್ಮನಾಗಿದ್ದರು. ಆದರೆ ಯಾವಾಗ 2009ರಲ್ಲಿ ಯಡ್ಡಿಯ ಬಿಜೆಪಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂತೋ ಆಗ ಕ್ರಿಸ್ಟಿ ಕಂಪನಿಯೊಂದಿಗೆ ಮಾಡಿಕೊಂಡಿದ್ದ ಈ ಅಕ್ರಮ ಡೀಲನ್ನು ಮತ್ತೆ ಮೂರು ವರ್ಷಗಳ ಕಾಲಕ್ಕೆ (2012 ವರೆಗೆ) ಮುಂದುವರೆಸುವಂತೆ ಮತ್ತೊಂದು ಒಪ್ಪಂದವನ್ನು ಯಡ್ಡಿ ಮಾಡಿಕೊಂಡ.

ಅದರ ಪರಿಣಾಮವಾಗಿ ಇವತ್ತು ರಾಜ್ಯದ ಬಡಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚುವ ಬದಲಾಗಿ ಅಪೌಷ್ಟಿಕತೆಯೇ ಕಣ್ಣಿಗೆ ರಾಚುತ್ತಿದೆ. ಅಷ್ಟೇ ಅಲ್ಲ, ರಾಯಚೂರಿನಲ್ಲಿನ ಅಂಗನವಾಡಿಗೆ ಹೋಗುತ್ತಿದ್ದ ಐದುವರ್ಷದ ಬಾಲಕ ಆಂಜನೇಯ ಮತ್ತು ಎರಡು ವರ್ಷದ ಮಹಾಲಕ್ಷ್ಮಿ ಎಂಬ ಬಾಲಕಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಅಪೌಷ್ಟಿಕತೆಯ ಕಾರಣದಿಂದಾಗಿಯೇ ಸಾವನ್ನಪಿದರು. ಈ ಮಕ್ಕಳ ಸಾವಿಗೆ ಕ್ರಿಸ್ಟಿ ಕಂಪನಿಯೊಂದಿಗೆ ಯಡ್ಡಿಯು ಮಾಡಿಕೊಂಡಿದ್ದ ಅಕ್ರಮ ಒಪ್ಪಂದವೇ ಕಾರಣ ಎಂಬ ಅಂಶ ಎಲ್ಲಿ ಬಯಲಾಗುತ್ತದೋ ಎಂದು ಹೆದರಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆ ಮಕ್ಕಳ ಸಾವಿಗೆ 'ಬುದ್ಧಿ ಮಾಂದ್ಯತೆ' ಕಾರಣ ಎಂಬ ತಿಪ್ಪೆಸಾರಿಸಲು ನೋಡಿದರು. ಆದರೆ ಬುದ್ಧಿ ಮಾಂದ್ಯತೆಯಿಂದ ಮಕ್ಕಳು ಸಾವನ್ನಪ್ಪುವು ದಿಲ್ಲ ಎಂಬುದು ಎಂತಹ ದಡ್ಡನಿಗೂ ಅರ್ಥವಾಗುತ್ತದೆ.



ಕುಮಾರಸಾಮಿಯ ಕ್ರಿಸ್ಟಿ ಫ್ರೈಡ್‌ಗ್ರಾಮ್ ಕಂಪನಿ ರಾಜ್ಯದ ಅಂಗನವಾಡಿಗಳಿಗೆ ಸರಬರಾಜು ಮಾಡುತ್ತಿರುವ 'ಪೌಡರ್ ಪ್ಯಾಕೇಟ್' ಆಹಾರವಾದರೂ ಯಾವ ಮಟ್ಟದ್ದು?

ಮೊದಲನೆಯದಾಗಿ ಇಂತಹ ಪ್ಯಾಕೇಟ್ ಊಟವನ್ನು ಕೊಡುವುದು ನಿಯಮಬಾಹಿರ ಮಾತ್ರವಲ್ಲ ಅದು ಸುಪ್ರೀಂಕೋರ್ಟಿನ ಸ್ಪಷ್ಟ ಆದೇಶದ ಉಲ್ಲಂಘನೆಯಾಗಿದೆ. ಎರಡನೆಯದಾಗಿ, ಅಂಗನವಾಡಿಗೆ ಹೋಗುವ ಮಕ್ಕಳು ಮತ್ತು ಅಲ್ಲಿ ಕೆಲಸ ಮಾಡುವ ಕಾರ್ಯಕರ್ತೆಯರು ಹೇಳುವ ಪ್ರಕಾರ ಬಿಸಿ ನೀರಿನೊಂದಿಗೆ ಬೆರೆಸುವ ಮೂಲಕ ತಯಾರಿಸುವ ಈ ಪೌಡರ್ ಆಹಾರದ ಉಂಡೆಗಳು ಬಾಯಿಗೆ ಇಡಲಾಗದಷ್ಟು ಕೆಟ್ಟದಾಗಿರುತ್ತದೆ. ಮೂರನೆಯದಾಗಿ ಈ ಕ್ರಿಸ್ಟಿ ಕಂಪನಿಯು ಇಂತಹ ಆಹಾರ ಪ್ಯಾಕೆಟ್‌ಗಳ ಮೇಲೆ ಮುದ್ರಿಸಿರುವ ಅಂಕಿಅಂಶಗಳ ಪ್ರಕಾರ ಈ ಪ್ಯಾಕೆಟ್‌ಗಳಲ್ಲಿ ಸತ್ವ ಅಂಶವು ಹೆಚ್ಚಾಗಿದ್ದು ಅದು ಮಕ್ಕಳ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ನಾಲ್ಕನೆಯದಾಗಿ, ಈ ಪ್ಯಾಕೆಟ್‌ಗಳಲ್ಲಿನ ಆಹಾರವು ಬಹಳಷ್ಟು ಬಾರಿ ಹಳೆಯದಾಗಿದ್ದು ಕೊಳೆತು ಹೋಗಿರುತ್ತದೆ.

ಅಷ್ಟೇ ಮುಖ್ಯವಾಗಿ ಸಿಕ್ರೆಮ್ ಎಂಬ ಸರ್ಕಾರೇತರ ಸಂಸ್ಥೆಗಳು ಕ್ರಿಸ್ಟಿ ಫ್ರೈಡ್‌ಗ್ರಾಮ್ ಕಂಪನಿ ಅಂಗನವಾಡಿಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಪ್ಯಾಕೆಟ್‌ಗಳನ್ನು ವೈಜ್ಞಾನಿಕ ಸಂಶೋಧನೆಗೆ ಒಳಪಡಿಸಿದಾಗ ಬಹಳಷ್ಟು ಪ್ಯಾಕೇಟುಗಳಲ್ಲಿದ್ದ ಆಹಾರವು ಬಾರೀ ಕಳಪೆಯಾಗಿದ್ದಲ್ಲದೆ ಮಕ್ಕಳ ಆರೋಗ್ಯಕ್ಕೆ ಹಾನಿಕಾರಕವಾದ ಪದಾರ್ಥಗಳಿಂದ ಕೂಡಿದ್ದು ಸಾಬೀತಾಗಿದೆ. ಅಷ್ಟೇ ಅಲ್ಲ, ಇತರೆ ಸಂಘಟನೆಗಳು ನಡೆಸಿದ ಸಮೀಕ್ಷೆಗಳು ಕೂಡ ಅಂಗನವಾಡಿಗಳಿಗೆ ಬರುತ್ತಿರುವ ಮಕ್ಕಳು ಈ ಆಹಾರವನ್ನು ಸೇವಿಸಲಾಗುವುದಿಲ್ಲ ಎಂದಿದ್ದಾರೆಂದೂ, ಇದನ್ನು ತಿನ್ನಲಾರದೆ ಹೆಚ್ಚಿನ ಮಕ್ಕಳು ಅಂಗನವಾಡಿಗಳಿಗೆ ಬರುವುದನ್ನೇ ನಿಲ್ಲಿಸಿದ್ದಾರೆಂದೂ, ಆದರೂ ಅವರ ಹೆಸರಲ್ಲಿ ಕ್ರಿಸ್ಟಿ ಕಂಪನಿ ಹೆಚ್ಚಿನ ಹಣ ಪಡೆಯುತ್ತಿದೆ ಎಂದೂ ಹೇಳಿವೆ.

ಇಂತಹ ಕಾರಣಕ್ಕೇ ಕಳೆದ ಮೇ ತಿಂಗಳಿಂದ ಬೆಂಗಳೂರು, ರಾಮನಗರ, ಧಾರವಾಡ, ಬಳ್ಳಾರಿ, ಚಿಕ್ಕಮಗಳೂರು, ಬಾಗಲಕೋಟೆ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ತುಮಕೂರು, ಉಡುಪಿ, ಹಾಸನ, ಗುಲ್ಬರ್ಗ ಮತ್ತು ಯಡ್ಡಿಯ ಶಿವಮೊಗ್ಗೆಯಲ್ಲಿನ ಜನ ಇನ್ನು ಮುಂದೆ ತಮ್ಮ ಜಿಲ್ಲೆಯ ಅಂಗನವಾಡಿಗಳು ಕ್ರಿಸ್ಟಿ ಕಂಪನಿಯ ಪೌಡರ್ ಆಹಾರವನ್ನು ಸ್ವೀಕರಿಸದೇ ತಾವೇ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವುದಾಗಿ ನಿರ್ಧರಿಸಿದ್ದಾರಲ್ಲದೆ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರೂ ಆಗಿದ್ದಾರೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ ಕರ್ನಾಟಕದಲ್ಲಿ 2005-06ರಲ್ಲಿ ಪ್ರತಿ ಒಂದು ಸಾವಿರ ನವಜಾತ ಶಿಶುಗಳಲ್ಲಿ 43 ಕೂಸುಗಳು ಅಪೌಷ್ಟಿಕತೆಯಿಂದಾಗಿ ಅಸುನೀಗಿದವು. ಇವತ್ತು ಕರ್ನಾಟಕ ರಾಜ್ಯದಲ್ಲಿ ಆರು ವರ್ಷಕ್ಕಿಂತ ಕಿರಿಯರಾದ ಸುಮಾರು ಒಂದೂವರೆ ಕೋಟಿ ಬಡಮಕ್ಕಳಿದ್ದಾರೆ. ಅವರಿಗೆ ಅಂಗನವಾಡಿಗಳಲ್ಲಿ ಸರಿಯಾದ ಬಿಸಿಯೂಟ ಸಿಕ್ಕರೆ ಆ ಕಂದಮ್ಮಗಳು ಬೇರೆ ಏನಿಲ್ಲದಿದ್ದರೂ ತಮ್ಮ ಪ್ರಾಣವನ್ನಾದರೂ ರಕ್ಷಿಸಿಕೊಳ್ಳಬಹುದು.

ಆದರೆ ಯಡಿಯೂರಪ್ಪ ಕ್ರಿಸ್ಟಿ ತರಹದ ಕಂಪನಿಯೊಂದಿಗೆ ಡೀಲ್ ಮಾಡಿಕೊಳ್ಳುವ ಮೂಲಕ ಈ ಅಮಾಯಕ ಮಕ್ಕಳ ಬದುಕಿಗೆ ಮತ್ತು ಭವಿಷ್ಯಕ್ಕೆ ಕಲ್ಲು ಹಾಕಿದ್ದಾನೆ.

ಯಡಿಯೂರಪ್ಪ ಗಣಿ ಕಂಪನಿಗಳಿಂದ ಲಂಚ ಪಡೆದದ್ದನ್ನು ನಿರ್ಲಕ್ಷಿಸಬಹುದು. ಡಿನೋಟಿಫಿಕೇಶನ್ ಮೂಲಕ ಬೆಲೆ ಬಾಳುವ ಭೂಮಿ ಕದ್ದದ್ದನ್ನೂ ಮರೆಯಬಹುದು.

ಆದರೆ..

ಬಡಮಕ್ಕಳ ತಟ್ಟೆಗೇ ಕೈ ಹಾಕಿ ಉದ್ಧಾರವಾದ ಯಡ್ಡಿಯನ್ನು ಮನಃಸಾಕ್ಷಿ ಹೊಂದಿರುವ ಯಾರಿಗಾದರೂ ಕ್ಷಮಿಸಬೇಕೆನಿಸುತ್ತದೆಯೇ?

[illegible]

ಕೆರೆ ಹಣವನ್ನು ಜೇಬಿಗೆ ಚೆಲ್ಲಿದ ಬೋಪಯ್ಯ ಶಿಷ್ಯರು

ಕೊಡಗು ಜಿಲ್ಲೆಯಲ್ಲಿಯೂ ಈಗ ಲೋಕಾಯುಕ್ತ ಪರ್ವ ಆರಂಭಗೊಂಡಿದೆ. ಇದು ವಿಧಾನಸಭಾಧ್ಯಕ್ಷ ಕೆ.ಜಿ. ಬೋಪಯ್ಯನವರ ವಿರುದ್ಧ ಕರ್ನಾಟಕದ ಹಿರಿಯ ಚಿಂತಕ ಮತ್ತು ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟಗಳನ್ನು ಮಾಡುತ್ತಾ ಬಂದಿರುವ ಎ.ಕೆ. ಸುಬ್ಬಯ್ಯನವರು ಜಿಲ್ಲಾ ಪಂಚಾಯತ್ ಸದಸ್ಯೆ ಶ್ರೀಮತಿ ಸರಿತಾ ಪೂಣಚ್ಚರವರ ಪರವಾಗಿ ಮಡಿಕೇರಿಯ ಭ್ರಷ್ಟಾಚಾರ ತಡೆ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸುವ ಮೂಲಕ ನೀಡಿದ ಚಾಲನೆಯಾಗಿದೆ. ಪುರೋಗಾಮಿ ವಕೀಲರುಗಳಾಗಿರುವ ಕೆ.ಆರ್. ವಿದ್ಯಾಧರ ಮತ್ತು ಕುಂಞ ಅಬ್ದುಲ್ಲ ಸುಬ್ಬಯ್ಯನವರೊಂದಿಗೆ ವಕಾಲತ್ತು ವಹಿಸಿದ್ದಾರೆ.

ವಿಧಾನಸಭಾಧ್ಯಕ್ಷ ಕೆ.ಜಿ. ಬೋಪಯ್ಯನವರ ವಿರುದ್ಧ ಇದಕ್ಕಿಂತಲೂ ಗಂಭೀರವಾದ ಆರೋಪ ಹಿಂದೊಮ್ಮೆ ಬಂದಿತ್ತು. ಕಳೆದ ಜಿಲ್ಲಾ ಪಂಚಾಯತ್ ಆಡಳಿತ ಅವಧಿಯಲ್ಲಿ ಅಕ್ರಮ ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಬಂದಿದ್ದರೂ, ಸಭೆ ನಡೆಸಲು ಬೇಕಾದಂತಹ ಕೋರಂ ಭಾರತೀಯ ಜನತಾ ಪಕ್ಷದ ಈ ಅಕ್ರಮ ಮೈತ್ರಿ ಕೂಟಕ್ಕೆ ಇರಲಿಲ್ಲ. ವಿಧಾನಸಭಾಧ್ಯಕ್ಷರು ಬಾರದಿದ್ದರೆ ಸಭೆ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ವೇಳೆಯಲ್ಲಿ ಸಭೆಗೆ ಬಾರದೆ, ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿ ಕೋರಂ ಆಗುವಂತೆ ನೋಡಿಕೊಂಡ ಕೀರ್ತಿ ಬೋಪಯ್ಯನವರಿಗಿದೆ. ಇದನ್ನು ಪತ್ತೆಹಚ್ಚಿದ ಜಿಲ್ಲಾ ಪಂಚಾಯತ್ ಸದಸ್ಯ ವಿ.ಪಿ. ಶಶಿಧರ್‌ರವರನ್ನು ಸಭೆಯಿಂದ ಪೊಲೀಸ್ ಸಹಕಾರದೊಂದಿಗೆ ಹೊರ ಹಾಕಿ, ಸಭೆ ನಡೆಸಿದ್ದಲ್ಲದೆ, ಮುಂದಿನ ದಿನಗಳಲ್ಲಿ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಶಶಿಧರ್ ಅವರನ್ನು ಎದುರಿಸಲು ಸಾಧ್ಯವಾಗದೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರೂ ಸೇರಿ, ಆಡಳಿತಾರೂಢರು ಪಲಾಯನವಾದವನ್ನು ಮಾಡುತ್ತಾ ಬಂದಿದ್ದರು.

ಕೊಡಗು ಜಿಲ್ಲೆ ಕಿತ್ತಳೆಗೆ ಖ್ಯಾತಿ ಪಡೆದಿತ್ತು. ಆದರೆ ಕಿತ್ತಳೆ ಮಾಯವಾಗುತ್ತಿದ್ದುದರಿಂದ ಕೊಡಗಿನ ಕಿತ್ತಳೆಯನ್ನು ಪುನಃಶ್ಚೇತನಗೊಳಿಸಲು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅನುದಾನವನ್ನು ಬಿಡುಗಡೆಗೊಳಿಸಿತ್ತು. ನಾಗಪುರ ಕಿತ್ತಳೆ ತಳಿಯನ್ನು ಜಿಲ್ಲೆಗೆ ತಂದು ಪರಿಚಯಿಸಿದ ಕೀರ್ತಿ ಬೋಪಯ್ಯ ಹಾಗೂ ಅವರ ಶಿಷ್ಯ ಅಂದಿನ ಜಿಲ್ಲಾ ಪಂಚಾಯತ್ ಸದಸ್ಯ ಮನು ಮುತ್ತಪ್ಪನವರಿಗೆ ಸಲ್ಲಬೇಕು. ನಾಗಪುರ ಕಿತ್ತಳೆ ಗಿಡವನ್ನು ಎಷ್ಟು ತಂದರು ಹಾಗೂ ಯಾರಿಗೆ ವಿತರಣೆ ಮಾಡಿದರು ಎಂಬುದು ಇಂದಿಗೂ ನಿಗೂಢವಾಗಿದೆ. ಲಕ್ಷಾಂತರ ರೂಪಾಯಿ ಅನುದಾನ ಮಾತ್ರ ಖರ್ಚಾಗಿದೆ. ಯಾರ ಕಿಸೆಗೆ ಎಷ್ಟು ಮತ್ತು ಯಾರ ಪಾಲು ಎಷ್ಟು ಎಂಬುದು ತಿಳಿದಿಲ್ಲ. ಈ ಮನು ಮುತ್ತಪ್ಪ ಈಗ ಭಾ.ಜ.ಪ.ದ ವಕ್ತಾರ ಹಾಗೂ ಹಗರಣವನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವ ವ್ಯಕ್ತಿ.


ಹಾಲಿ ಜಿಲ್ಲಾ ಪಂಚಾಯತಿಯಲ್ಲಿ ಆರೋಗ್ಯ ಇಲಾಖೆಯಲ್ಲಿ ಕೋಟ್ಯಂತರ ರೂಪಾಯಿ ದುರುಪಯೋಗವಾಗಿದೆ. ಈ ದುರುಪಯೋಗದಲ್ಲಿ ಮೇಲ್ನೋಟಕ್ಕೆ ಬೋಪಯ್ಯನವರ ಶಿಷ್ಯ ಹಾಲಿ ಅಧ್ಯಕ್ಷ ರವಿ ಕುಶಾಲಪ್ಪ ಶಾಮೀಲಾಗಿರುವುದು ಕಂಡು ಬರುತ್ತದೆ. ಇವರ ಜೊತೆಯಲ್ಲಿ ಸಿ.ಇ.ಓ. ಕೃಷ್ಣಪ್ಪ, ಡಿ.ಹೆಚ್.ಓ. ಡಾ. ತಿಮ್ಮಯ್ಯ ಶಾಮೀಲಾಗಿದ್ದು, ಮಾಜಿ ಸದಸ್ಯ ವಿ.ಪಿ. ಶಶಿಧರ್ ಇದನ್ನು ಬಯಲಿಗೆಳೆದು, ಉಪವಾಸ ಸತ್ಯಾಗ್ರಹ ನಡೆಸಿದ ನಂತರ, ಎಂ.ಸಿ. ನಾಣಯ್ಯನವರು ಈ ಬಗ್ಗೆ ಆರೋಗ್ಯ ಇಲಾಖೆಗೆ ಬರೆದ ಪತ್ರದ ಹಿನ್ನಲೆಯಲ್ಲಿ, ಡಾ. ತಿಮ್ಮಯ್ಯ ಅಮಾನತ್ತಿಗೆ ಒಳಗಾಗಿದ್ದಲ್ಲದೆ, ಕಡತಗಳೆಲ್ಲವನ್ನೂ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಇವೆಲ್ಲವೂ ಲೋಕಾಯುಕ್ತ ಅಥವಾ ಅದಕ್ಕಿಂತಲೂ ಮಿಗಿಲಾದ ತನಿಖೆಗೆ ಯೋಗ್ಯವಾದ ಪ್ರಕರಣಗಳು.

ರೇಶ್ಮೆ ಹಡ್ಲು ಹಗರಣ

ಕೊಡಗಿನ ವಿರಾಜಪೇಟೆ ತಾಲೂಕಿನ ತಿತಿಮತಿ ಪಂಚಾಯತಿಯಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ದೊಡ್ಡ ರೇಶ್ಮೆ ಹೊಸಕೆರೆ ಎಂಬ ಪ್ರದೇಶವಿದೆ. ಈ ಕೆರೆಯು ಸುಮಾರು ಮೂರು ಏಕರೆ ಪ್ರದೇಶದಲ್ಲಿದ್ದು, ಇಲ್ಲಿ ಭಾರತ ಸರಕಾರವು ಸಂವಿಧಾನದ ಅನುಚ್ಛೇದ 275(1)ರ ಅಡಿಯಲ್ಲಿ ಸಣ್ಣ ನೀರಾವರಿ ಕಾಮಗಾರಿಗೆ 2006-07ನೇ ಸಾಲಿನಲ್ಲಿ 89.50 ಲಕ್ಷ ರೂಪಾಯಿ ಬಿಡುಗಡೆಗೊಳಿಸಿತ್ತು. ಈ ಅನುದಾನವು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ (ಐ.ಟಿ.ಡಿ.ಪಿ.) ಮೂಲಕ ಬಳಕೆಯಾಗಬೇಕಾಗಿತ್ತು. ಇದನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಮೂಲಕ ಕಾರ್ಯಗತಗೊಳಿಸಲು ನಿರ್ಧರಿಸಲಾಗಿತ್ತಲ್ಲದೆ, ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಲಾಯಿತು.


ಅರಣ್ಯ ಇಲಾಖೆಯ ಈ ಪ್ರದೇಶವನ್ನು ಯಾರು ಸೂಚಿಸಿದರೋ ತಿಳಿಯದು. ಇಂಜಿನಿಯರಿಂಗ್ ವಿಭಾಗ ಅಂದಾಜು ಪಟ್ಟಿ ತಯಾರಿಸುವ ವೇಳೆಗೆ ಈ ಯೋಜನೆಯು 120 ಲಕ್ಷಕ್ಕೆ ಏರಿಕೆಯಾಗಿತ್ತು. ಈ ಅಂದಾಜು ಪಟ್ಟಿಯನ್ನು ಮುಖ್ಯ ಇಂಜಿನಿಯರ್‌ರವರಿಗೆ ಕಳುಹಿಸಿದಾಗ ಅವರು ಸಾಕಷ್ಟು ನ್ಯೂನತೆಗಳನ್ನು ಗಮನಿಸಿ, ಒಂದು ಪತ್ರವನ್ನು 2009-10ರಲ್ಲಿ ಬರೆದಿದ್ದರು. ಆ ಪತ್ರದಲ್ಲಿ ಅವರು ಉಲ್ಲೇಖಿಸಿರುವ ಪ್ರಮುಖ ಅಂಶ 14.1 ಹೆಕ್ಟರ್ ಪ್ರದೇಶದಲ್ಲಿರುವ ಅಚ್ಚುಕಟ್ಟು ಪ್ರದೇಶಕ್ಕೆ ಕೆರೆಯ ಜೀರ್ಣೋದ್ಧಾರ ಕೆಲಸಕ್ಕೆ 1.20 ಕೋಟಿ ಅಧಿಕವಾಗಿದೆ ಎನ್ನುವುದಾಗಿತ್ತು. ಮತ್ತು ಫಲಾನುಭವಿಗಳ ಪಟ್ಟಿ ಇಲ್ಲ ಎನ್ನುವುದಾಗಿತ್ತು. ಹಾಗಾಗಿ ಈ ಕಾಮಗಾರಿಯು ನೆನೆಗುದಿಗೆ ಬಿತ್ತು.

ಇಷ್ಟೊಂದು ಭಾರೀ ಪ್ರಮಾಣದ ಹಣ ಬಳಕೆಯಾಗದೆ ಹೋದರೆ ಹೇಗೆ ಎಂಬುದು ಅಂದು ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷರಾಗಿದ್ದ ಎಸ್.ಎನ್. ರಾಜಾರಾವ್‌ರವರ ಪ್ರಶ್ನೆಯಾಗಿತ್ತು. ಹಾಗಾಗಿ ಈ ಯೋಜನೆ ಕಾರ್ಯಗತಗೊಳ್ಳಲೇಬೇಕು ಎಂದು ಹಿಂದಿನ ಆಡಳಿತದ ಮೇಲೆ ಒತ್ತಡ ತಂದು ಈ ಯೋಜನೆ ನಿರ್ಮಿತಿ ಕೇಂದ್ರಕ್ಕೆ ನೀಡುವಂತೆ ಜಿಲ್ಲಾ ಪಂಚಾಯತ್ ಸಭೆಯಲ್ಲಿ ನಿರ್ಣಯಿಸಲಾಯಿತು. ನಿರ್ಮಿತಿ ಕೇಂದ್ರ ಎಂಬುದು ಒಂದು ದೊಡ್ಡ ಬೋಗಸ್ ಸಂಸ್ಥೆ. ಇದರ ಮೂಲಕ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು ಎಂದರೆ, ಕಾಮಗಾರಿ ಆಗದೆ ಹಣ ದೋಚುವುದು ಎಂದೇ ಅರ್ಥ. ನಕಲಿ ಗಿರಿಜನ ಸರ್ಟಿಫಿಕೇಟ್ ಆಧಾರದಲ್ಲಿ ಗಿರಿಜನ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿರುವ ರಾಜಾರಾವ್ ಓದಿರುವುದು ಐದನೇ ತರಗತಿಯಾದರೂ, 10ನೇ ತರಗತಿಯವರೆಗೆ ಓದಿದ್ದೇನೆ ಎಂದು ಹೇಳಿಕೊಂಡು, ಚುನಾವಣೆಯಲ್ಲಿ ದೃಢೀಕರಣ ನೀಡಿದ್ದು ನ್ಯಾಯಾಲಯದ ಮುಂದೆ ಇದೆ. ಇಂತಹ ಬಾನಗಡಿಗಳನ್ನು ಮಾಡುವುದರಲ್ಲಿ ಎತ್ತಿದ ಕೈಯಾಗಿರುವ ರಾಜಾರಾವ್‌ಗೆ ಕೊಬ್ಬಿದ ಕುರಿಯೊಂದು ಸಿಕ್ಕಂತೆ ಆಗಿತ್ತು.






[illegible] ವಕೀಲರಾದ ಕುಂಞ ಅಬ್ದುಲ್ಲ, ಎ.ಕೆ.ಸುಬ್ಬಯ್ಯ, ಕೆ.ಆರ್.ವಿದ್ಯಾಧರ




[illegible]



[illegible]

ಈ ಯೋಜನೆಯನ್ನು ಆರಂಭದಿಂದಲೂ ಒಂದು ನಿಷ್ಪ್ರಯೋಜಕ ಯೋಜನೆ ಎಂದು ಹಾಲಿ ಜಿಲ್ಲಾ ಪಂಚಾಯತ್ ಸದಸ್ಯೆಯಾಗಿರುವ, ಈ ಕಾಮಗಾರಿಗೆ ಅನುಮೋದನೆ ದೊರೆಯುವ ವೇಳೆಯಲ್ಲಿ ವಿರಾಜಪೇಟೆ ತಾಲೂಕು ಪಂಚಾಯತಿಯ ಅಧ್ಯಕ್ಷೆಯಾಗಿದ್ದ ಸರಿತಾ ಪೂಣಚ್ಚ ಪ್ರತಿಪಾದಿಸುತ್ತಾ ಬಂದಿದ್ದರು. ಆದರೂ ಈ ಯೋಜನೆ ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿತ್ತು. 6-10-2008ರಲ್ಲಿ ಈ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಬೇಕೆಂದು, ಆಗ ವಿಧಾನಸಭೆಯ ಉಪಾಧ್ಯಕ್ಷರಾಗಿದ್ದ ಕೆ.ಜಿ. ಬೋಪಯ್ಯ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳ ನಿರ್ದೇಶನಾಲಯಕ್ಕೆ ಪತ್ರವೊಂದನ್ನು ಬರೆದಿದ್ದರು.



ಎಸ್.ಎನ್. ರಾಜಾರಾವ್

ಇದಾದ ನಂತರವೂ 13-6-2009ರಂದು ಬೋಪಯ್ಯನವರು ವಿಧಾನಸಭಾಧ್ಯಕ್ಷರಾದ ನಂತರ ಮತ್ತೊಂದು ಪತ್ರವನ್ನು ಬರೆದು, 2005-06ರಲ್ಲಿಯೇ ಈ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದ್ದರೂ, ಕಾಮಗಾರಿ ಅನುಷ್ಠಾನಗೊಳ್ಳದೇ ಇರುವುದರಿಂದ, ನಿರ್ಮಿತಿ ಕೇಂದ್ರಕ್ಕೆ ವಹಿಸಬೇಕೆಂದು ಪತ್ರ ಬರೆದಿದ್ದರು.

6-3-2011ರಂದು ಕೆ.ಜಿ. ಬೋಪಯ್ಯ ಹಾಗೂ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಅಲ್ಲಿ ಗುದ್ದಲಿ ಪೂಜೆಯನ್ನು ನೆರವೇರಿಸಿದ್ದರು. ಈ ಬಗ್ಗೆ ತಾನು ಎಷ್ಟೇ ತಕರಾರು ಮಾಡಿದರೂ ಅದನ್ನು ಆಡಳಿತ ಪಕ್ಷದವರು ಕಿವಿಗೆ ಹಾಕಿಕೊಳ್ಳದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿದ ಸರಿತಾ 25-6-2011ರಂದು ಜಿಲ್ಲಾಧಿಕಾರಿಗಳಿಗೆ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು ಪತ್ರ ಬರೆದರು. ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿ, ವರದಿ ನೀಡುವಂತೆ ಉಪವಿಭಾಗಾಧಿಕಾರಿಗಳಿಗೆ ಆದೇಶ ನೀಡಿದರು. ಅದರಂತೆ 3-8-2011ರಂದು ಉಪವಿಭಾಗಾಧಿಕಾರಿಗಳು ಈ ಕಾಮಗಾರಿ ನಡೆಯುವ ಸ್ಥಳಕ್ಕೆ ಭೇಟಿ ನೀಡಿ, ವರದಿಯೊಂದನ್ನು ನೀಡಿದ್ದು, ಅದರಲ್ಲಿ ಅರಣ್ಯ ಪ್ರದೇಶದಲ್ಲಿ ಕಾಮಗಾರಿ ನಡೆಸಲು ಅರಣ್ಯ ಇಲಾಖೆಯ ಪೂರ್ವಾನುಮತಿ ಪಡೆದಿಲ್ಲ, ಮಳೆಗಾಲದಲ್ಲಿ ತಾನು ಭೇಟಿ ನೀಡಿದ್ದರೂ ಅಲ್ಲಿ ನೀರು ಸಂಗ್ರಹಣೆ ಕಂಡು ಬಂದಿಲ್ಲ, ನೀರಿನ ಮೂಲದ ಸ್ಪಷ್ಟತೆ ಇಲ್ಲ, ಫಲಾನುಭವಿಗಳ ಪಟ್ಟಿಯೂ ಲಭ್ಯವಿಲ್ಲ, ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆಗಳ ಬಗ್ಗೆ ಅಧ್ಯಯನ ನಡೆಸಿದಂತೆ ಕಂಡು ಬಂದಿಲ್ಲ, ಮತ್ತು ಈ ಯೋಜನೆಯನ್ನು ಕಾರ್ಯಗತಗೊಳಿಸುವ ಮುನ್ನ ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳಿದ್ದರು.

ಇವೆಲ್ಲದರ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಸರಿತಾ ಪೂಣಚ್ಚ ಈ ವಿಚಾರವನ್ನು ಪ್ರಸ್ತಾಪಿಸಿ, ಅವ್ಯವಹಾರಗಳಲ್ಲಿ ಕೆ.ಜಿ. ಬೋಪಯ್ಯ ಆದಿಯಾಗಿ ಆಡಳಿತ ನಡೆಸುವವರೆಲ್ಲರೂ ಶಾಮೀಲಾಗಿದ್ದಾರೆ ಎಂದು ಆರೋಪಿಸಿ[illegible] ದಾಗ, ಕೆ.ಜಿ. ಬೋಪಯ್ಯನವರ ಹೆಸರನ್ನು ಪ್ರಸ್ತಾಪಿಸಲೆ[illegible] ಬಾರದು ಎಂದು ಆಡಳಿತ ಪಕ್ಷದವರು ಆಕೆಯ ಬಾಯಿ[illegible] ಮುಚ್ಚಿಸಲು ಪ್ರಯತ್ನಿಸಿದ್ದಲ್ಲದೆ, ಆಕೆಯನ್ನು ಪೊಲೀಸ್[illegible] ಸಹಾಯದಿಂದ ಸಭೆಯಿಂದ ಹೊರಕ್ಕೆ ಹಾಕಿದ್ದರು. [illegible] ವೇಳೆಯಲ್ಲಿ ಕಾಂಗ್ರೆಸ್ಸಿನ ಜಿಲ್ಲಾ ಪಂಚಾಯತ್ ಸದಸ್ಯರು ಕೂ[illegible] ಇದು ಸರಿತಾ ಪೂಣಚ್ಚರವರ ಖಾಸಗಿ ವಿಚಾರ ಎನ್ನು[illegible] ರೀತಿಯಲ್ಲಿ ಮೌನ ವಹಿಸಿದ್ದರಲ್ಲದೆ, ಆಕೆಯನ್ನು ಸಭೆಯಿಂ[illegible] ಹೊರ ಹಾಕುವಾಗಲೂ ಪ್ರತಿಭಟಿಸುವ ಕಾರ್ಯವನ್[illegible] ಮಾಡಲಿಲ್ಲ.

ಇಷ್ಟೆಲ್ಲಾ ಆದರೂ ಕಾಮಗಾರಿ ಸ್ಥಗಿತಗೊಳಿಸ[illegible] ಬಿಡುಗಡೆಗೊಂಡ 59 ಲಕ್ಷ ರೂಪಾಯಿಯಲ್ಲಿ 40 ಲ[illegible] ರೂಪಾಯಿಯ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದ[illegible] ಹೇಳಿಕೊಂಡು ನಿರ್ಮಿತಿ ಕೇಂದ್ರದವರು 40 ಲಕ್ಷವನ್[illegible] ಪಡೆದುಕೊಂಡಿದ್ದಾರೆ. ಪಾಲುದಾರರಿಗೆ ಪಾಲು ಸಂದಾಯ[illegible] ವಾಗಿದೆ. ಹಾಗಾಗಿ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿ, ಎ.[illegible] ಸುಬ್ಬಯ್ಯನವರ ಮೂಲಕ ಮಡಿಕೇರಿ ನ್ಯಾಯಾಲಯದ[illegible] ಸರಿತಾ ಪೂಣಚ್ಚ ಮೊಕದ್ದಮೆ ಹೂಡಿದ್ದಾರೆ. ದ್ವಿತೀಯ[illegible] ಆರೋಪಿಯಾಗಿ ಎಸ್.ಎನ್. ರಾಜಾರಾವ್, ಮೂರನೆ[illegible] ಆರೋಪಿಯಾಗಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎನ್[illegible] ಕೃಷ್ಣಪ್ಪ ಹಾಗೂ ನಾಲ್ಕನೇ ಆರೋಪಿಯಾಗಿ ನಿರ್ಮಿತಿ ಕೇಂದ್ರ[illegible] ಯೋಗಾನರಸಿಂಹ ಅವರನ್ನು ಈ ಪ್ರಕರಣದ[illegible] ದಾಖಲಿಸಲಾಗಿದೆ.


ಈಗ ಭಾರತೀಯ ಜನತಾ ಪ[illegible] ಬೋಪಯ್ಯನವರ ಬೆನ್ನಿಗೆ ನಿಂತು, ಅಭಿವೃ[illegible] ಕಾರ್ಯಕ್ಕೆ ಸರಿತಾ ಪೂಣಚ್ಚ ಅಡ್ಡಿಪಡಿಸ[illegible] ತ್ತಿದ್ದಾರೆ ಎಂಬ ಆರೋಪಗಳನ್ನು ಮಾಡ[illegible] ತ್ತಿದ್ದಾರೆ. ಮೊನ್ನೆ ತಾನೇ ಅಧ್ಯಕ್ಷರ ವಿವೇಚನ[illegible] ನಿಧಿಗೆ ಬಂದ 1 ಕೋಟಿ ಹಣದಲ್ಲಿ, 1[illegible] ಲಕ್ಷ ರೂಪಾಯಿ ಬಳಸಿ, ಪ್ರವಾಸ ಮಾ[illegible] ಬಂದ ಅಧ್ಯಕ್ಷರು ಹಾಗೂ ಸದಸ್ಯರ[illegible] ಅಭಿವೃದ್ಧಿಗೆ ಬಂದ ಹಣವನ್ನು ಹೇ[illegible] ದುರ್ಬಳಕೆ ಮಾಡುವುದು ಎಂಬುದನ್[illegible] ತೋರಿಸಿದ್ದಾರೆ. ವಿಧಾನಸಭಾಧ್ಯಕ್ಷರು ಪ[illegible] ಬರೆದ ಕೂಡಲೇ ಅದು ಭ್ರಷ್ಟಾಚಾ[illegible] ಆಗುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಆದ[illegible] ಭ್ರಷ್ಟಾಚಾರ ತಡೆ ಕಾಯ್ದೆಯಡಿಯಲ್ಲಿ, ಭ್ರಷ್ಟಾಚಾರಕ್ಕೆ ಸಹಕಾ[illegible] ನೀಡುವುದು ಕೂಡ ಅಪರಾಧವಾಗುತ್ತದೆ ಎಂದು ಎ.[illegible] ಸುಬ್ಬಯ್ಯ ವ್ಯಾಖ್ಯಾನಿಸುತ್ತಾರೆ. ಜೊತೆಗೆ ಅಭಿವೃದ್ಧಿಗೆ ಅ[illegible] ಎಂದರೆ, ಯಾರ ಅಭಿವೃದ್ಧಿಗೆ ಎಂದು ಪ್ರಶ್ನಿಸುವ ಸುಬ್ಬಯ[illegible] ಗಿರಿಜನರ ಹೆಸರಿಗೆ ಬರುವ ಹಣ ಗಿರಿಜನರಿಗೇ ಬಳಕೆಯಾ[illegible] ಬೇಕೇ ವಿನಹ, ಅದು ಬೇರೆಯವರ ಪಾಲು ಆಗಬಾರದ[illegible] ಎನ್ನುತ್ತಿದ್ದಾರೆ.

ಈ ಕೆರೆಯಿಂದ ಯಾರಿಗಾದರೂ ಪ್ರಯೋಜನವಿದೆಯೆ[illegible] ಎಂದರೆ ಇದು ಮೀಸಲು ಅರಣ್ಯ. ಯಾವ ಗದ್ದೆಯ[illegible] ಉಪಯೋಗಕ್ಕಾಗಿ ಈ ಕೆರೆಯನ್ನು ದುರಸ್ಥಿಪಡಿ[illegible] ಲಾಗುತ್ತಿದೆಯೋ, ಆ ಗದ್ದೆಯಲ್ಲಿ ಭತ್ತ ಬೆಳೆಯದೆ ಸುಮಾ[illegible] 20 ವರ್ಷಗಳು ಆಗಿವೆ. ಕಾರಣ ಆನೆಯ ಹಾವಳಿ ಎನ್ನುತ್ತಾ[illegible] ಅಲ್ಲಿನ ನಿವಾಸಿಗರು.

ಅಭಿವೃದ್ಧಿಯ ಬಗ್ಗೆ ಭಾರತೀಯ ಜನತಾ ಪಕ್ಷಕ್ಕೆ ಇನ್ನಿಲ್ಲ[illegible] ಕಾಳಜಿ. ಏಕೆಂದರೆ ಬಹುತೇಕ ಎಲ್ಲಾ ಕಾಮಗಾರಿಗಳು ಈ[illegible] ಬೇನಾಮಿ ಹೆಸರಿನಲ್ಲಿ ನಡೆಸುತ್ತಿರುವುದು ಆ ಪಕ್ಷ[illegible] ಕಾರ್ಯಕರ್ತರು. ಮರಳು ಹಾಗೂ ಕಲ್ಲು ಗಣಿಗಾರಿಕೆ[illegible] ನಿಷೇಧವಿದ್ದರೂ, ರಾಜಾರೋಷವಾಗಿ ಇದನ್ನು ಸರಬರಾಜ[illegible] ಮಾಡುತ್ತಿರುವವರು ಅದೇ ಪಕ್ಷದವರಾಗಿದ್ದಾರೆ. ಮಾತ್ರವ[illegible] ಇವರೆಲ್ಲರೂ ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವ[illegible] ಆಪ್ತ ವಲಯದಲ್ಲಿ ಇರುವವರಾಗಿದ್ದಾರೆ.

ಲೋಕಾಯುಕ್ತಕ್ಕೆ ಪ್ರಕರಣವನ್ನು ತನಿಖೆಗೆ ಒಪ್ಪಿಸಲ[illegible] ಮೊಕದ್ದಮೆ ಹೂಡಿರುವುದನ್ನು ನಾಗರಿಕರು ಸ್ವಾಗತಿಸುತ್ತಿದ್ದಾ[illegible] ಇನ್ನಷ್ಟು ಪ್ರಕರಣಗಳು ಲೋಕಾಯುಕ್ತಕ್ಕೆ ಸಲ್ಲಿಕೆಯಾಗ[illegible] ಎಂದು ಹೇಳುತ್ತಿದ್ದಾರೆ.

• ವರದಿಗಾ[illegible]




ಸುಳ್ಳು ಮೊಕದ್ದಮೆ

ಸರಿತಾ ಪೂಣಚ್ಚ ಈ ಅವ್ಯವಹಾರವನ್ನು ಬಯಲಿಗೆಳೆಯುತ್ತಿದ್ದಂತೆ ಆಕೆಯ ನಿವಾಸದ ಬಳಿ ಇರುವ ಹೊಳೆಯಿಂದ ಆಕೆಯ ಪತಿ ಜೀತ್ ಪೂಣಚ್ಚ ಅಕ್ರಮವಾಗಿ ಮರಳು ತೆಗೆಯುತ್ತಿದ್ದಾರೆ ಎಂದು ಅವರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿದ್ದಾರೆ. ಈ ಅಕ್ರಮದ ಮೊತ್ತ ಕೇವಲ 5,000 ರೂಪಾಯಿ ಎಂದು ಎಫ್.ಐ.ಆರ್.ನಲ್ಲಿ ದಾಖಲಿಸಲಾಗಿದೆ. ಇದನ್ನು ಈಗ ತನಿಖೆಗಾಗಿ ಸಿ.ಐ.ಡಿ.ಗೆ ಹಸ್ತಾಂತರಿಸಲಾಗಿದೆ. ಇದಕ್ಕಾಗಿ ಸರಿತಾ ಪೂಣಚ್ಚ ಸ್ಪೀಕರ್ ವಿರುದ್ಧ ಸುಳ್ಳು ಮೊಕದ್ದಮೆಯನ್ನು ಹೂಡಿದ್ದಾರೆ ಎಂದು ಭಾ.ಜ.ಪ. ಮಂದಿ ಪ್ರಲಾಪಿಸುತ್ತಿದ್ದಾರೆ. ವಾಸ್ತವದಲ್ಲಿ ಸುಳ್ಳು ಮೊಕದ್ದಮೆ ಜೀತ್ ಪೂಣಚ್ಚ ವಿರುದ್ಧ ಆಗಿದೆ. ಮತ್ತು ಇಷ್ಟೊಂದು ಸಣ್ಣ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ಒಪ್ಪಿಸಿ, ಇತಿಹಾಸವನ್ನು ಕೂಡ ನಿರ್ಮಾಣ ಮಾಡಿದ್ದಾರೆ.

ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ

ಬೋಪಯ್ಯನವರ ಬಗ್ಗೆ ಮಾತನಾಡಿದರೆ ಮೈಮೇಲೆ ಬೀಳುವ ಕಾಂತಿ ಬೆಳ್ಯಪ್ಪ ಎಂಬ ಜಿಲ್ಲಾ ಪಂಚಾಯತ್ ಸದಸ್ಯೆ ಈ ಹಗರಣದ ಬಗ್ಗೆ ಕೂಡ ಬಹಳ ಕೆಟ್ಟದಾಗಿ ಸರಿತಾ ಪೂಣಚ್ಚರವರ ಮೇಲೆ ಮಾತನಾಡಿದ್ದಾರೆ. ಇವರ ಬಾಯಿಯಿಂದ ಹೊರಡುವ ನುಡಿಮುತ್ತುಗಳು ಹೇಗಿವೆ ಎಂದರೆ, ಇತ್ತೀಚೆಗೆ ಸಭೆಯೊಂದರಲ್ಲಿ ಈಕೆ ಮಾತನಾಡುತ್ತಾ ಯುವಕರು ಹಾಗೂ ಯುವತಿಯರು ವಿವಾಹ ಪೂರ್ವದಲ್ಲಿ ರಕ್ತ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕು ಎಂದಿದ್ದಾರೆ. ಹಿಂದೂ ಧರ್ಮದ ಪ್ರತಿಪಾದಕರಾಗಿರುವ ಇವರು ಈ ಹೇಳಿಕೆ ನೀಡುವ ಮೂಲಕ ಹಿಂದೂ ಧರ್ಮಕ್ಕೆ ಅವಮಾನ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗಂತೂ ವಿಶೇಷ ಸ್ಥಾನಮಾನವಿದ್ದು, ಈ ಹೇಳಿಕೆಯ ಮೂಲಕ ಹೆಣ್ಣಿನ ಮಾನದ ಬಗ್ಗೆ ಸಂಶಯ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಇಂತಹವರೆಲ್ಲರೂ ಬೋಪಯ್ಯ ಸುತ್ತ ಇದ್ದು ಬೋಪಯ್ಯನವರಿಗೆ ಬೋ ಫಹಾಕ್ ಹೇಳುವವರಾಗಿದ್ದಾರೆ.



ದ್ವಾರ್ಕಿಯ ವಿಷ್ಣು ಭಜನೆ

ಈ [illegible] ವಿವಾದಾತ್ಮಕ ಮತ್ತು ಭಾರೀ ನಿರೀಕ್ಷೆಯ ಚಿತ್ರ ವಿಷ್ಣುವರ್ಧನ' ಕೊನೆಗೂ ಯಾವುದೇ ಅಡೆತಡೆಯಿಲ್ಲದೇ ತೆರೆಕಂಡಿದೆ.

ಈ ಚಿತ್ರಕ್ಕೆ 'ವಿಷ್ಣುವರ್ಧನ' ಎಂಬ ಹೆಸರಿಡಬಾರದು ಎಂದು ಭಾರತಿ ವಿಷ್ಣುವರ್ಧನ್ ಹಠ ಹಿಡಿದಿದ್ದರು. ಆದರೆ ಏನೇ ಅಡ್ಡಿ ಬಂದರೂ ಈ ಚಿತ್ರಕ್ಕೆ 'ವಿಷ್ಣುವರ್ಧನ' ಎಂದೇ ಹೆಸರಿಡುತ್ತೇನೆ ಎಂದು ನಿರ್ಮಾಪಕ ದ್ವಾರಕೀಶ್ ಕೂಡ ಅದೇ ರೀತಿ ಹಠ ಹಿಡಿದಿದ್ದರು. ಕೊನೆಗೆ ಇದು ಚೇಂಬರ್ ಮೆಟ್ಟಿಲೇರಿದ್ದು, ಅಲ್ಲೊಂದು ಸಣ್ಣ ಸಂಧಾನ ನಡೆದಿದ್ದು ನಿಮಗೆಲ್ಲ ಗೊತ್ತಿರುವ ವಿಚಾರ. ಈ ಕಾರಣಕ್ಕಾಗಿಯೇ ಈ ಚಿತ್ರದ ಬಗ್ಗೆ ಎಲ್ಲಿಲ್ಲದ ಕುತೂಹಲ ಹುಟ್ಟಿಕೊಂಡಿತ್ತು.

ವಿಷ್ಣುವರ್ಧನ್ ಮತ್ತು ದ್ವಾರಕೀಶ್ ನಡುವೆ 'ಲವ್ ಅಂಡ್ ಹೇಟ್' ಸಂಬಂಧವಿದ್ದದ್ದು ಎಲ್ಲರಿಗೂ ಗೊತ್ತು. ಈ ಹಿಂದೆ ಒಮ್ಮೆ ಅವರಿಬ್ಬರ ನಡುವಿನ ಸಂಬಂಧ ಕೆಟ್ಟು ಹೋದಾಗ ಇದೇ ದ್ವಾರಕೀಶ್ 'ದ್ರೋಹಿ' ಎಂಬ ಚಿತ್ರವನ್ನು ವಿಷ್ಣು ಫೋಟೋದೊಂದಿಗೆ ಜಾಹೀರಾತು ನೀಡಿ ಅನೌನ್ಸ್ ಮಾಡಿದ್ದರು. ಈಗ ವಿಷ್ಣು ವಿಧಿವಶರಾದ ನಂತರ ಕುಳ್ಳ ಇದೇ ರೀತಿ ಏನಾದರೂ ಕಿತಾಪತಿ ಮಾಡಬಹುದು ಎಂಬುದು ಅನೇಕರ ಆತಂಕವಾಗಿತ್ತು. ಅದಕ್ಕೊಂದು ಬಲವಾದ ಕಾರಣವೂ ಇತ್ತು. ಅದೇನೆಂದರೆ 'ಆಪ್ತಮಿತ್ರ' ಚಿತ್ರ ಯಶಸ್ವಿಯಾದ ನಂತರ ಮತ್ತೊಮ್ಮೆ ಇವರಿಬ್ಬರ ಸಂಬಂಧ ಹಳಸಿಹೋಗಿತ್ತು. ಆ ಕಾರಣಕ್ಕಾಗಿಯೇ ದ್ವಾರಕೀಶ್ ಎಷ್ಟೇ ಪ್ರಯತ್ನಪಟ್ಟರೂ ವಿಷ್ಣು ಕುಳ್ಳನಿಗೆ ತಮ್ಮ ಕಾಲ್‌ಶೀಟ್ ನೀಡಿರಲಿಲ್ಲ.



ಈಗ ಮತ್ತೆ ಹೊಸ ಸಿನಿಮಾ ವಿಷಯಕ್ಕೆ ಹೋಗೋಣ. ಈ ಚಿತ್ರದ ಮುಖ್ಯ ಆಸ್ತಿ ದ್ವಾರಕೀಶ್ ಇದಕ್ಕೆ ಜಾಣತನದಿಂದ 'ವಿಷ್ಣುವರ್ಧನ' ಎಂದು ಹೆಸರಿಟ್ಟಿರುವುದು. ಬಹುಶಃ ಈ ಚಿತ್ರಕ್ಕೆ ಬೇರೆ ಹೆಸರಿಟ್ಟು ಇದನ್ನು ಬಿಡುಗಡೆ ಮಾಡಿದ್ದರೆ ಇದು ಸುದೀಪ್ ನಟಿಸಿದ ಮಾಮೂಲಿ ಕಮರ್ಷಿಯಲ್ ಚಿತ್ರವಾಗುತ್ತಿತ್ತು. ಆದರೆ ಚಿತ್ರಕ್ಕೆ ವಿಷ್ಣುವರ್ಧನ ಎಂಬ ಹೆಸರಿಟ್ಟದ್ದರಿಂದ ಮತ್ತು ಚಿತ್ರದುದ್ದಕ್ಕೂ ಅಲ್ಲಲ್ಲಿ ವಿಷ್ಣುವರ್ಧನ್ ಅವರ ದೃಶ್ಯಗಳನ್ನು ಬಳಸಿರುವುದರಿಂದ ಚಿತ್ರಕ್ಕೆ ಹೊಸ ಆಯಾಮ ದೊರೆತಿದೆ. ಹಾಗೆಯೇ ವಿಷ್ಣುವರ್ಧನ್‌ರವರನ್ನು ಹಾಡಿ, ಹೊಗಳುವ ಸಂಭಾಷಣೆಗಳು ಅಲ್ಲಲ್ಲಿ ಮೂಡಿಬರುವುದರಿಂದ ಒಂದು ರೀತಿಯ ಮಜಾ ಸಿಗುತ್ತದೆ.

ಆದರೆ ಭಾರತಿ ವಿಷ್ಣುವರ್ಧನ್ ಮತ್ತು ವಿಷ್ಣು ಅಭಿಮಾನಿಗಳು ಆತಂಕಗೊಂಡಿದ್ದಂತೆ ಇಡೀ ಚಿತ್ರದಲ್ಲಿ ಎಲ್ಲಿಯೂ, ಯಾವ ರೀತಿಯಲ್ಲಿಯೂ ವಿಷ್ಣುವರ್ಧನ್‌ರವರ ಇಮೇಜ್‌ಗೆ ಧಕ್ಕೆ ಬರುವ ದೃಶ್ಯವಾಗಲಿ, ಸಂಭಾಷಣೆಯಾಗಲಿ ಇಲ್ಲವೇ ಇಲ್ಲ. ಹಾಗೆ ನೋಡಿದರೆ ಇಡೀ ಚಿತ್ರವನ್ನು ದ್ವಾರಕೀಶ್ [illegible] ಆಪ್ತಮಿತ್ರ ವಿಷ್ಣುವರ್ಧನ್‌ಗೆ ಶ್ರದ್ಧಾಂಜಲಿ ತರಹ ರೂಪಿಸಿದ್ದಾರೆ ಎಂದು ಹೇಳಬಹುದು.

ಒಟ್ಟಾರೆಯಾಗಿ "ವಿಷ್ಣುವರ್ಧನ್ ಹೆಣ್ಣುಮಕ್ಕಳಿಗೆ ಗೌರವವನ್ನು ನೀಡುತ್ತಿದ್ದರು. ಅವರ ಸಮ್ಮುಖದಲ್ಲಿ ಯಾವುದೇ ಹೆಣ್ಣು ಮಗುವಿಗೆ ಅನ್ಯಾಯವಾದರೆ ಅವರು ಅದನ್ನು ಸಹಿಸುತ್ತಿರಲಿಲ್ಲ" ಎಂಬ ಸಂದೇಶವನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ. ಹೀಗಾಗಿ ಪರೋಕ್ಷವಾಗಿ ಸುದೀಪ್ ಕೂಡ ವಿಷ್ಣುವರ್ಧನ್ ಅಭಿಮಾನಿ ರೀತಿಯಲ್ಲಿ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆ ಮೂಲಕ ವಿಷ್ಣು ಬಿಟ್ಟುಹೋದ ಜಾಗವನ್ನು ತುಂಬಲು ಸುದೀಪ್ ಯೋಗ್ಯವಾದ ನಟ ಎಂಬಂತೆ ದ್ವಾರಕೀಶ್ ಚಿತ್ರಿಸಿದ್ದಾರೆ.

ಹೀಗಾಗಿ ಈ ಚಿತ್ರ ಬರೀ ಸುದೀಪ್ ಅಭಿಮಾನಿಗಳಿಗೆ ಮಾತ್ರವಲ್ಲ ವಿಷ್ಣು ಅಭಿಮಾನಿಗಳಿಗೂ ಸಂತೋಷವನ್ನು ನೀಡುವುದರಲ್ಲಿ ಸಂಶಯವಿಲ್ಲ. ಅಂದರೆ ಒಂದೇ ಚಿತ್ರದ ಮುಖಾಂತರ ಎರಡು ದೊಡ್ಡ ನಟರ ಅಭಿಮಾನಿಗಳ ಪ್ರೀತಿಯನ್ನು ಪಡೆಯುವ ಮುಖಾಂತರ ನಿರ್ಮಾಪಕ ದ್ವಾರಕೀಶ್ ತನ್ನ ಚಾಕಚಕ್ಯತೆಯನ್ನು ಪ್ರದರ್ಶಿಸಿದ್ದಾರೆಂದೇ ಹೇಳಬೇಕು.

ಆದರೆ 'ವಿಷ್ಣುವರ್ಧನ' ಚಿತ್ರ ಸುದೀಪ್ ಮತ್ತು ವಿಷ್ಣು ಅಭಿಮಾನಿಗಳಿಗೆ ಮಾತ್ರ ಇಷ್ಟವಾಗುವಂತಹ ಚಿತ್ರ. ಇಡೀ ಕುಟುಂಬದ ಸದಸ್ಯರು ಒಟ್ಟಿಗೆ ಕುಳಿತು ನೋಡುವಂತಹ ಚಿತ್ರವಂತೂ ಇದಲ್ಲ. ಹಾಗಂತ ಈ ಚಿತ್ರ ಸ್ವಮೇಕ್ ಎಂದು ಹೇಳಲೂ ಕಷ್ಟವಾಗುತ್ತದೆ. 2008 ರಲ್ಲಿ ತೆಲುಗಿನಲ್ಲಿ ಬಂದ 'ನಿನ್ನ ನೇಡು ರೇಪು' ಚಿತ್ರದ ಪ್ರಭಾವ ಈ ಚಿತ್ರದುದ್ದಕ್ಕೂ ಕಾಣಿಸುತ್ತದೆ. ಮೊದಲ ಬಾರಿಗೆ ನಿರ್ದೇಶನದ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ಕುಮಾರ್ ತುಂಬಾ ಜಾಣತನದಿಂದ ತೆಲುಗು ಚಿತ್ರವನ್ನು ಇಲ್ಲಿಯ ವಾತಾವರಣಕ್ಕೆ ಹೊಂದುವಂತೆ ರೂಪಾಂತರಿಸಿದ್ದಾರೆ.


ಈ ವರ್ಷ ಅನೇಕ ಚಿತ್ರಗಳು ಭಾರೀ ಪ್ರಚಾರವನ್ನು ಹುಟ್ಟುಹಾಕಿದ್ದವು. ಅಂತಹ ಚಿತ್ರಗಳಲ್ಲಿ ಪ್ರಮುಖವಾದ 'ಜೋಗಯ್ಯ' ಮತ್ತು 'ಜರಾಸಂಧ' ಒಂದೇ ವಾರಕ್ಕೆ ನೆಲಕಚ್ಚಿದ್ದವು. ಆದರೆ 'ವಿಷ್ಣುವರ್ಧನ' ಚಿತ್ರ ಅಂತಹ ಸೋತ ಚಿತ್ರಗಳ ಸಾಲಿಗೆ ಖಂಡಿತ ಸೇರುವುದಿಲ್ಲ. ಸುದೀಪ್ ಅಭಿನಯದ ಈ ಚಿತ್ರ ಏನಿಲ್ಲವೆಂದರೂ ಒಂದೈವತ್ತು ದಿನಗಳ ಕಾಲ ಪ್ರದರ್ಶನ ಕಾಣುವ ಸಾಧ್ಯತೆ ಇದ್ದೇ ಇದೆ. ಮುಖ್ಯ ಪಾತ್ರದಲ್ಲಿ ಸುದೀಪ್ ವಿಜೃಂಭಿಸಿ ಇಡೀ ಚಿತ್ರದ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಂಡಂತೆ ಚೆನ್ನಾಗಿ ನಟಿಸಿದ್ದಾರೆ. ಸುದೀಪ್‌ಗೆ ಪೈಪೋಟಿ ನೀಡುವಂತೆ ನಟಿಸಿರುವವರು ಖಳನಟ ಸೋನು ಸೂದ್. ಈತ ಅನೇಕ ಆ್ಯಂಗಲ್‌ನಲ್ಲಿ ಹಳೆ ಕಾಲದ ಅಮಿತಾಬ್ ಬಚ್ಚನ್ ಅವರನ್ನು ಹೋಲುತ್ತಾರೆ.

ಅಂತೂ ಇಂತೂ ಈ ಚಿತ್ರ ಬಿಡುಗಡೆಯಾದ ನಂತರ ಸುದೀಪ್ ಮತ್ತು ವಿಷ್ಣು ಅಭಿಮಾನಿಗಳ ನಡುವೆ ಬೀದಿ ಜಗಳಗಳೇ ಆಗಬಹುದು ಎಂಬ ಭಯದ ವಾತಾವರಣ ನಿರ್ಮಾಣವಾಗಿತ್ತು. ಅದೃಷ್ಟವಶಾತ್ ಅಂತಹ ಯಾವುದೇ ದುರ್ಘಟನೆಗೆ ಈ ಚಿತ್ರ ಅವಕಾಶ ಮಾಡಿಕೊಡುತ್ತಿಲ್ಲ ಎಂಬುದೇ ಸಂತೋಷದ ಸಂಗತಿ.

• ಶೆಣೈ

ನೆನಪಿನ ಚೂರುಗಳು ಕತೆಗಳಾದಾಗ...


ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

'ನಮ್ಮೂರು ತುಂಬಾ ಹಿಂದುಳಿದ ಗ್ರಾಮ. ದೇಶ ಇಷ್ಟೊಂದು ಮುಂದುವರೆದಿದೆ ಅಂತ ಹೇಳ್ತಿದ್ರೂ ಇವತ್ತಿಗೂ ನಮ್ಮೂರಿಗೆ ಬಸ್ಸು ಇಲ್ಲ! ಇದು ಕೇಳುಗರಿಗೆ ವಿಪರ್ಯಾಸ ಅನಿಸಿದ್ರೂ ಅಷ್ಟೇ ವಾಸ್ತವ! ನಾನು ಚಿಕ್ಕವನಿದ್ದಾಗಲಾದರೂ ಪರವಾಗಿಲ್ಲ ವಾರಕ್ಕೋ, ತಿಂಗಳಿಗೋ ಕೆಂಪು-ಬಿಳಿ ಬಸ್ಸು ದರ್ಶನ ನೀಡ್ತಿತ್ತು, ಆದ್ರೆ ಈಗ ಅದೂ ಇಲ್ಲ! ಇಷ್ಟೊಂದು ಹಿಂದುಳಿದ ಒಂದು ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿದ ನನಗೆ, ನನ್ನ 10ನೇ ವಯಸ್ಸಿನಲ್ಲಿಯೇ ನಮ್ಮೂರ ಸಮಸ್ಯೆಗಳು ನನ್ನಲ್ಲಿ ಜಾಗೃತಿ ಹುಟ್ಟಿಸಿದವು...' ಹೀಗೆ ತಮ್ಮ ಬದುಕಿನ ನೆನಪಿನ ಚೂರುಗಳನ್ನು ಆಯುತ್ತಾ ಅದಕ್ಕೆ ಅಕ್ಷರ ರೂಪ ತೊಡಿಸಿ ಕತೆಯಾಗಿಸಿದವರು ವಿಶ್ವನಾಥಪಾಟೀಲ ಗೋನಾಳ. ತಮ್ಮ ಕತೆಗಳನ್ನು ಸಿಂಧನೂರು, ರಾಯಚೂರಿನ ಸ್ಥಳೀಯ ಪತ್ರಿಕೆಗಳು ಪ್ರಕಟಿಸುತ್ತವೋ ಇಲ್ಲವೋ ಎಂಬ ಅನುಮಾನವಿಟ್ಟುಕೊಂಡೇ ಕತೆಗಳನ್ನು ಬರೆಯಲು ಹೊರಟ ವಿಶ್ವನಾಥರ ಕತೆಗಳನ್ನು ಮುಂದೆ ರಾಜ್ಯ ಮಟ್ಟದ ದೊಡ್ಡ ಪತ್ರಿಕೆಗಳು ಸಾಲುಸಾಲಾಗಿ ಪ್ರಕಟಿಸಿದವು. ಹೀಗೆ ಅಲ್ಲಲ್ಲಿ ಪ್ರಕಟಗೊಂಡ ತಮ್ಮ ಇದುವರೆಗಿನ ಎಲ್ಲ ಕತೆಗಳನ್ನು ಸೇರಿಸಿ ಲೇಖಕರು ತಮ್ಮ ಚೊಚ್ಚಲ ಕಥಾ ಸಂಕಲನ 'ಚೂರುಕಾಗದ'ವನ್ನು ಹೊರತಂದಿದ್ದಾರೆ. ಪುಟ್ಟ ಹುಡುಗನೊಬ್ಬ ಹೊಸ ಅಂಗಿತೊಟ್ಟು ಊರ ತುಂಬಾ ಓಡಾಡುವ ಸಂಭ್ರಮವನ್ನು ಅವರ ಮುನ್ನುಡಿಯ ಮಾತುಗಳು ಕಣ್ಣಮುಂದೆ ತಂದು ನಿಲ್ಲಿಸುತ್ತವೆ.

ಹದಿನಾಲ್ಕು ಕತೆಗಳನ್ನು ಒಳಗೊಂಡ ಈ ಸಂಕಲನದ ಬಹುತೇಕ ಕತೆಗಳಲ್ಲಿ ಲೇಖಕರ ಹರೆಯ ಮತ್ತು ಬರೆಯಲೇಬೇಕೆನ್ನುವ ತುಡಿತ ಈ ಸಂಕೀರ್ಣ ಸಮಾಜವನ್ನು ಗ್ರಹಿಸಲು ಯತ್ನಿಸಿರುವ ಇನ್ನೂ ಮಾಗದ ನೋಟಗಳು ಸಿಗುತ್ತವೆ. 'ಆತ್ಮ ಸಂಗ್ರಹಿಸಿಡಲಾಗದು' ಕತೆಯಲ್ಲಿ ಕತೆಗಾರನ ಸ್ವಗತವೇ ಕಥಾ ವಸ್ತುವಾಗಿ ಬೆಳೆದಿದೆ. ವಿಜ್ಞಾನ ಶೋಧಿಸಿದ ಅತ್ಯಾಧುನಿಕ ತಂತ್ರಜ್ಞಾನಗಳು ಕೂಡ ಮನುಷ್ಯನ ಆತ್ಮವನ್ನು ಸಂಗ್ರಹಿಸಲಾಗದೆ ಸೋಲುತ್ತವೆ ಎಂಬುದನ್ನು ಹೇಳಲು ಕತೆಗಾರರು ಹೊಸ ನಿರೂಪಣಾ ತಂತ್ರವನ್ನು ಅನುಸರಿಸಿದ್ದಾರೆ. ವಿಜ್ಞಾನಿಗಳು ಸತ್ತ ಯುವಕನ ಆತ್ಮವನ್ನು ಸೆರೆಹಿಡಿಯಲು ಪ್ರಯತ್ನಿಸಿ ಸಫಲವಾಗಿದ್ದರು. ಆದರೆ ಸೆರೆಹಿಡಿದ ಅರ್ಧ ಗಂಟೆಯಲ್ಲಿಯೇ ಆತ್ಮವನ್ನು ಸಂಗ್ರಹಿಸಿಟ್ಟಿದ್ದ ಅತ್ಯಾಧುನಿಕ ಫ್ಲಾಸ್ಕ್ ಬಿರುಕುಬಿಟ್ಟಿದೆ. ಯುವಕನ ಆತ್ಮವು ಆ ಫ್ಲಾಸ್ಕನ್ನು ಸೀಳಿಕೊಂಡು ಹೊರ ಹೋಗಿದೆ. ಅಂದರೆ ಆತ್ಮವನ್ನು ಬಂಧಿಸಿಡುವ ಯಾವ ತಂತ್ರಜ್ಞಾನವನ್ನೂ ವಿಜ್ಞಾನ ಕಂಡುಹಿಡಿಯಲು ಸಾಧ್ಯವಾಗಿಲ್ಲ ಎಂದು ಹೇಳುತ್ತಲೇ ಕತೆ ಯಾವುದೇ ತಾರ್ಕಿಕ ಅಂತ್ಯಕಾಣದೆ ಹಠಾತ್ತಾಗಿ ಕೊನೆಗೊಳ್ಳುತ್ತದೆ. ಅಷ್ಟೊಂದು ಬಲಿಷ್ಠವಾಗಿರುವ ಆತ್ಮವನ್ನು ಸಂಗ್ರಹಿಸಿಡಲಾಗದು ಎಂಬ ತಮ್ಮ ಸಂಶೋಧನೆಯಿಂದ ದೊರಕಿದ ಫಲಿತಾಂಶಗಳನ್ನಿಟ್ಟುಕೊಂಡು ಹೊಸ ಭಾಷ್ಯ ರಚಿಸಲು ಈ ವಿಜ್ಞಾನಿಗಳು ಹಟತೊಟ್ಟಿದ್ದಾರೆ ಎಂಬುದನ್ನು ಲೇಖಕರು 'ಆತ್ಮ ಸಂಗ್ರಹಿಸಿಡಲಾಗದು' ಕತೆಯಲ್ಲಿ ನಿರೂಪಿಸಲು ಯತ್ನಿಸಿದ್ದಾರೆ. ಜಾನಪದ, ಧಾರ್ಮಿಕ, ಸಾಮಾಜಿಕ ನ್ಯಾಯದ ತಲ್ಲಣಗಳ ಜೊತೆಗೆ ಹುಸಿಯೆನಿಸದ ಆದರ್ಶವಿಟ್ಟುಕೊಂಡ ಕತೆಗಳನ್ನು ಬರೆಯ ಹೊರಟಂತೆ ಲೇಖಕರು ಭಾವಾವೇಶಕ್ಕೆ ಒಳಗಾಗಿ ಬರೆದಿರುವ 'ತಾಯಿಯ ಹೆಣ', 'ರಿಕ್ಷಾವಾಲ', 'ಕಳೆದುಕೊಳ್ಳುವುದು ಏನೂ ಇಲ್ಲ' ತರಹದ ಸಿನಿಮೀಯ ಅನ್ನಿಸುವ ಕೆಲವು ಕತೆಗಳು ಈ ಸಂಕಲನದಲ್ಲಿವೆ.



ಇನ್ನೂ ಈ ಸಂಕಲನದ ಎಲ್ಲ ಕತೆಗಳನ್ನು ಗ್ರಹಿಸಿ ಅದಕ್ಕೊಂದು ಚೂಪಾದ ಮುನ್ನುಡಿ ಬರೆದಿರುವ ಈ ಕಾಲದ ಸೂಕ್ಷ್ಮಸಂವೇದನೆಯ ಒಳಗಣ್ಣಿನ ಕವಿ ರವಿ ದ್ರಾವಿಡ 'ಒಟ್ಟಾರೆಯಾಗಿ ಈತನಿನ್ನು ನಮ್ಮ ಪರಂಪರೆಯ ಸ್ಫೋಟಕ ಶಕ್ತಿ ಇರುವ ಬುದ್ಧನ ಕತೆಗಳು, ಜೈನ ಕತೆಗಳು ಹಾಗೂ ಜಾನಪದ ಕತೆಗಳ ಅಧ್ಯಯನ ಮಾಡುವುದು ಒಳ್ಳೆಯದು. ಯಾಕೆಂದರೆ ಸಾಮಾಜಿಕ ನ್ಯಾಯದಂತಹ ಕಥಾ ವಸ್ತುಗಳು ಪಿರಮಿಡ್ ಶ್ರೇಣಿಯ ಸಮಾಜದ ಕಟ್ಟಕಡೆಯ ನ್ಯಾಯವಾಗಿದೆ. ಅದರೊಂದಿಗೆ ರಾಜಕೀಯ ಹಾಗೂ ಧರ್ಮದ ಜ್ಞಾನ ತುಂಬಾ ಮುಖ್ಯವಾದವು. ಒಟ್ಟಾರೆಯಾಗಿ ಹೇಳುವುದಾದರೆ ಈತ ಬೆಳೆಯುತ್ತಿರುವ ಕತೆಗಾರ. ಬೀಜ ಮರವಾಗಿ ಹಣ್ಣು ಕೊಡುವ ಭರವಸೆ ನನಗಿದೆ' ಎಂದು ಹೇಳಿದ್ದಾರೆ. ಈ ಮಾತುಗಳು ಲೇಖಕರ ಮುಂದಿನ ಕತೆಗಳಿಗೆ ಹೊಸ ಜೀವ ತುಂಬಲಿ.

ಚೂರುಕಾಗದ


(ಕಥಾ ಸಂಕಲನ)

ಲೇಖಕರು: ವಿಶ್ವನಾಥಪಾಟೀಲ ಗೋನಾಳ
ಪ್ರಕಾಶಕರು: ಎಚ್.ವಿ.ಎಸ್. ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, 224, 8ನೇ ಕ್ರಾಸ್, ಕೆಂಪೇಗೌಡ ನಗರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-91
ಪುಟಗಳು: 120, ಬೆಲೆ: ರೂ.70, ಪ್ರಕಟಣೆ: 2010

ಲಂಕೇಶ್ ಪ್ರಕಾಶನ

ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ಬೆಂಗಳೂರು-4 ಫೋನ್: 26676427

ಶೀರ್ಷಿಕೆ	ಬೆಲೆ
[illegible]ಲು ಕಾವ್ಯ - ಸಂಗ್ರಹ 1	150.00
[illegible]ಲು ಕಾವ್ಯ - ಸಂಗ್ರಹ 2	150.00
[illegible]ಲು ಕಾವ್ಯ - ಸಂಗ್ರಹ 3	200.00
[illegible]ತ್ರ ಸಮೂಹ	90.00
[illegible]ಕ್ಷರ ಹೊಸ ಕಾವ್ಯ	250.00
[illegible]ುರೆಯುವಮುನ್ನ-ಸಂಗ್ರಹ 1	150.00
[illegible]ುರೆಯುವಮುನ್ನ-ಸಂಗ್ರಹ 2	150.00
[illegible]ುರೆಯುವಮುನ್ನ-ಸಂಗ್ರಹ 3	150.00
[illegible]ಸಕೆ ಕಾರಂಜಿಯ ಸ್ಪರ್ಶ	150.00
[illegible] ಪರಕ ಈ ಪುಲಕ	125.00
[illegible]ಟ-ಜೂಜು-ಮೋಜು!	150.00
[illegible]ಕೆ-ಟಿಪ್ಪಣಿ 1	200.00
[illegible]ಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಸಾಹಿತಿ-ಸಾಹಿತ್ಯ	300.00
ರೂಪಕ ಲೇಖಕರು	70.00
ಕಂಡದ್ದು ಕಂಡಹಾಗೆ	100.00
ಪ್ರಸ್ತುತ	80.00
ಹುಳಿಮಾವಿನ ಮರ	250.00
ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ಪಾಪಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00
ಪಾಪದ ಹೂಗಳು	60.00
ಬಿರುಕು	40.00
ಸಂಕ್ರಾಂತಿ	45.00
ತೆರೆಗಳು	50.00
ಈಡಿಪಸ್ ಮತ್ತು ಅಂತಿಗೊನೆ	60.00
ಟಿ. ಪ್ರಸನ್ನನ ಗೃಹಸ್ಥಾಶ್ರಮ	50.00
ಗುಣಮುಖ	30.00
ಕ್ರಾಂತಿ ಬಂತು ಕ್ರಾಂತಿ	40.00
ಕಪ್ಪು ಮಲ್ಲಿಗೆ	75.00
ಕಂಡಹಾಗೆ ಭಾಗ-1	125.00
ಕಂಡಹಾಗೆ ಭಾಗ-2	150.00
ದರವೇಶಿ ಕತೆಗಳು	90.00
ಬಸವರಾಜಮಾರ್ಗ	40.00
ಬೆನಜೀರ್	25.00
ಆವರಣ ಎಂಬ ವಿ-ಕೃತಿ	100.00
ಜೈಲೆಂಬ ಲೋಕದಲ್ಲಿ	75.00
ವೇದಾಂತ ರೆಜಿಮೆಂಟ್	60.00
ಕಳೆದುಕೊಂಡವಳು	45.00
ನೂರುಸ್ವರ	60.00
ಟ್ರೇನ್ ಟು ಪಾಕಿಸ್ತಾನ್	125.00
ಮಿಡತೆಗಳ ಬರವಿಗೆ....	100.00
ಡಿಸೆಂಬರ್ 13	150.00
ಮನುಸ್ಮೃತಿ	20.00
ಆರೋಗ್ಯ ಮತ್ತು ಜೀವನ	125.00
ತೇಜಸ್ವಿ ನೆನಪು	100.00
ಜಬೀವುಲ್ಲಾ ಕೊಟ್ಟ ಕೋಳಿ	100.00
ಮುತ್ತುರಾಜನ ಮುತ್ತು	175.00
ವಿಷ್ಣು ನೂರೊಂದು ನೆನಪು	150.00
ಓ ಈಳಂ	250.00
ಖೈರ್ಲಾಂಜಿ	200.00
ಕಮಲಾ ದಾಸ್ ಕಥೆಗಳು	60.00
ಮಾಂಟೊ ಕಥೆಗಳು	80.00
ಕೋಮುವಾದ	60.00
ಜಾತಿ ಪದ್ಧತಿ	125.00
ರಾಮಾಯಣ ವಿಷವೃಕ್ಷ	75.00
ಅರೇಬಿಯನ್ ನೈಟ್ಸ್	150.00
ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು	80.00
ಚೆಕ್‌ಪೋಸ್ಟ್	100.00
Some-ಪದ	80.00
ಬಿಡಿಚಿತ್ರಗಳು	60.00
ಗೋವು ಪವಿತ್ರ ಎಂಬ ಮಿಥ್ಯೆ	80.00
ಕರ್ಕರೆಯನ್ನು ಕೊಂದವರ್ಯಾರು?	200.00
ಅಸ್ಪೃಶ್ಯ ವಸಂತ	200.00
ಬಾಲಗೋಪಾಲ್ ಬರಹಗಳು	150.00
ಬದುಕು-ಬಯಲು	200.00
ಚಾರ್ವಾಕ	250.00
ಜಂಗಲ್‌ನಾಮಾ	175.00
ತಾಜುಮಾ ಕವಿತೆಗಳು	75.00
ಅಂತ್ಯಜರ ತತ್ವ ಚಿಂತನೆ	100.00



ಶಾಲೆಗಳನ್ನು ಮುಚ್ಚಿದರೆ ಕನ್ನಡಕ್ಕೆ ಪೆಟ್ಟು

ಹಿಂದಿಯಿಂದಲೂ ಕನ್ನಡ ಭಾಷೆಗೆ ಪೆಟ್ಟು ಬೀಳುತ್ತಿದೆ. ಪ್ರಾಥಮಿಕ ತರಗತಿಯಲ್ಲಿ ಕನ್ನಡಕ್ಕೆ ಸೇರಿಕೊಂಡರೂ ಹೈಸ್ಕೂಲಿಗೆ ಬರುವಾಗ ಹಿಂದಿಗೆ ಬದಲಾಯಿಸಿಕೊಳ್ಳುತ್ತಾರೆ. ಕನ್ನಡದ ಈ ಎಲ್ಲ ಗೊಂದಲಗಳಿಂದಾಗಿ ಪದ[illegible] ಪೂರ್ವ ತರಗತಿಯಲ್ಲಿ ಹಿಂದಿಗೆ ಬದಲಾಯಿಸಿಕೊಂಡವರೂ ಇದ್ದಾರೆ. ಕನ್ನಡದ ವ್ಯಾಕರಣ, ಹಳೆಗನ್ನಡ ಇವೆಲ್ಲವೂ ಮಕ್ಕಳಿಗೆ ಕಬ್ಬಿಣದ ಕಡಲೆಯೆಂದೆನ್ನಿಸುತ್ತದೆ.

ಇಂದು ಕನ್ನಡ ಶಾಲೆಗಳನ್ನು ಮುಚ್ಚುವ ಕುರಿತು ಬಹಳ ಚರ್ಚೆಗಳಾಗುತ್ತಿವೆ. ವಿದ್ಯಾರ್ಥಿಗಳು ತೀರಾ ಕಡಿಮೆ ಸಂಖ್ಯೆಯಲ್ಲಿದ್ದಾರೆಂಬುದು ಇದಕ್ಕೆ ಕಾರಣವಾಗಿದೆ.

ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಯಾಕೆ ಕಮ್ಮಿಯಾಗುತ್ತಿದೆ ಎಂಬ ಕುರಿತು ಸರ್ಕಾರ ಯೋಚಿಸಬೇಕು. ಒಂದೆಡೆ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಮ್ಮಿಯಾಗುತ್ತಿದ್ದರೆ ಇನ್ನೊಂದೆಡೆಯಲ್ಲಿ ಒಂದು ತರಗತಿಯಲ್ಲಿ ನೂರಕ್ಕಿಂತ ಹೆಚ್ಚು ಮಕ್ಕಳಿರುತ್ತಾರೆ. ಅವರಿಗೆ ಪಾಠ ಮಾಡಲು ಸಮನಾದ ಅಧ್ಯಾಪಕರಿಲ್ಲ, ಇಂತಹ ತರಗತಿಯನ್ನು ಎರಡು ಭಾಗ ಮಾಡಬೇಕೆಂದರೆ ಅದಕ್ಕೆ ಬೇಕಾದ ತರಗತಿ ಕೋಣೆಗಳಿರುವ ಕಟ್ಟಡಗಳೇ ಇಲ್ಲ; ಪೀಠೋಪಕರಣಗಳಿಲ್ಲ, ಮೂರು ತರಗತಿಗಳಿಗೆ ಒಬ್ಬರೇ ಅಧ್ಯಾಪಕರಿರುವ ಶಾಲೆಗಳೂ ಇವೆ. ಒಂದು ಕೋಣೆಯಲ್ಲಿ ಕುರಿ ದೊಡ್ಡಿಗಳಂತೆ ಮಕ್ಕಳನ್ನು ತುಂಬಿಸಿದಾಗ ಆ ಎಲ್ಲ ವಿದ್ಯಾರ್ಥಿಗಳೆಡೆಗೆ ಸಮನಾಗಿ ನಿಗಾವಹಿಸಲು ಓರ್ವ ಅಧ್ಯಾಪಕನಿಗೆ ಸಾಧ್ಯವೇ?

ತರಗತಿಯ ನೂರು ಅಥವಾ ನೂರಿಪ್ಪತ್ತು ವಿದ್ಯಾರ್ಥಿಗಳಲ್ಲಿ ಸುಮಾರು 50% ವಿದ್ಯಾರ್ಥಿಗಳು ಪಾಠವನ್ನು ಚುರುಕಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಇವರಿಗೆ ಅಧ್ಯಾಪಕರಿಂದ ಹೆಚ್ಚಿನ ನೆರವು ಅಗತ್ಯವಿರುವುದಿಲ್ಲ. ಅವರ ಮನೆಯಲ್ಲೂ ಶಿಕ್ಷಣಕ್ಕೆ ಬೇಕಾದ ವಾತಾವರಣವಿರಬಹುದು. ಆದರೆ ಉಳಿದ ಮಕ್ಕಳ ಪರಿಸ್ಥಿತಿಯೇ ಬೇರೆ. ಅವರ ಮನೆಗಳಲ್ಲಿ ಅವರಿಗೆ ಬೇಕಾದ ಸಲಹೆ, ಸಹಕಾರ ದೊರೆಯುವ ಸಾಧ್ಯತೆಗಳು ತೀರಾ ಕಮ್ಮಿ. ಅಂತಹ ವಿದ್ಯಾರ್ಥಿಗಳನ್ನು ಅಧ್ಯಾಪಕರು ಪ್ರತ್ಯೇಕವಾಗಿ ಗಮನಿಸಬೇಕಾಗುತ್ತದೆ.

ಇಂದಿನ ಶಿಕ್ಷಣ ವ್ಯವಸ್ಥೆ ಹೇಗಿದೆ? ಪ್ರಾಥಮಿಕ ತರಗತಿಗಳಲ್ಲಿ ಮಕ್ಕಳಿಗೆ ಸಮನಾಗಿ ಕಾಗುಣಿತವನ್ನೇ ಕಲಿಸುವ ಪರಿಪಾಠವಿಲ್ಲ, ದಿನಾಲೂ ಕಾಪಿ ಬರೆದು ತರಬೇಕೆನ್ನುವ ಕಡ್ಡಾಯವಿಲ್ಲ, ವಾರಕ್ಕೊಂದು ದಿನ ತರಗತಿಯಲ್ಲೇ ಕಾಪಿ ಬರೆಸಿದರಾಯಿತು. ನೂರು ಮಕ್ಕಳು ಬರೆದ ನೋಟ್ಸ್ ತಿದ್ದಲು ಓರ್ವ ಅಧ್ಯಾಪಕರಿಂದ ಸಾಧ್ಯವಿಲ್ಲ, ಹೀಗೆ ಒಂದನೇ ತರಗತಿಯಿಂದಲೇ ಮಕ್ಕಳು ಅಕ್ಷರದಿಂದ ದೂರ ಸರಿಯಲಾರಂಭಿಸುತ್ತಾರೆ. ಕಾಗುಣಿತ ಮತ್ತು ಗಣಿತದ ಅಸ್ತಿಭಾರ ಎರಡನೇ ತರಗತಿಯಿಂದಲಾದರೂ ಸಮನಾಗಿ ದೊರೆಯದಿದ್ದರೆ ಮಕ್ಕಳಿಗೆ ಶಾಲೆಗೆ ಬರಲು ಆಸಕ್ತಿ ಇರಲಾರದು. 100 ಮಕ್ಕಳೂ ಸಮನಾಗಿ ಪಾಠವನ್ನು ಗಮನಿಸುತ್ತಿದ್ದಾರೆಯೇ ಎಂದು ತಿಳಿಯುವ ತಾಳ್ಮೆಯೂ ಅಧ್ಯಾಪಕರಿಗಿರುವುದಿಲ್ಲ, ಅದು ಅವರಿಂದ ಸಾಧ್ಯವೂ ಆಗದು. ಕರಿಹಲಗೆಯಲ್ಲಿ ಅವರು ಬರೆಯುತ್ತಾ ಹೋಗುತ್ತಿದ್ದಂತೆ ಅದೇ ವೇಗದಲ್ಲಿ ವಿದ್ಯಾರ್ಥಿಗಳು ಬರೆದುಕೊಳ್ಳಬೇಕಾಗುತ್ತದೆ. ಎಲ್ಲರಿಗೂ ಬರೆದಾಯಿತೇ ಎಂದು ಕೇಳದೆ ಮೇಲ್ಭಾಗವನ್ನು ಒರೆಸಿ ಅವರು ತಮ್ಮ ಬರಹ ಮುಂದುವರಿಸುತ್ತಾರೆ. ತಾವು ಬರೆದುದೇನೆಂದು ಅರ್ಥವಾಗದೆ ಮಕ್ಕಳು ಪಿಳಿಪಿಳಿ ಕಣ್ಣು ಬಿಡುತ್ತಾರೆ. ತಾಯಂದಿರು ಅಧ್ಯಾಪಕಿಯೊಡನೆ ದೂರಿದರೆ ಆ ಬಳಿಕ ಆಕೆ ಆ ಮಗುವನ್ನು ಮಾತನಾಡಿಸುವುದಾಗಲಿ, ಪ್ರಶ್ನೆ ಕೇಳುವುದಾಗಲಿ ಇಲ್ಲದೆ ಆ ಮಗು ತರಗತಿಯಲ್ಲಿ ಅಸ್ಪೃಶ್ಯನಂತಿರಬೇಕಾಗುತ್ತದೆ! ಹೇಗಾದರೂ ಪ್ರೌಢಶಿಕ್ಷಣ ಮುಗಿಸಿ ಕಾಲೇಜಿಗೆ ಬಂದ ಕೆಲವು ವಿದ್ಯಾರ್ಥಿಗಳಿಗೆ ಸಮನಾದ ಅಕ್ಷರ ಜ್ಞಾನವೇ ಇರುವುದಿಲ್ಲ, ಕರಿಹಲಗೆಯಲ್ಲಿ ಮೂರಕ್ಷರದ ನಿಮ್ಮ ಹೆಸರು ಬರೆ ಎಂದರೆ ಆತನಿಂದ ಅಥವಾ ಆಕೆಯಿಂದ ಬರೆಯಲಾಗುವುದಿಲ್ಲ! ಹಾಗಾದರೆ ಇವರು ಪಬ್ಲಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದದ್ದು ಹೇಗೆ?

ವಿದ್ಯಾರ್ಥಿಗಳು ಅನುತ್ತೀರ್ಣರಾದರೆ ಅಧ್ಯಾಪಕರಿಗೂ ಶಾಲೆಗೂ ಕೆಟ್ಟ ಹೆಸರು. ಶಿಕ್ಷಣ ಇಲಾಖೆ ಈ ಕುರಿತು ಪ್ರಶ್ನಿಸಲಾರಂಭಿಸುತ್ತದೆ. ಶಿಕ್ಷಣ ಇಲಾಖೆಯಿಂದ ವಿವರಣೆ ಕೇಳದಿರಲು ಎಲ್ಲರನ್ನೂ ತೇರ್ಗಡೆ ಮಾಡಲಾಗುತ್ತದೆ. ಇಂದು ಕನ್ನಡ ಶಾಲೆಗಳಲ್ಲಿ ಮಾತ್ರವಲ್ಲ ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲೂ ಶಿಕ್ಷಣದ ಗುಣಮಟ್ಟ ಉತ್ತಮವಾಗಿಯೇನೂ ಇಲ್ಲ, ಅಲ್ಲೂ ಒಂದು ತರಗತಿಯಲ್ಲಿ ನೂರು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳಿರುತ್ತಾರೆ. ಅಲ್ಲಿಯೂ ಶಿಕ್ಷಣದ ಗುಣಮಟ್ಟ ಕಳಪೆಯಾಗಿಯೇ ಇರುತ್ತದೆ. ಹೈಸ್ಕೂಲ್ ತೇರ್ಗಡೆಯಾಗಿ ಕಾಲೇಜಿಗೆ ಬಂದ ಮಕ್ಕಳಿಗೆ ಇಂಗ್ಲಿಷಿನಲ್ಲಾಗಲಿ, ಕನ್ನಡದಲ್ಲಾಗಲಿ ಸಮನಾಗಿ ವಾಕ್ಯರಚನೆ ಮಾಡಲು ಬರುವುದಿಲ್ಲ, ಇಂಗ್ಲಿಷ್ ಮಾಧ್ಯಮದಿಂದಾಗಿ ಕನ್ನಡದ ಗುಣಮಟ್ಟ ಕಳಪೆಯಾಗತೊಡಗಿತು. ಈಗ C.B.S.C. ಪಠ್ಯಕ್ರಮವೆಂದೂ, ಕೇಂಬ್ರಿಜ್ ಶಿಕ್ಷಣವೆಂದೊ ಹೊಸಹೊಸ ದುಬಾರಿ ಶಾಲೆಗಳು ಪ್ರಾರಂಭವಾದಾಗ ಇಂಗ್ಲಿಷ್ ಮಾಧ್ಯಮವೂ ಕಳಪೆಯಾಗತೊಡಗಿತು. ಎಂದಿನಿಂದ ಶಿಕ್ಷಣದ ವ್ಯಾಪಾರೀಕರಣ ಆರಂಭವಾಯಿತೊ ಅಂದಿನಿಂದ ಈ ಎಲ್ಲ ಅವ್ಯವಸ್ಥೆಗಳೂ ಹುಟ್ಟಿಕೊಂಡಿವೆ.

ಟ್ಯೂಶನ್‌ಗೆ ವಿದ್ಯಾರ್ಥಿಗಳನ್ನು ಸೆಳೆಯುವುದೂ ತರಗತಿಯಲ್ಲಿನ ನಿರ್ಲಕ್ಷ್ಯದ ಹಿಂದೆ ಇರಬಹುದು. ಈಗ ನಗರಗಳಲ್ಲಿ ಟ್ಯೂಶನ್ ಇಲ್ಲದ ಮಕ್ಕಳು ಇಲ್ಲವೇ ಇಲ್ಲವೆನ್ನಬಹುದು.

ಹಳ್ಳಿಗಳಲ್ಲಿ ಹೆತ್ತವರಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಆಸಕ್ತಿ ಇದೆ. ಎರಡು, ಮೂರು ವರ್ಷ ಶಾಲೆಗೆ ಹೋದರೂ ಆ ಮಕ್ಕಳಿಗೆ ಕಾಗುಣಿತವೂ ಬರದಿದ್ದರೆ ಆ ಹೆತ್ತವರಾದರೂ ಏನು ಮಾಡಬೇಕು? ಅವರನ್ನು ತಮ್ಮೊಡನೆ ಕೂಲಿ ಕೆಲಸಕ್ಕೆ ಕೊಂಡೊಯ್ದರೆ ನಾಲ್ಕು ಕಾಸಾದರೂ ಸಿಗುತ್ತದಲ್ಲ ಎನ್ನುವುದೂ ಈ ಹೆತ್ತವರ ಮನೋಭಾವವಾಗಿರಬಹುದು. ಕೇರಳದಲ್ಲಿ ಕುಟುಂಬ ಯೋಜನೆಯ ಯಶಸ್ಸಿನಿಂದಾಗಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಮ್ಮಿಯಾಗುತ್ತಿದೆ. ಕರ್ನಾಟಕದಲ್ಲೂ ಈ ಪರಿಸ್ಥಿತಿ ಇದೆಯೇ ಎಂದು ನನಗೆ ತಿಳಿಯದು.

ಹಲವು ವಿಧದ ಸಂಸ್ಕೃತಿಗಳನ್ನೊಳಗೊಂಡ ಹಾಗೂ ಬೇರೆಬೇರೆ ಪರಿಸರದಿಂದ ಬಂದ ವಿದ್ಯಾರ್ಥಿಗಳ ಬೌದ್ಧಿಕ



ಮಟ್ಟ ಒಂದೇ ರೀತಿಯಾಗಿರುವುದಿಲ್ಲ, ಕೆಲವು ವಿದ್ಯಾರ್ಥಿಗಳ ಆಸಕ್ತಿಯೂ ಬೇರೆಬೇರೆಯಾಗಿರಬಹುದು. ಇಂತಹ ಸಂದರ್ಭದಲ್ಲಿ ಈ ಎಲ್ಲ ಮಕ್ಕಳನ್ನೂ ಒಂದು ಕೋಣೆಯೊಳಗೆ ತುಂಬಿ ಬೆಲ್ ಹೊಡೆಯುವುದನ್ನು ಕಾಯುವ ಶಿಕ್ಷಕರಿರುವಲ್ಲಿ ಮಕ್ಕಳಿಗೆ ಎಂತಹ ಶಿಕ್ಷಣ ದೊರೆಯುತ್ತದೆ? ಉತ್ತಮ ಶಿಕ್ಷಕರು ಇಲ್ಲವೆಂದಲ್ಲ, ಅತ್ಯುತ್ತಮ ಅಧ್ಯಾಪಕರು, ತಮ್ಮ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆದು ತೇರ್ಗಡೆಯಾಗಬೇಕೆಂದು ಮನದಾಳದಿಂದ ಬಯಸುವ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ತರಗತಿಗಳಲ್ಲಿ ವಿದ್ಯಾರ್ಥಿಗಳ ಈ ಸಂಖ್ಯಾ ಬಾಹುಳ್ಯ ಇಂತಹ ಅಧ್ಯಾಪಕರಿಗೆ ಸಮಸ್ಯೆಯಾಗಿರಬಹುದು.

ಮೊತ್ತಮೊದಲು ಶಾಲೆಯ ಶೈಕ್ಷಣಿಕ ಗುಣಮಟ್ಟವ[illegible] ಮೇಲೆತ್ತಲು ಏನು ಕಾರ್ಯಕ್ರಮ ಹಾಕಿಕೊಳ್ಳಬೇ[illegible] ಎಂಬುದರ ಕುರಿತು ಶಿಕ್ಷಣ ಇಲಾಖೆ ಚಿಂತಿಸಬೇಕು. ಒಂ[illegible] ತರಗತಿಯಲ್ಲಿ ಐವತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರಬಾರ[illegible] ಎಂಬ ನಿಯಮವನ್ನು ಕಡ್ಡಾಯ ಮಾಡಿ ಜಾರಿಗೆ ತರಬೇ[illegible] ಮಕ್ಕಳಲ್ಲಿ ಓದಿಗಿಂತ ಬರಹದಲ್ಲಿ ಆಸಕ್ತಿ ಮೂ[illegible] ಬೇಕು. ಪ್ರತಿ ದಿನವೂ ಕಾಪಿ ಬರೆಸುವ, ಅವ[illegible] ಬರೆದದ್ದನ್ನು ತಿದ್ದಿ ಸರಿಪಡಿಸುವ ಕ್ರಮವ[illegible] ಅಧ್ಯಾಪಕರು ಕೈಗೊಳ್ಳುವಂತಾಗಬೇಕು. ಪ್ರಾಥ[illegible] ತರಗತಿಗಳಲ್ಲಿ ಶಿಕ್ಷಣದ ಅಸ್ತಿಭಾರ (foun[illegible]tion) ಸಮನಾಗಿಲ್ಲದಿದ್ದರೆ ಮುಂದೆ ಎಂದೂ[illegible] ಮಕ್ಕಳ ಶಿಕ್ಷಣ ಉತ್ತಮ ಗುಣಮಟ್ಟದಲ್ಲಿರಲಾರ[illegible] ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತ[illegible] ಶಿಕ್ಷಣಕ್ಕೆ ಆದ್ಯತೆ ನೀಡತೊಡಗಿದ ಬಳಿಕ ಶಿಕ್ಷಣ[illegible] ಗುಣಮಟ್ಟ ಕೆಳಗಿಳಿಯತೊಡಗಲು ಕಾರಣವೇನ[illegible] ಈ ಕುರಿತು ಈ 'ಅಹಿಂದ' ಸಮುದಾಯ ಗಮ[illegible] ಹರಿಸಬೇಕು.

ಹಿಂದಿಯಿಂದಲೂ ಕನ್ನಡ ಭಾಷೆಗೆ ಪೆ[illegible] ಬೀಳುತ್ತಿದೆ. ಪ್ರಾಥಮಿಕ ತರಗತಿಯಲ್ಲಿ ಕನ್ನ[illegible] ಸೇರಿಕೊಂಡರೂ ಹೈಸ್ಕೂಲಿಗೆ ಬರುವಾಗ ಹಿಂ[illegible] ಬದಲಾಯಿಸಿಕೊಳ್ಳುತ್ತಾರೆ. ಕನ್ನಡದ ಈ ಎಲ್ಲಾ ಗೊಂ[illegible] ಗಳಿಂದಾಗಿ ಪದವಿ ಪೂರ್ವ ತರಗತಿಯಲ್ಲಿ ಹಿಂ[illegible] ಬದಲಾಯಿಸಿಕೊಂಡವರೂ ಇದ್ದಾರೆ. ಕನ್ನಡದ ವ್ಯಾಕರಣ, [illegible] ಗನ್ನಡ ಇವೆಲ್ಲವೂ ಮಕ್ಕಳಿಗೆ ಕಬ್ಬಿಣದ ಕಡಲೆಯೆಂದೆನ್ನಿಸುತ[illegible]

ಮೊತ್ತಮೊದಲು ಸರ್ಕಾರ ಶಿಕ್ಷಣದ ಈ ಎಲ್ಲ ಅವ್ಯ[illegible] ಗಳನ್ನೂ ಸರಿಪಡಿಸಿ ಎಲ್ಲ ಮಕ್ಕಳಿಗೂ ಏಕ ರೀತಿಯ ಶಿ[illegible] ದೊರೆಯುವಂತಹ ಪಠ್ಯಕ್ರಮವನ್ನು ಜಾರಿಗೆ ತರಬೇಕು.

• ಸಾರಾ ಅಬೂಬಕ್ಕ[illegible]



ಮಲೆಯ ಕುಡಿಯಲ್ಲಿ

ಅನ್ನ ನೀರು ನೀಡದ ಕೈಗಳು
ಉಂಡೆದ್ದು ಬಿಟ್ಟ ಎಲೆಯ
ಮಡಿ ಮಾಡಿದ ಕುಕ್ಕೆ
ಕಡಿಸಿದ ಮಲೆ ಕುಡಿಯ ಸುಬ್ರಹ್ಮಣ್ಯನ
ವೈದಿಕ ಎಂಜಲೆಲೆಗೆ ಉರುಳಿ ಹೊರಳಾಡಿ
ಮೈಗಂಟಿದ ಅಗುಳು
ಅಗುಳದು.
ಪುರೋಹಿತ ಮೌಢ್ಯಮಾಲೆಯ
ಹೇಸಿಗೆಯ ಉರುಳು
ಜಾತ್ರೆ ಮರುಳೋ ಜನ ಮರುಳೋ!

• ಮಾದಾರ ರಂಗ, ಹರಿಹರ


ಎರಡು ಕವನಗಳು

-1-

ಅವನ ಗೋಳಾಡಿಸುವ ವಿದ್ಯೆ
ನನಗೆ ಕರಗತ.
ಈಗೀಗ ಅದೊಂದು ವ್ಯಸನ ನನಗೆ

ಸಂಜೆ ಮುಖ ತೊಳೆವಾಗ ಒಂಟಿ ನಾನು.
ದೂರವಿರುವ ಅವನ ನೆನೆದು ರೊಚ್ಚು ಒಡೆಯುತ್ತದೆ,
ಮರುಕ್ಷಣ
ಅವನೂ ನನ್ನ ಹಂಬಲದಲ್ಲಿ ನವೆದು, ಹಗಲಿಗೆ
ಕಾಯುವುದ ನೆನೆದು
ಕಿಬ್ಬೊಟ್ಟೆ ಕಳಕ್ಕೆನ್ನುತ್ತದೆ.

ಸಿಕ್ಕಾಗ ತಬ್ಬಿ ಮುದ್ದಿಸಬೇಕು ಅನ್ನಿಸಿದರೂ,
ಬೆಳಗ್ಗೆ ಸಿಕ್ಕಾಗ, ಯಥಾ ಪ್ರಕಾರ
ನಿರ್ಲಕ್ಷ್ಯ, ಹುಸಿ ಮುನಿಸು, ನಿರ್ಲಿಪ್ತತೆಯ ನಟನೆ.
ಅವನು ಪತರಗುಟ್ಟುವ ಚಳಿಗೂ
ಚಿಂಕಿ ತಗುಲಿದಂತೆ ಒದ್ದಾಡುವುದ ಕಂಡು
ಮನ ಪತರಗುಟ್ಟುತ್ತದೆ.
ಎದೆ ಉಬ್ಬಿ ಮನ ಕರಗುತ್ತದೆ.
ಪ್ರೀತಿಸುವುದು ಎಷ್ಟು ಕಷ್ಟ..





-2-

ಅವನ ಹೇಗೆ ವರ್ಣಿಸಲಿ?
ಮೊದಲು ಕಂಡಾಗ
ಅವನ ಕಣ್ಣ ಮಿಂಚು ಧಿಗ್ಗನೆ
ಎದೆ ಹೊಕ್ಕಿತ್ತು,
ಅವನೋ ಅನಂತದ ಬಯಲ ದಿಟ್ಟಿಸುತ್ತಿದ್ದ
ಒಂದು ವಿಷಾದ, ಒಂದು ಕನಸು.

ನಾನಿರುವುದು ಅವನು ಗಮನಿಸಿಯೇ ಇರಲಿಲ್ಲ;
ಅವನೆದುರೇ ಕೂತಿದ್ದರೂ.
ಮೂರನೇ ದಿನ, ಹಟ ಹಿಡಿದು, ಗಕ್ಕನೆ
ಅವನ ಕಣ್ಣಲ್ಲಿ ಕಣ್ಣಿಟ್ಟು, ಆಹ್,
ಹೇಗೆ ಅರೆಕ್ಷಣ ಶಿಕಾರಿ ಬೆಳಕಿಗೆ ದಿಕ್ಕೆಟ್ಟ
ಮೊಲದಂತೆ ಸ್ತಬ್ಧನಾಗಿದ್ದ.
ಅದರ ಮಾರನೇ ದಿನ
ತಪ್ಪು ಮಾಡಿದವನಂತೆ
ತಲೆ ತಗ್ಗಿಸಿ ಕೂತಿದ್ದ
ನನ್ನ ಕಿರು ನಗೆಗೆ.
ನಾನೇ ಮಾತಿಗೆಳೆದು,
ನೀನೂಂದ್ರೆ ನಂಗಿಷ್ಟ ಅಂದೆ.

ಬಿಳಿಚಿದ, ನಾನು ಎದ್ದು ಹೋದೆ.
ವಾರದ ಬಳಿಕ,
ಮೇಜಿನ ತುದಿ ಕೆರೆಯುತ್ತಾ,
ನೀನೂಂದ್ರೆ ನಂಗಿಷ್ಟ.. ಅಂದ. ನಕ್ಕೆ.
ನೆತ್ತಿ ಹತ್ತಿದವನಂತೆ ಒದ್ದಾಡಿದ.
ಬಾಚಿ ತಬ್ಬಿದೆ.
ಎದೆಯೊಳಗೆ ಹುದುಗಿ
ನಿದ್ದೆ ಹೋದವನು ಇನ್ನೂ ಎದ್ದಿಲ್ಲ.

• ಕೆ.ಎಸ್.ಇಂದ್ರಾ[illegible]

ಎಸ್ಪಿ ರಮಣ ಗುಪ್ತ ಗಮನಕ್ಕೆ: ಶಿವಮೊಗ್ಗಕ್ಕೆ ಬೆಂಕಿ ಹಾಕಲು ನಡೆದಿದೆ ತಯಾರಿ

ಅಬ್ಬಾಸ್ ಅಬ್ಬಲಗೆರೆ ನಿಧನರಾದ ಸುದ್ದಿ ತಿಳಿದು ಅವರ ಮನೆಗೆ ಹೋಗಿ ಅಬ್ಬಾಸ್ ಅವರ ಅಂತಿಮ ದರ್ಶನ ಪಡೆದು ಹೊರಬಂದರೆ ಇನ್ನೊಂದು ಸುದ್ದಿ ತಲ್ಲಣಗೊಳಿಸಿತು. ಅಬ್ಬಾಸ್ ವಾಸವಿದ್ದ ಬಾಪೂಜಿ ನಗರದ ಸುತ್ತಮುತ್ತ ಕೆಲವರ ಮನೆ ಮುಂದೆ ನಿಲ್ಲಿಸಿದ್ದ ಐದು ಬೈಕುಗಳನ್ನು ಹಿಂದಿನ ರಾತ್ರಿ ಸುಟ್ಟು ಹಾಕಲಾಗಿತ್ತು. ಅಬ್ಬಾಸ್ ಮನೆಯಲ್ಲಿದ್ದ ಕಲೀಮ್ ಅವರಲ್ಲಿ ಕೇಳಲಾಗಿ ಕಳೆದ ರಾತ್ರಿಯಿಂದ ಅಬ್ಬಾಸ್ ಜತೆಯಲ್ಲೇ ಆಸ್ಪತ್ರೆಯಲ್ಲೇ ಇದ್ದ ಅವರು ನಿದ್ದೆ ಕಣ್ಣಿನಿಂದ ಎಚ್ಚೆತ್ತು ಅದೇ ತಾನೆ ಇನ್ನೊಂದು ಕೆಟ್ಟ ಸುದ್ದಿ ಕೇಳಿದಂತೆ ಗಾಬರಿಯಾದರು. ಅವರ ಮನೆಯೂ ಮುಂದಿನ ಬೀದಿಯಲ್ಲಿಯೇ ಇದೆ.



ರಮಣಗುಪ್ತ


ವಿಷಯ ಅಲ್ಲಿಗೇ ಮುಗಿಯಲಿಲ್ಲ. ಹಿಂದಿನ ರಾತ್ರಿ ಟ್ಯಾಂಕ್ ಮೊಹಲ್ಲಾ, ಲಷ್ಕರ್ ಮೊಹಲ್ಲಾಗಳಲ್ಲೂ ಇನ್ನೂ ಏಳು ಬೈಕುಗಳನ್ನು ಆ ಬೈಕುಗಳಲ್ಲಿದ್ದ ಪೆಟ್ರೋಲನ್ನೇ ಬಳಸಿ ಸುಡಲಾಗಿತ್ತು. ಒಂದು ಬೈಕು ಮಾತ್ರ ಹಿಂದೂಗಳಿಗೆ ಸೇರಿದ್ದರೆ ಉಳಿದವೆಲ್ಲ ಮುಸ್ಲಿಮರಿಗೆ ಸೇರಿದ್ದಾಗಿವೆ. ಹಿಂದೂಗಳಿಗೆ ಸೇರಿದ ಒಂದು ಬೈಕು ಸುಡುವ ಹಿಂದೆ ಆ ಬೈಕು ಮುಸ್ಲಿಮರದ್ದೆಂಬ ತಪ್ಪುಗ್ರಹಿಕೆ ಕಾರಣವಾಗಿರಬಹುದು ಅಥವಾ ಎಲ್ಲಾ ಧರ್ಮೀಯರ ಬೈಕು ಸುಡಲಾಗಿದೆ ಎಂಬ ಭಾವನೆ ಮೂಡಿಸುವ ಉದ್ದೇಶವೂ ಇರಬಹುದು. ಇಂದು (03.12.2011) ಇದಕ್ಕೆ ಸಂಬಂಧಿಸಿದಂತೆ ಅಂದು ರಾತ್ರಿ ಗಸ್ತಿನಲ್ಲಿದ್ದ ಇಬ್ಬರು ಪೋಲಿಸರನ್ನು ಎಸ್ಪಿ ರಮಣಗುಪ್ತ ಸಸ್ಪೆಂಡ್ ಮಾಡಿದ್ದಾರೆ. ಉಳಿದಂತೆ ಇದುವರೆಗೂ ಯಾರನ್ನೂ ಬಂಧಿಸಿಲ್ಲ.

ಮುಸ್ಲಿಮರಿಗೆ ಇದು ಮೊಹರಮ್ ಹಬ್ಬದ ಸಂಭ್ರಮದ ಸಂದರ್ಭ. ಈ ಹೊತ್ತಿನಲ್ಲಿಯೇ ಇಂತಹ ದುಷ್ಕೃತ್ಯ ನಡೆದಿರುವುದು ಮತೀಯ ಶಕ್ತಿಗಳ ಬಗ್ಗೆ ಗಾಢ ಅನುಮಾನ ಮೂಡಿಸುತ್ತಿದೆ. ಬಜರಂಗ ದಳದ ಕಾರ್ಯದರ್ಶಿ ತುಂಗಾ ನದಿ ತೀರಕ್ಕೆ ಸ್ನಾನಕ್ಕೆ ತೆರಳುವ ಮುಸ್ಲಿಮ್ ಯುವಕರ ಮೇಲೆ ದೈಹಿಕ ಹಲ್ಲೆ ನಡೆಸುತ್ತಿದ್ದಾರೆಂದು ಹಲವು ಮುಸ್ಲಿಮ್ ಮುಖಂಡರು ಪೋಲಿಸರಿಗೆ ದೂರು ನೀಡಿ ವಾರಗಳೇ ಕಳೆದಿದ್ದರೂ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ವರ್ಷಕ್ಕೂ ಹಿಂದೆ ಪತ್ರಿಕೆಯೊಂದರಲ್ಲಿ ಬುರ್ಖಾ ಕುರಿತ ಲೇಖನದಿಂದ ಉದ್ರೇಕಿತರಾದ ಕೆಲವು ಅವಿವೇಕಿ ಮುಸ್ಲಿಮರ ಕಾರಣದಿಂದ ಗಲಭೆ ಹಬ್ಬಿ ಅದನ್ನು ಸಂಘ ಪರಿವಾರದ ಸಂಘಟನೆಗಳೂ ಚೆನ್ನಾಗಿ ಬಳಸಿಕೊಂಡು ಎರಡೂ ಧರ್ಮದ ತಲಾ ಒಂದೊಂದು ಅಮಾಯಕ ಬಡ ಜೀವಗಳು ಪ್ರಾಣ ಕಳೆದುಕೊಂಡಿದ್ದವು. ಆ ನಂತರ ಶಿವಮೊಗ್ಗ ಹೆಚ್ಚು ಕಡಿಮೆ ಒಟ್ಟಾರೆ ವಾತಾವರಣದಲ್ಲಿ ಶಾಂತವಾಗಿತ್ತು. ಈಗ ಯಾವುದೇ ಪ್ರಚೋದನೆಯಿಲ್ಲದೆ ಬೈಕುಗಳನ್ನು ಸುಟ್ಟಿರುವುದು ನೋಡಿದರೆ ಬಹಳ ದೊಡ್ಡಮಟ್ಟದ ಗಲಭೆ ಹುಟ್ಟುಹಾಕಲು ತಯಾರಿ ನಡೆದಂತೆ ತೋರುತ್ತಿದೆ. ಈ ಹಂತದಲ್ಲಿಯೇ ದುಷ್ಕರ್ಮಿಗಳು ಯಾವುದೇ ಧರ್ಮ, ಸಂಘಟನೆ, ಪಕ್ಷಕ್ಕೆ ಸೇರಿದ್ದರೂ ಅವರನ್ನು ಬಂಧಿಸಿ ಅವರಿಗೆ ಕಠಿಣ ಶಿಕ್ಷೆಯಾಗುವಂತೆ ಜಿಲ್ಲಾ ರಕ್ಷಣಾಧಿಕಾರಿ ರಮಣಗುಪ್ತ ನೋಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಶಿವಮೊಗ್ಗಕ್ಕೆ ದೊಡ್ಡ ಅಪಾಯ ಕಾದಿದೆ.

• ಸರ್ಜಾಶಂಕರ ಹರಳಿಮಠ

ಅಡಿಗರ ಕೋಮುವಾದಿ ಕವನ ಪ್ರತಿಕ್ರಿಯೆ



ಒಕ್ಕುಂದ ಅವರಿಗೆ ವಾಕ್ ಓವರ್


ಇದು ಅಡಿಗರ ಕವಿತೆ 'ಮತ್ತೆ ಮೊಳಗಲಿ ಪಾಂಚಜನ್ಯ' ಕುರಿತು ಒಕ್ಕುಂದ ಬರೆದ ಇತ್ತೀಚಿಗಿನ ಲೇಖನಕ್ಕೆ (ಚಿನ್ನದ ಕತ್ತಿಗೆ ಪರಾಕು ಪಂಪು) ನನ್ನ ಪ್ರತಿಕ್ರಿಯೆಯಲ್ಲ. ಅವರ ಲೇಖನದ ಕುರಿತು ನನಗೆ ಹೇಳಲು ಏನೂ ಇಲ್ಲವೆಂದಲ್ಲ, ಆದರೆ ನಮ್ಮ ವಾದ ಎಂದೆಂದೂ ಮುಗಿಯದ ಕತೆಯಾಗಬಹುದು ಎಂಬ ಆತಂಕ ನನ್ನದು. ಹಾಗಾಗಿ ಅವರ ಮಾತುಗಳಿಗೆ ಉತ್ತರಿಸುವ ಉಸಾಬರಿಗೆ ಹೋಗದೆ, ತಮ್ಮ ಲೇಖನದಲ್ಲಿ ಅವರು ನೀಡಿದ ಒಂದು ತಪ್ಪು ಮಾಹಿತಿಯ ಬಗ್ಗೆ ಸ್ಪಷ್ಟೀಕರಣ ಕೊಡಬಯಸುತ್ತೇನೆ.

ಒಕ್ಕುಂದ ತಮ್ಮ ಲೇಖನದಲ್ಲಿ ಒಂದೆಡೆ "ಕಾರಂತರ ಇಳಿಗಾಲದ ರಾಮಜನ್ಮಭೂಮಿ ಪರ ನಿಲುವಿನ" ಬಗ್ಗೆ ಬರೆದಿದ್ದಾರೆ. ಅದು ಕಾರಂತರ ಇಳಿಗಾಲದ ನಿಲುವು ಆದ್ದರಿಂದ ನಮ್ಮ 'ಸೆಕ್ಯುಲರ್ ಅಂಕಪಟ್ಟಿಯಲ್ಲಿ ಅವರಿಗೆ ಸ್ವಲ್ಪ ಗ್ರೇಸ್‌ಮಾರ್ಕ್ಸ್ ಕೊಡೋಣ' ಎಂಬ ಅರ್ಥದಲ್ಲಿಯೇ ಒಕ್ಕುಂದ ಈ ಮಾತು ಬರೆದಿರುವುದು. ಆದರೆ ಶಿವರಾಮ ಕಾರಂತರು 90 ದಾಟಿದ ಮೇಲೆ ಕೂಡ ದೈಹಿಕವಾಗಿಯಾಗಲಿ, ಮಾನಸಿಕವಾಗಿಯಾಗಲಿ 'ಇಳಿಗಾಲ' ಎನ್ನಬಹುದಾದ ಸ್ಥಿತಿ ತಲುಪಿರಲಿಲ್ಲ. ಕೊನೆಯವರೆಗೂ ಅವರು ಆರೋಗ್ಯದಿಂದ ಇದ್ದರು; ಲವಲವಿಕೆಯಿಂದ ಇದ್ದರು. ಅವರಿಗೆ 90 ರ ಹರೆಯ ನಡೆಯುತ್ತಿದ್ದಾಗ ನಾನು ಅವರೊಡನೆ ನಡೆಸಿದ ಒಂದು ಸಂದರ್ಶನದಲ್ಲಿ "ನಿಮಗೆ ವಯಸ್ಸಾಗಿದೆ ಎನ್ನಿಸುತ್ತದೆಯಾ?" ಎಂದು ಕೇಳಿದೆ. ನನ್ನ ಪ್ರಶ್ನೆಗೆ ಅವರು ಸಿಟ್ಟಾದರು. "ಅದೆಲ್ಲ ತಿಂಗಳುತಿಂಗಳು ಸಂಬಳ ತೆಗೆದುಕೊಂಡು 60 ಕ್ಕೆ ರಿಟೈರಾಗುವವರಿಗೆ ಅನ್ನಿಸುವುದು. ವೈರಾಗ್ಯ ಭಜನೆ ಮುಂತಾದ್ದೆಲ್ಲ ತಗಲಿಕೊಳ್ಳುವುದು ಆಗಲೇ" ಎಂದು ಹೇಳುತ್ತ ಕೋಟ-ಸಾಲಿಗ್ರಾಮದ ತನ್ನ ಮನೆಯ ಸಮೀಪದ ಮುದುಕರೊಬ್ಬರು 70 ನೆಯ ವಯಸ್ಸಿನಲ್ಲೂ ತೆಂಗಿನಮರ ಹತ್ತಿ ಕಾಯಿ ಕೀಳುತ್ತಾರೆ; ಉಡುಪಿಯ ತಮ್ಮ ಸ್ನೇಹಿತರೊಬ್ಬರ ತಾಯಿ ತನ್ನ 80 ನೆಯ ವಯಸ್ಸಿನಲ್ಲೂ ಮನೆ ಕೆಲಸ ಎಲ್ಲ ಮಾಡುತ್ತಾರೆ. ತಮಗೆ ವಯಸ್ಸಾಗಿದೆ ಎಂದು ಅವರು ಯೋಚಿಸುವುದಿಲ್ಲ ಎಂದು ಕಾರಂತರು ನನ್ನ ಪ್ರಶ್ನೆಗೆ ಉತ್ತರಿಸಿದರು. "ನಿಮ್ಮ ಜೀವಮಾನವಿಡೀ ನೀವು ನಾಸ್ತಿಕರಾಗಿದ್ದವರು. ಈಗಲೂ ನೀವು ನಾಸ್ತಿಕರೋ?" ಎಂಬ ನನ್ನ ಮುಂದಿನ ಪ್ರಶ್ನೆ ಸಹ ಅವರನ್ನು ಕೆರಳಿಸಿತು. "ಯಾಕೆ ಹಾಗೆ ಕೇಳುತ್ತೀರಿ. ನಾನು ಈಗಲೂ ನಾಸ್ತಿಕನೇ. ಸಂಶಯ ಬೇಡ" ಎಂದು ಅವರು ಖಡಾಖಂಡಿತವಾಗಿ ಹೇಳಿದರು. ನಾಸ್ತಿಕ, ವೈಜ್ಞಾನಿಕ ಮನೋಧರ್ಮದ ವಿಚಾರವಾದಿ, ವ್ಯಾಮೋಹಿ, ಆದರೆ ರಾಜಕೀಯದಲ್ಲಿ ಹಿಂದೂತ್ವವಾದಿ ಹಾಗೂ ಕಡು ಕಮ್ಯುನಿಸ್ಟ್ ವಿರೋಧಿ–ಇಷ್ಟು ಹೇಳಿದರೆ ಕಾರಂತರ ಬಗೆಗೆ ಎಲ್ಲವನ್ನೂ ಹೇಳಿದಂತಾಯಿತೆ? ಖ್ಯಾತ ಮಾರ್ಕ್ಸ್‌ವಾದಿ ತತ್ವಶಾಸ್ತ್ರಜ್ಞ ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರ **'What is Living And What Is Dead In Indian Philosophy' (Peoples Pubhlishing House** ನವದೆಹಲಿ, 1976) ಕಾರಂತರ ಅಚ್ಚುಮೆಚ್ಚಿನ ಪುಸ್ತಕಗಳಲ್ಲಿ ಒಂದಾಗಿತ್ತು. ಹಾಗಿದ್ದೂ ಈ ಪರಮ ನಾಸ್ತಿಕ, ರಾಮಕೃಷ್ಣ ಪರಮಹಂಸರ 668 ಪುಟದ ಜೀವನಚರಿತ್ರೆಯನ್ನು, ಅದರ ಇಂಗ್ಲಿಷ್ ಮೂಲಕ್ಕೆ ಗಾಂಧೀಜಿ ಬರೆದ ಮುನ್ನುಡಿ ಸಮೇತ ಕನ್ನಡಕ್ಕೆ ಅನುವಾದಿಸಿದ್ದರು. (ಶ್ರೀರಾಮಕೃಷ್ಣರ ಜೀವನಚರಿತ್ರೆ–ರಾಮಕೃಷ್ಣಾಶ್ರಮ, ಮಂಗಳೂರು–1953). ಪರಮಹಂಸರ ಕುರಿತು ಕನ್ನಡದಲ್ಲಿ ಇರುವ ಸಾಹಿತ್ಯಕ್ಕೆ ಕುವೆಂಪು ಮತ್ತು ಮಾಸ್ತಿಯವರ ಕೊಡುಗೆಯೂ ದೊಡ್ಡದಿದೆ. ಸಲೀಸಾಗಿ ಆಧುನಿಕ ಕನ್ನಡ ಸಾಹಿತ್ಯವನ್ನು ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ ಎಂದು ವಿಂಗಡಿಸಿ, ಅವುಗಳಲ್ಲಿ ಪ್ರತಿಯೊಂದಕ್ಕೂ ಕೆಲವು ನಿರ್ದಿಷ್ಟ ಗುಣ ಲಕ್ಷಣಗಳನ್ನು ಆರೋಪಿಸುವವರು ಕಾಲ ಮತ್ತು ಪರಂಪರೆಯ ಸಾತತ್ಯವನ್ನು ಮಾತ್ರವಲ್ಲ ಅದರ ಸಂಕೀರ್ಣತೆಯನ್ನು ಸಹ ಗುರುತಿಸದೆ ಹೋಗುತ್ತಾರೆ. ಇವರಿಗೆ ಕಪ್ಪುಬಿಳುಪುಗಳ ನಡುವಿನ ಯಾವ ಬಣ್ಣವೂ ಕಾಣಿಸುವುದಿಲ್ಲ. ಇವರ ಮಟ್ಟಿಗೆ ಪ್ರಗತಿಶೀಲ ಮತ್ತು ಪ್ರತಿಗಾಮಿ ಎಂಬ ಎರಡು ವಿಭಾಗಗಳಲ್ಲಿ ಮಾತ್ರ ಜಗತ್ತು ಒಡೆದುಕೊಂಡಿದೆ. "ನೀನು ಒಂದೋ ನನ್ನ ಪಾರ್ಟಿ ಇಲ್ಲ ನನ್ನ ಎದುರಾಳಿ. ಮೂರನೆಯ ಆಯ್ಕೆ ನಿನಗೆ ಇಲ್ಲ" ಎನ್ನುವುದು ಇವರ ಹಟ. ಒಕ್ಕುಂದ ಕೂಡ ಈ ಬಗೆಯ ಹಠವಾದಿ ಎಂದು ನನಗೆ ಅನ್ನಿಸುತ್ತಿರುವುದರಿಂದ ಈ ವಾದವನ್ನು ಬೆಳೆಸುವುದರಲ್ಲಿ ಅರ್ಥವಿಲ್ಲ.

• ಜಿ. ರಾಜಶೇಖರ

'ಸಂಸ್ಕೃತಿ ವಿಮರ್ಶಾ ಕತ್ತಿ'

ಶ್ರೀಯುತ ಒಕ್ಕುಂದ ಅವರು 'ಕ್ಯಾರೆಕ್ಟರ್ ಸರ್ಟಿಫಿಕೇಟ್' ಪುಸ್ತಕ ಇಟ್ಟುಕೊಂಡು ಕೂತ ಹೆಡ್ ಮಾಸ್ಟರರ ಹಾಗೆ ಸಾಲು ಸಾಲಾಗಿ ಕ್ಯಾರೆಕ್ಟರ್ ಸರ್ಟಿಫಿಕೇಟ್‌ಗಳಿಗೆ ಸಹಿ ಹಾಕುವ ತುರ್ತಿನಲ್ಲಿದ್ದಂತೆ ಕಾಣುತ್ತದೆ. ಅವರು 'ಜನಪರ' ಮತ್ತು 'ಪ್ರತಿಗಾಮಿ' ಸಾಹಿತಿ, ವಿಮರ್ಶಕರ ಎರಡು ಖಾತೆಗಳನ್ನು ತೆರೆದು ಕೂತಿದ್ದಾರೆ. ಹಾಗಾಗಿ ಹೆಸರುಗಳು ಒಂದೋ ಇಲ್ಲಿರಬೇಕು ಇಲ್ಲ ಅಲ್ಲಿರಬೇಕು. ಆದರೆ ಈ ವರ್ಗೀಕರಣಕ್ಕೆ ಅವರು ಹಾಕಿಕೊಂಡಿರುವ ಮಾನದಂಡಗಳೂ ಮೋಜೆನಿಸದಾಗಿವೆ. 'ಜನಪರ'ರ ಪಟ್ಟಿಯಲ್ಲಿ ಮೊದಲು ತಮ್ಮ ಹೆಸರನ್ನು ನಮೂದಿಸಿಕೊಂಡ ಮೇಲೆ, ಅವರಿಗೆ ಭಿನ್ನಮತ ತೋರುವವರೆಲ್ಲ ಖಂಡಿತ ಎರಡನೇ ಪಟ್ಟಿಯಲ್ಲಿರಲು ಅರ್ಹರು ಎಂಬುದು ಮೊದಲ ಮಾನದಂಡ. ಎರಡನೆಯ ಮಾನದಂಡ ವಿಮರ್ಶಾ ವಿಧಾನಗಳ ಶ್ರೇಣೀಕರಣ. ರೂಪನಿಷ್ಠ ವಿಮರ್ಶಕರು 'ಪ್ರತಿಗಾಮಿ'ಗಳು ಮಾತ್ರವಲ್ಲ, ಅವರೆಲ್ಲ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಘಪರಿವಾರದ ಬೆಂಬಲಿಗರು–ಅನುಮಾನವೇ ಬೇಡ. ಒಂದು ವಿಮರ್ಶಾ ವಿಧಾನವೇ ತಮ್ಮ ಬ್ರ್ಯಾಂಡಿನದು ಎಂಬ ನವ ಶೋಧ ಚೆಡ್ಡಿಗಳಿಗೂ ಸುಖತ್ ಶಾಕ್ ನೀಡುವಂಥದ್ದು! ಇನ್ನೆರಡು– 'ಎಡ, ಸಮಾಜವಾದಿ ವಿಮರ್ಶೆ' ಮತ್ತು 'ಸಂಸ್ಕೃತಿ ವಿಮರ್ಶೆ'ಗಳು– 'ಜನಪರ'. ಇವುಗಳು ದ್ರವರೂಪಿಯಾಗಿ ಒಕ್ಕುಂದರ ಅನುಕೂಲತೆಗೆ ಹೊಂದಿಕೊಂಡಿರುವಂತಹವು. ಯಾರು 'ಎಡ', ಯಾರು 'ಸಮಾಜವಾದಿ' ಯಾವುದು 'ಜನಪರ ಸಂಸ್ಕೃತಿ'?– ಇದರಲ್ಲಿ ಜಾಸ್ತಿ ತರ್ಕದ ಅವಶ್ಯಕತೆ ಇಲ್ಲ. ಅದರ ಏಕಮೇವ ಪೇಟೆಂಟ್ ಇರುವುದು ಒಕ್ಕುಂದರ ಹತ್ತಿರ. ಅವರದ್ದು ಎಂಥ ಸೂಕ್ಷ್ಮ ವಿಮರ್ಶಾಪ್ರಜ್ಞೆ ಎಂದರೆ, ಒಂದು ಲೇಖನದಿಂದ ತಮಗೆ ಅನುಕೂಲವಾಗುವಂತಹ ಸಾಲುಗಳನ್ನು ಎತ್ತಿಕೊಂಡು, ಆಯಾ ಲೇಖಕರನ್ನು 'ಜನಪರ'ರ ತಖ್ತೆಗೆ ಸೇರಿಸಿದ ಮೇಲೆ, ಆ ಇಡಿ ಲೇಖನದ ಅಥವಾ ಆ ಲೇಖಕರ ಬೇರೆ ಬರಹಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳ ಗೋಜಿಗೆ ಹೋಗುವ ಅವಶ್ಯಕತೆ ಇಲ್ಲ. ಇಲ್ಲಿ ಶಿವಪ್ರಕಾಶ್, ಆಶಾದೇವಿ, ರಾಜೇಂದ್ರ ಚೆನ್ನಿ, ಚಂದ್ರಶೇಖರ ನಂಗಲಿಯವರ ಲಕ್ಕು ಚೆನ್ನಾಗಿದೆ; ರಹಮತ್ ಸ್ವಲ್ಪದರಲ್ಲೆ ಪಾರಾಗಿದ್ದಾರೆ; ಇವರುಗಳಲ್ಲಿದ್ದ ಅಲ್ಪ-ಸ್ವಲ್ಪ ಸಂಕೋಚ ಮನೋಭಾವವನ್ನು 'ಜನಪರತೆಯ ಮಣ್ಣಿನ ಕತ್ತಿ'ಯಿಂದ ತುಂಡರಿಸಿ, ಒಕ್ಕುಂದ ವಿಮೋಚನೆ ನೀಡಿದ್ದಾರೆ. ಆದರೆ ಅನಂತಮೂರ್ತಿ, ತಿರುಮಲೇಶ್, ವಿಜಯಶಂಕರರಂತಹವರ ದುರಾದೃಷ್ಟ! ಅವರು ಕೋಮುವಾದಿಗಳಾಗಬೇಕಾಗಿದೆ! ಇದರಲ್ಲಿ ಬಂಪರ್ ಲಾಟರಿ ಡಿ.ಆರ್.ನಾಗರಾಜ್ ಮತ್ತು ಅವರ ಉದ್ಧರಣೆಯಲ್ಲಿ ಸೇರಿಕೊಂಡಿರುವ ಆಶೀಶ್ ನಂದಿಯವರದ್ದು! 'ಎಡಪಂಥೀಯರು, ಸಮಾಜವಾದಿಗಳಿಂದ' ಸರಿಯಾಗಿ ಬೈಸಿಕೊಳ್ಳುತ್ತಿದ್ದವರಿಗೆ, ಇಲ್ಲಿ ರಿಯಾಯತಿ ದಕ್ಕಿದೆ. ಒಕ್ಕುಂದ ಅವರ 'ಜನಪರ' ಅಕ್ಕ ಮೀರಾ ನಂದ ಎನ್ನುವವರು ಆಶೀಶ್ ನಂದಿ ಹೇಗೆ ವಿ.ಹಿಂ.ಪ.ವನ್ನು ಎತ್ತಿಹಿಡಿಯುವ ಚೆಡ್ಡಿ ಎಂದು 'ಫ್ರಂಟ್‌ಲೈನ್'ನ ಲೇಖನಮಾಲೆಯಲ್ಲಿ ಪರಿಪರಿಯಾಗಿ ಬಣ್ಣಿಸಿ, 'ಎಡ, ಸಮಾಜವಾದಿಗಳ ಕಣ್ಣು ತೆರೆಸಿದ್ದರು'! ಹಾಗಂತ ಇವೆಲ್ಲ ಟೆಂಟೆಟಿವ್–ಸರಿಯಾಗಿ ನಡೆದುಕೊಳ್ಳದಿದ್ದಲ್ಲಿ ಯಾರ ಮೇಲೆ 'ಸಂಸ್ಕೃತಿ ವಿಮರ್ಶಾ' ಕತ್ತಿ ಎರಗುತ್ತದೋ ಹೇಳುವಂತಿಲ್ಲ! ಲಂಕೇಶರ ಕೊನೆಗಾಲದ ಮಾತುಗಳೇ ಅಂತಿಮ ಸತ್ಯ ಎಂದು ಒಕ್ಕುಂದ ಹೇಳಿದರೆ ನಾವು ನಂಬಬೇಕು, ಕಾರಂತರು ಕೊನೆಗಾಲದಲ್ಲಿ ಹೇಳಿದ್ದನ್ನು ಅಷ್ಟು ಸೀರಿಯಾಸ್ಸಾಗಿ ತಗೊಳ್ಳಬಾರದು ಎಂದರೂ ನಂಬಬೇಕು. ನಾಮದೇವ ದಸಾಲರ ಕಾವ್ಯಕ್ಕೂ–ಅವರ ಶಿವ ಸೇನೆಯ ರಾಜಕೀಯಕ್ಕೂ ಸಂಬಂಧವಿದೆಯೇ? ಎಂಬ ಚರ್ವಿತ-ಚರ್ವಣ ಪ್ರಶ್ನೆಗಳನ್ನು ಚಿಲ್ಟುಗಳ ಹಾಗೆ ಕೇಳಕೂಡದು– ಯಾಕೆಂದರೆ ಒಕ್ಕುಂದ 'ಜನಪರ'. ಯಾವುದು ಅಡಿಗರ ಸಹಜ ಕಾವ್ಯ ಯಾವುದು ಅವರ ಅಸಹಜ ಕಾವ್ಯ ಎಂಬ ಪಟ್ಟಿ ಕನ್ನಡದಲ್ಲಿ ಇದುವರೆಗೆ ಇರಲೇ ಇಲ್ಲ! ಒಕ್ಕುಂದ ಅವರು ನೀಡಿ 'ಜನಪರ'ರನ್ನು ರಕ್ಷಿಸಿದ್ದಾರೆ! ಒಕ್ಕುಂದ ಅವರ ನವ ಸಂಸ್ಕೃತಿ ವಿಮರ್ಶೆಯಲ್ಲಿ ಪಶ್ಚಿಮದಿಂದ ಎರವಲು ಪಡೆದದ್ದು ಏನೂ ಇಲ್ಲ– ಅದು ಅಪ್ಪಟ ದೇಶಿ; ಅಂತಹ 'ಪರಂಗಿ ರೋಗ'ವೆಲ್ಲ ಒಕ್ಕುಂದ ಅವರನ್ನು ತಟ್ಟಲು ಸಾಧ್ಯವೇ ಇಲ್ಲ. ಯಾಕೆ? ಯಾಕೆಂದರೆ ಒಕ್ಕುಂದ 'ಜನಪರ'! ಈ ಸುಲಭದ ಮೆಡಿಕಲ್ ಸರ್ಟಿಫಿಕೇಟು ಎಲ್ಲಿ ಸಿಗುತ್ತದೆ ಎಂದು ಯಾವ 'ಜನಪರ'ರನ್ನು ಕೇಳುವುದು ಎಂದು ಯೋಚಿಸುತ್ತಿರುವೆ. ಒಕ್ಕುಂದ ಅವರ ಬರ್ರೋಬ್ಬರಿ 16 ಪುಟಗಳಿಗೆ ಪ್ರತಿಕ್ರಿಯಿಸಲು, ನಾನು ಮತ್ತೀಗ ಎರಡು ಕಾಲು ಪುಟಗಳನ್ನು ಬರೆದು ಸಂಪಾದಕರ ಔದಾರ್ಯವನ್ನು ದುರುಪಯೋಗ ಪಡಿಸಿಕೊಂಡಿದ್ದಕ್ಕೆ ಕಿಡಿಕಿಡಿಯಾಗಿರುವ ಹಾಲ್ ಮಾರ್ಕ್ ಗುರುತಿನ ಅಪ್ಪಟ ಚಿನ್ನದಂಥ 'ಜನಪರ'ರಾಗಿರುವ ಶ್ರೀಯುತ ಶಶಿಧರ ಹೆಮ್ಮಾಡಿ, ಕುಂದಾಪುರ– ಇವರು ತಿಳಿಸುವರೇ ವಿನಂತಿ.



ಒಕ್ಕುಂದ

• ಕೆ.ಫಣಿರಾಜ್

ಬೇಕಾಗಿದ್ದಾರೆ

ನಮ್ಮ ಸಂಸ್ಥೆಯ 'ಲಂಕೇಶ್' ವಾರ ಪತ್ರಿಕೆ, 'ಗೈಡ್' ಮಾಸಿಕ ಮತ್ತು 'ಜಾಬ್ ನ್ಯೂಸ್' ಪಾಕ್ಷಿಕ ಪತ್ರಿಕೆಗಳಲ್ಲಿ ಕೆಲಸ ನಿರ್ವಹಿಸಲು

* ವರದಿಗಾರರು
* ಪ್ರಚಲಿತ ವಿದ್ಯಮಾನಗಳ ಬಗ್ಗೆ ಲೇಖನ ಬರೆಯಬಲ್ಲವರು
* ಪ್ರೂಫ್ ರೀಡರ್‌ಗಳು
* ವರದಿಗಳನ್ನು ಅಚ್ಚುಕಟ್ಟಾಗಿ ರೀರೈಟ್ ಮಾಡುವವರು ಬೇಕಾಗಿದ್ದಾರೆ. ಕೆಲಸದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಮುಖ್ಯ. ಬೆಂಗಳೂರಿನ ದಕ್ಷಿಣ ವಲಯದಲ್ಲಿ ವಾಸಿಸುತ್ತಿದ್ದರೆ ಸೂಕ್ತ. ಆಸಕ್ತರು ತಮ್ಮ ಈಗಿನ ವಿಳಾಸ ಹಾಗೂ ದೂರವಾಣಿ ಸಂಖ್ಯೆ ಒಳಗೊಂಡ ಬಯೋಡೇಟಾ ಹಾಗೂ ಪ್ರಕಟಿತ ಲೇಖನಗಳ ಪ್ರತಿಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು ಅಥವಾ ಮೇಲ್ ಮಾಡಬಹುದು.

ದೂರವಾಣಿ ಸಂಖ್ಯೆ: 080-26676427
email:lankesh70@rediffmail.com

ನಂ. 9 ಇ.ಎ.ಟಿ. ರಸ್ತೆ, ಬಸವನಗುಡಿ
ಬೆಂಗಳೂರು -560 004

ಲಂಕೇಶ್ ವಾರ್ಷಿಕ ಚಂದಾ ವಿವರ

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ—

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿ/ಡಿ ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.


ನಂ. 9 ಇ.ಎ.ಟಿ. ರಸ್ತೆ, ಬಸವನಗುಡಿ ಬೆಂಗಳೂರು -560 004




ನಿರುದ್ಯೋಗಿಯಾದ ಲಂಕೇಶ್

ರಾಣಿ ಎಂಬ ಹುಡುಗಿ ಗಾಂಧಿ ಬಜಾರಿನಿಂದ ಸಜ್ಜನ್ ರಾವ್ ಸರ್ಕಲ್‌ಗೆ ಹೋಗುವ ಡಯಾಗನಲ್ ರಸ್ತೆಯಲ್ಲಿ ವಾಸಿಸುತ್ತಿದ್ದಳು. ಈ ಹಿಂದೆ ಲಂಕೇಶರು ಸೂಟ್ ಧರಿಸಿ, ಕೋಟಿನಲ್ಲಿ ಒಂದು ಗುಲಾಬಿ ಹೂವನ್ನು ಸಿಕ್ಕಿಸಿಕೊಂಡು ಡಯಾಗನಲ್ ರಸ್ತೆ ಮೂಲಕವೇ ಕಾಲೇಜಿಗೆ ಹೋಗುತ್ತಿದ್ದಾಗ ಅವರನ್ನು ನೋಡಿ ರಾಣಿ ತುಂಬಾ ಮೆಚ್ಚಿಕೊಂಡಿದ್ದಳಂತೆ. ಆದರೆ ಅವರಿಗೆ ಆಗಲೇ ಮದುವೆಯಾಗಿ ಮೂರು ಮಕ್ಕಳಿದ್ದಾರೆಂದು ಗೊತ್ತಾದಾಗ ಆಕೆಗೆ ತುಂಬಾ ನಿರಾಶೆ ಆಗಿತ್ತಂತೆ. ಆದರೂ ಲಂಕೇಶರನ್ನು ಹತ್ತಿರದಿಂದ ನೋಡಬೇಕು, ಅವರನ್ನು ಮಾತನಾಡಿಸಬೇಕು ಎಂದೇ ಆಕೆ ನನ್ನಿಂದ ಸೀರೆ ಖರೀದಿಸಲು ಶುರು ಮಾಡಿದಳು. ನಿಧಾನವಾಗಿ ಆಕೆ ನನ್ನ ಸ್ನೇಹಿತೆ ಆದಳು. ಆಕೆ ಎಷ್ಟು ಮುಗ್ಧ ಹುಡುಗಿ ಎಂದರೆ ಆಕೆಯ ಮನಸ್ಸಿನಲ್ಲಿ ಯಾವ ಕಲ್ಮಶವೂ ಇರಲಿಲ್ಲ. ಒಂದು ದಿನ ಆಕೆಯೇ ತಾನು ಲಂಕೇಶರನ್ನು ನೋಡಲು ತಮ್ಮ ಮನೆಗೆ ಬರುತ್ತಿದ್ದೆ ಎಂದು ಹೇಳಿದಳು.

ಒಮ್ಮೆ 'ಅನುರೂಪ' ಸಿನಿಮಾದ ಚಿತ್ರೀಕರಣಕ್ಕೆ ವಿದ್ಯಾರ್ಥಿಗಳಂತೆ ಕಾಣುವ ಕೆಲವು ಹುಡುಗ ಹುಡುಗಿಯರ ಅವಶ್ಯಕತೆ ಇತ್ತು, ಆದರೆ ಹಣ ಕೊಟ್ಟು ಎಕ್ಸ್‌ಟ್ರಾಗಳನ್ನು ಕರೆಸಿಕೊಳ್ಳುವಷ್ಟು ದುಡ್ಡು ಲಂಕೇಶರಲ್ಲಿ ಇರಲಿಲ್ಲ, ಆಗ ರಾಣಿಯೇ ತನ್ನ ಕೆಲವು ಫ್ರೆಂಡ್ಸ್‌ಗಳನ್ನು ಶೂಟಿಂಗ್‌ಗೆ ಕರೆದುಕೊಂಡು ಹೋಗಿದ್ದಳು. ಆಕೆ "ಲಂಕೇಶರು ನಿಮ್ಮ ಗಂಡ ಅಂತ ನಿಮಗೆ ಸ್ವಲ್ಪ ಕೂಡ ಜಂಭ, ಹೆಮ್ಮೆ ಇಲ್ಲ, ನಿಮ್ಮ ಗಂಡ ಇಷ್ಟು ದೊಡ್ಡ ವ್ಯಕ್ತಿ, ಸ್ವಲ್ಪ ಜಂಭ ತೋರಿಸಿ" ಎನ್ನುತ್ತಿದ್ದಳು. ಆದರೆ ಆಕೆಯ ಮಾತಿಗೆ ನನ್ನ ಬಳಿ ಉತ್ತರ ಇರಲಿಲ್ಲ.



'ಅನುರೂಪ' 1978ರಲ್ಲಿ ಬಿಡುಗಡೆಯಾಗಿ ಅದಕ್ಕೆ ರಾಜ್ಯ ಪ್ರಶಸ್ತಿಗಳು ಬಂದವು. ಅದರ ಮರು ವರ್ಷ 'ಖಂಡವಿದೆಕೋ ಮಾಂಸವಿದೆಕೋ' ಎಂಬ ಸಿನಿಮಾವನ್ನು ಲಂಕೇಶರು ನಿರ್ದೇಶಿಸಿದರು. ಅದಾದ ನಂತರ 1980ರಲ್ಲಿ 'ಎಲ್ಲಿಂದಲೋ ಬಂದವರು' ಸಿನಿಮಾ ಮಾಡಿದರು. ಈ ಚಿತ್ರದಲ್ಲಿ ಲೋಕೇಶ್ ತುಂಬಾ ಚೆನ್ನಾಗಿ ಅಭಿನಯಿಸಿದ್ದರು. ವಿಮಲಾ ನಾಯ್ಡು ಕೂಡ ಅಷ್ಟು ಹೊತ್ತಿಗೆ ಮದುವೆ ಆಗಿದ್ದರೂ ಆ ಚಿತ್ರದಲ್ಲಿ ನಟಿಸಿದ್ದಳು. ಲಂಕೇಶರು ಬರೆದಿದ್ದ ಹಾಡುಗಳಿಗೆ ವಿಜಯ ಭಾಸ್ಕರ್ ಸಂಗೀತ ನೀಡಿದ್ದರಲ್ಲದೆ, ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಧ್ವನಿಯಲ್ಲಿ ಅವು ತುಂಬಾ ಚೆನ್ನಾಗಿ ಮೂಡಿಬಂದಿದ್ದವು. ಬೇಗನೆ ಅವು ಜನಪ್ರಿಯಗೊಂಡವು. ಅದೇ ಹೊತ್ತಿಗೆ ನಮ್ಮ ಮಗಳು ಗೌರಿ ಮನೆಯ ಹತ್ತಿರವಿದ್ದ ನ್ಯಾಷನಲ್ ಕಾಲೇಜು ಸೇರಿದ್ದಳು. ಆಕೆ ಕಾಲೇಜನ್ನು ಪ್ರವೇಶಿಸುವಾಗ ಕೆಲ ಹುಡುಗರು 'ಎಲ್ಲಿಂದಲೋ ಬಂದವರು' ಚಿತ್ರದ 'ಎಲ್ಲಿದ್ದೆ ಇಲ್ಲೀ ತನಕ, ಎಲ್ಲಿಂದ ಬಂದ್ಯವ್ವಾ' ಹಾಡನ್ನು ಹಾಡುತ್ತಾ ಆಕೆಯನ್ನು ಚುಡಾಯಿಸುತ್ತಿದ್ದರು.



ಆ ಹಾಡು ಮಾತ್ರವಲ್ಲದೆ 'ಕೆಂಪಾದವೋ ಎಲ್ಲಾ ಕೆಂಪಾದವೋ' ಈಗಲೂ ಕೇಳುವಂತಹ ಹಾಡು.

ಈ ಅವಧಿಯಲ್ಲಿ ನಾನು ಮತ್ತು ಲಂಕೇಶರು ನಾವಾಯಿತು ನಮ್ಮ ಕೆಲಸವಾಯಿತು ಎಂದು ನನ್ನ ಪಾಡಿಗೆ ನಾನು, ಅವರ ಪಾಡಿಗೆ ಅವರು ಎಂಬಂತೆ ಜೀವಿಸುತ್ತಿದ್ದೆವು.

****

ನನ್ನ ಸೀರೆ ವ್ಯಾಪಾರ ಹೆಚ್ಚಾಗುತ್ತಾ ಹೋಯಿತು. ಸೀರೆಗಳನ್ನು ನೋಡಲು ನಮ್ಮ ಮನೆಗೆ ಬರುತ್ತಿದ್ದ ಮಹಿಳೆಯರು ಒಮ್ಮೊಮ್ಮೆ ಮಾತಾಡುತ್ತಾ ಕುಳಿತುಬಿಡುತ್ತಿದ್ದರು. ಎಷ್ಟು ಹೊತ್ತಾದರೂ ಅವರು ಹೋಗುತ್ತಲೇ ಇರಲಿಲ್ಲ, ಇದರಿಂದ ಓದಿಕೊಳ್ಳುವುದಕ್ಕೆ ಮಕ್ಕಳಿಗೆ ತೊಂದರೆ ಆಗಲಾರಂಭಿಸಿತು. ಲಂಕೇಶರೂ ಮಹಿಳೆಯರ ಹರಟೆಯ ಬಗ್ಗೆ ಗೊಣಗಲು ಶುರು ಮಾಡಿದರು.

ವಿಶ್ವವಿದ್ಯಾಲಯದಲ್ಲಿ ಪಾಠ, ಸಾಹಿತ್ಯ, ಸಿನಿಮಾ ಎಂದೆಲ್ಲಾ ಸಕ್ರಿಯರಾಗಿದ್ದ ಲಂಕೇಶರ ಸ್ನೇಹಿತರ ಬಳಗವೂ ಹೆಚ್ಚಾಗಿತ್ತು, ಅವರೆಲ್ಲ ಮನೆಗೆ ಬಂದು ಮಾತನಾಡುತ್ತ ಕುಳಿತರೆ ರಾತ್ರಿ ಎಷ್ಟು ತಡವಾದರೂ ಹೊರಡುತ್ತಿರಲಿಲ್ಲ, ನನಗೆ ತುಂಬಾ ಸುಸ್ತಾಗಿರುತ್ತಿತ್ತು, ಒಂದೆಡೆ ಅಡುಗೆ ಕೆಲಸ, ಇನ್ನೊಂದೆಡೆ ಮನೆ ಕೆಲಸ, ಮೊತ್ತೊಂದೆಡೆ ನಮ್ಮ ಮಕ್ಕಳ ಜವಾಬ್ದಾರಿ, ಅಷ್ಟು ಸಾಲದೆಂಬಂತೆ ಸೀರೆ ವ್ಯಾಪಾರದ ಕೆಲಸ... ಜೊತೆಗೆ ನಮ್ಮಿಬ್ಬರ ದಾಂಪತ್ಯದಲ್ಲಿ ಕವಲು ಮೂಡಿದ್ದರಿಂದ ನನ್ನ ಮನಸ್ಸಿಗೆ ನೆಮ್ಮದಿ ಎಂಬುದೇ ಇರಲಿಲ್ಲ, ಇದೆಲ್ಲಾ ಜೊತೆಗೂಡಿ ಹೈರಾಣಾಗಿರುತ್ತಿದ್ದೆ.

ಒಮ್ಮೆ ನಮ್ಮ ಮನೆಗೆ ಬಂದಿದ್ದ ಸಿ.ಆರ್. ಸಿಂಹ, ಮಾನಪ್ಪ ಮತ್ತು ಇನ್ನೂ ಕೆಲವರು ಲಂಕೇಶರೊಂದಿಗೆ ಕುಡಿಯುತ್ತಾ ಹರಟೆ ಹೊಡೆಯುತ್ತಾ ಕುಳಿತರು. ರಾತ್ರಿ ಹನ್ನೆರಡಾಯಿತು, ಒಂದು ಗಂಟೆ ಆಯಿತು, ಎರಡು ಗಂಟೆ ಆಯಿತು. ಮಾತು ಮುಗಿಯುತ್ತಿಲ್ಲ, ದನಿಗಳು ಜೋರಾಗುತ್ತಿದ್ದವು. ಬೆಳಗ್ಗೆ ಬೇಗನೆ ಎದ್ದು ನಾನು ಮನೆ ಕೆಲಸ, ಅಡುಗೆ ಎಲ್ಲ ಮುಗಿಸಿ ಮಕ್ಕಳನ್ನು ಸ್ಕೂಲಿಗೆ ಕಳುಹಿಸಬೇಕಿತ್ತು, ನನಗೆ ರೇಗಿ ಹೋಯಿತು. ಎದ್ದವಳೇ ಲಂಕೇಶರ ರೂಮಿಗೆ ಹೋಗಿ "ನಿಮಗೆ ಯಾರಿಗೂ ಮನೆಯಲ್ಲಿ ಹೆಂಡತಿ ಮಕ್ಕಳು ಇಲ್ಲವಾ?" ಎಂದು ಕೂಗಾಡಿಬಿಟ್ಟೆ. ಎಲ್ಲರೂ ಮರು ಮಾತನಾಡದೆ ಸುಮ್ಮನೆ ಎದ್ದು ಹೋಗಿಬಿಟ್ಟರು.

****

"ಪ್ರಶಸ್ತಿ ಪಡೆದವರಿಗೆ ಬಿಡಿಎಯಿಂದ ಸೈಟ್ ಕೊಡುತ್ತಾರಂತೆ. ಹೇಗೂ ನಿನ್ನ ಹೆಸರಿಗೆ ಅವಾರ್ಡ್ ಬಂದಿದೆ. ನೀನೂ ಒಂದು ಸೈಟಿಗೆ ಅಪ್ಲಿಕೇಶನ್ ಹಾಕು" ಎಂದು ಕೆಲವರು ನನಗೆ ಹೇಳಿದರು. ಹೌದಲ್ಲ, ನಾನೂ ಯಾಕೆ ನನ್ನ ಹೆಸರಲ್ಲಿ ಒಂದು ಸೈಟು ಪಡೆಯಬಾರದು ಎಂದು ಯೋಚಿಸಿ ಅದರ ಬಗ್ಗೆ ಲಂಕೇಶರನ್ನು ಕೇಳಿದೆ. ಆಗ ಅವರು "ಗಂಡನ ಹೆಸರಲ್ಲಿ ಒಂದು ಬಿಡಿಎ ಸೈಟ್ ಇದ್ದರೆ ಹೆಂಡತಿ ಇನ್ನೊಂದು ಸೈಟನ್ನು ಪಡೆಯುವುದು ಕಾನೂನುಬಾಹಿರ. ಹಾಗೆಲ್ಲಾದರೂ ನೀನು ಮಾಡೀಯ" ಎಂದರು. ಆದರೂ ನನ್ನ ಸ್ನೇಹಿತರು "ನೀನು ಸೈಟಿಗೆ ಅಪ್ಲಿಕೇಶನ್ ಹಾಕು. ಲಂಕೇಶರಿಗೆ ಏನೂ ಗೊತ್ತಾಗುವುದಿಲ್ಲ" ಎಂದು ಪುಸಲಾಯಿಸಿದರು. ಬೇಡಪ್ಪಾ, ನಾನು ಅಂತಹ ಕೆಲಸ ಮಾಡಿ ಲಂಕೇಶರಿಗೆ ಕೆಟ್ಟ ಹೆಸರು ಬರುವುದು ಬೇಡ ಎಂದು ಆ ವಿಷಯವನ್ನು ಅಲ್ಲಿಗೇ ಬಿಟ್ಟೆ.

****

ವಿಶ್ವವಿದ್ಯಾಲಯಕ್ಕೆ ಹೋಗಿ ಪಾಠ ಮಾಡುವುದು ಲಂಕೇಶರಲ್ಲಿ ರೇಜಿಗೆ ಹುಟ್ಟಿಸಲಾರಂಭಿಸಿತ್ತು, ಲಂಕೇಶರು ಒಂದು ರೀತಿಯಲ್ಲಿ ಸರ್ಕಾರಿ ನೌಕರ ಆಗಿದ್ದರೂ ಸಾರ್ವಜನಿಕ ಸಭೆಗಳಲ್ಲಿ ರಾಜಕಾರಣಿಗಳ ವಿರುದ್ಧ ಮಾತನಾಡುತ್ತಿದ್ದರು. ಒಮ್ಮೆ ಯಾವುದೋ ಸಭೆಯಲ್ಲಿ ರಾಜಕಾರಣಿಗಳ ವಿರುದ್ಧ ಮಾತನಾಡಿದ್ದರ ಬಗ್ಗೆ ವಿವರಣೆ ಕೇಳಿ ವಿಶ್ವವಿದ್ಯಾಲಯದಿಂದ ನೋಟಿಸ್ ಬಂತು. ವಿವರಣೆ ಕೊಡುವ ಬದಲು ಲಂಕೇಶರು ತಮ್ಮ ಎರಡು ದಶಕಗಳ ಅಧ್ಯಾಪಕ ವೃತ್ತಿಗೆ ರಾಜೀನಾಮೆ ಕೊಟ್ಟು ಮನೆಗೆ ಬಂದರು. ರಾಜೀನಾಮೆ ಕೊಡುವ ಮೊದಲು ನನಗೆ ಒಂದು ಮಾತನ್ನೂ ಅವರು ಹೇಳಲಿಲ್ಲ.

ಕೆಲವರು "ಕೆಲಸಕ್ಕೆ ರಾಜೀನಾಮೆ ಕೊಟ್ಟ ನಂತರವೂ ಆರು ತಿಂಗಳು ಟೈಮ್ ಇರುತ್ತೆ. ನೀನು ಲಂಕೇಶರಿಗೆ ಬುದ್ಧಿ ಹೇಳಿ ಮತ್ತೆ ಅಧ್ಯಾಪಕ ಕೆಲಸಕ್ಕೆ ಹೋಗಲು ಅವರನ್ನು ಒಪ್ಪಿಸು" ಎಂದರು. ನಾನು ಆ ನಿಟ್ಟಿನಲ್ಲಿ ಪ್ರಯತ್ನಿಸಿದೆ. ಆದರೆ ಲಂಕೇಶರು "ನಾನು ಮತ್ತೆ ಆ ಕೆಲಸಕ್ಕೆ ಹೋಗುವುದಿಲ್ಲ" ಎಂದುಬಿಟ್ಟರು. ಆಗ ನನ್ನ ಅಪ್ಪಯ್ಯ ತಿಪಟೂರಿನ ಕಲ್ಪತರು ಕಾಲೇಜ್‌ನವರಿಗೆ ಹೇಳಿ ಆ ಕಾಲೇಜಿನಲ್ಲಿ ಲಂಕೇಶರಿಗೆ ಒಂದು ಕೆಲಸ ಕೊಡಿಸುತ್ತೇನೆ ಎಂದರು. ಅದಕ್ಕೆ ಲಂಕೇಶರು "ನನಗೆ ಪ್ರಿನ್ಸಿಪಾಲ್ ಪೋಸ್ಟ್ ಕೊಡಿಸುತ್ತಾರಾ ನಿನ್ನ ಅಪ್ಪಯ್ಯ?" ಎಂದು ವ್ಯಂಗ್ಯವಾಡಿದರು. ಅಲ್ಲಿಗೆ ಆ ಚಾಪ್ಟರ್ ಕ್ಲೋಸ್ ಆಯಿತು. ಹೀಗೆ ಮೂವರು ಮಕ್ಕಳು ಮತ್ತು ಹೆಂಡತಿಯ ಜವಾಬ್ದಾರಿಯನ್ನು ಹೊತ್ತಿದ್ದರೂ ಲಂಕೇಶರು ತಮ್ಮ 45ನೇ ವಯಸ್ಸಿನಲ್ಲಿ ನಿರುದ್ಯೋಗಿಯಾದರು.


ಮಗ ಅಜಿತ್ ಜೊತೆ ಇಂದಿರಾ

ನನ್ನ ಸೀರೆ ವ್ಯಾಪಾರ ಚೆನ್ನಾಗಿ ನಡೆಯುತ್ತಿದ್ದರಿಂದ ಆ ಅವಧಿಯಲ್ಲಿ ಮನೆ ಮತ್ತು ಮಕ್ಕಳ ವೆಚ್ಚಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಲಂಕೇಶರಲ್ಲಿ ಅದರ ಬಗ್ಗೆ ಯಾವ ಅಸಮಾಧಾನವೂ ಇರಲಿಲ್ಲ, ಹಲವೊಮ್ಮೆ ಅವರು ತಮ್ಮ ಗೆಳೆಯರಿಗೆ "ನನಗೇನಪ್ಪ ಯೋಚನೆ? ನನ್ನ ಹೆಂಡತಿ ನನ್ನನ್ನು ಸಾಕುತ್ತಾಳೆ" ಎನ್ನುತ್ತಿದ್ದರು. ಅಥವಾ ಅವರ ಮಿತ್ರರ ಜೊತೆ ಮನೆಯಲ್ಲಿ ಊಟಮಾಡುವಾಗ "ನನ್ನ ಹೆಂಡತಿ ದುಡಿದು ನಮಗೆ ಕೊಟ್ಟಿರುವ ಊಟ ಇದು" ಎನ್ನುತ್ತಿದ್ದರು. ನಾನು ನನ್ನ ಕಾಲ ಮೇಲೆ ನಿಂತಿದ್ದರ ಬಗ್ಗೆ ಲಂಕೇಶರಿಗೆ ಹೆಮ್ಮೆ ಇತ್ತು, ನನ್ನ ಸಾಧನೆ ಬಗ್ಗೆ ಗೌರವವಿತ್ತು.

ಆಗೆಲ್ಲ ಲಂಕೇಶರು "ಇಂದಿರಾ, ನನಗೆ ಒಂದು ಸಿಗರೇಟ್ ಪ್ಯಾಕ್ ತರಿಸು" ಎಂದೋ, "ಒಂದು 20 ರೂಪಾಯಿ ಇದ್ದರೆ ಕೊಡು" ಎಂದೋ ಕೇಳುತ್ತಿದ್ದರು. ನಾನು ಕೊಡುತ್ತಿದ್ದೆ. ನಿರುದ್ಯೋಗಿ ಆಗಿದ್ದರೂ ಲಂಕೇಶರು ಸುಮ್ಮನೆ ಕೂರುತ್ತಿರಲಿಲ್ಲ, ಅವರು ತಮ್ಮ ಬರವಣಿಗೆಯನ್ನು ಮುಂದುವರೆಸಿದ್ದರು.

ಸ್ವಲ್ಪ ದಿನಗಳ ನಂತರ 'ಪ್ರಜಾವಾಣಿ'ಯಲ್ಲಿ ಒಂದು ಅಂಕಣ ಬರೆಯಲಾರಂಭಿಸಿದರು. ಬಹಳ ಬೇಗ ಲಂಕೇಶರ ಲೇಖನಗಳು ತುಂಬಾ ಜನಪ್ರಿಯವಾದವು. ಆದರೆ ಅವು ರಾಜಕಾರಣಿಗಳಲ್ಲಿ ಅದರಲ್ಲೂ ಗುಂ ಮತ್ತು ಬಂ ಎಂದು ಅಂಕಣದಲ್ಲಿ ಕರೆಸಿಕೊಳ್ಳುತ್ತಿದ್ದವರಲ್ಲಿ ಕೋಪ ತರಿಸಿತು. ಅವರು ಪ್ರಜಾವಾಣಿಯ ಮಾಲೀಕರ ಮೇಲೆ ಒತ್ತಡ ಹೇರಲಾರಂಭಿಸಿದರು. ಅದಕ್ಕೆ ಮಣಿದ ಪ್ರಜಾವಾಣಿ ಮಾಲೀಕರು ಇದ್ದಕ್ಕಿದ್ದಂತೆ ಲಂಕೇಶರ ಲೇಖನಗಳನ್ನು ಪ್ರಕಟಿಸುವುದನ್ನು ನಿಲ್ಲಿಸಿದರು. ಲಂಕೇಶರಿಗೆ ಕೋಪ ಬಂತು. ಪ್ರಜಾವಾಣಿಯ ಕಚೇರಿಗೆ ಹೋಗಿ "ನಾನು ಬರೆದದ್ದನ್ನು ಪ್ರಕಟಿಸಲು ನಿಮಗೆ ಧೈರ್ಯ ಇಲ್ಲದಿದ್ದರೆ ನನ್ನನ್ನೇಕೆ ಬರೆಯಲು ಕೇಳಿದಿರಿ?" ಎಂದು ಗಲಾಟೆ ಮಾಡಿ ಬಂದರು.

ಲಂಕೇಶರಿಗೆ ತುಂಬಾ ಸಿಟ್ಟು ಬಂದಿತ್ತು, ತಾನೇ ಏಕೆ ಒಂದು ಪತ್ರಿಕೆಯನ್ನು ಪ್ರಾರಂಭಿಸಬಾರದು ಎಂದು ಯೋಚಿಸಲಾರಂಭಿಸಿದರು.

****

ನಮ್ಮ ಮನೆಯಲ್ಲಿ ನನ್ನ ಸೀರೆ ವ್ಯಾಪಾರ ಮುಂದುವರೆಸುವುದು ಕಷ್ಟವಾಗಲಾರಂಭಿಸಿತು. ಮನೆಯ ಹತ್ತಿರದಲ್ಲೇ ಅಂಗಡಿ ಮಾಡಲು ತೀರ್ಮಾನಿಸಿ ಸೂಕ್ತವಾದ ಜಾಗಕ್ಕೆ ಹುಡುಕಲಾರಂಭಿಸಿದೆ. ಆಗ ಉತ್ತರಾಧಿಮಠದ ಜಾಗದಲ್ಲಿ ನ್ಯಾಷನಲ್ ಕಾಲೇಜ್ ಪಕ್ಕದಲ್ಲಿ ಆರ್.ಎಂ.ಬಿ.ಆರಾಧ್ಯ ಎನ್ನುವವರು ಒಂದು ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸಿದ್ದರು. ಅದನ್ನು ಹೋಗಿ ನೋಡಿದೆ. ಮನೆಗೆ ತುಂಬಾ ಹತ್ತಿರವಾಗಿತ್ತು, ಕಟ್ಟಡವೂ ಚೆನ್ನಾಗಿತ್ತು, ಆದ್ದರಿಂದ 101 ರೂ. ಟೋಕನ್ ಅಡ್ವಾನ್ಸ್ ಕೊಟ್ಟು ಐದು ದಿನ ಟೈಮ್ ಕೊಡಿ ಎಂದು ಕೇಳಿಕೊಂಡು ಬಂದೆ.

ಅಂಗಡಿ ಮಾಡಿ ಲಾಸ್ ಆದರೆ ಏನು ಗತಿ ಎಂದು ಆ ಐದು ದಿನವೂ ಯೋಚಿಸಿದೆ. ಕೊನೆಗೆ ಧೈರ್ಯ ಮಾಡಿ ಅಧಿಕೃತವಾದ ಅಂಗಡಿ ತೆರೆಯಲು ತೀರ್ಮಾನಿಸಿದೆ. ನಮಗೆ ಪರಿಚಯವಿದ್ದ ಕಾರ್ಪೊರೇಷನ್ ಬ್ಯಾಂಕ್‌ನವರನ್ನು ಸಂಪರ್ಕಿಸಿದೆ. ಅವರು ಓ.ಡಿ. ಕೊಡಲು ಒಪ್ಪಿದರು. ಜೊತೆಗೆ ನಮ್ಮ ಅಂಗಡಿಯ ಹೆಸರನ್ನು ನೋಂದಾಯಿಸಲು ಸೂಚಿಸಿದರು. ಆಗ ದಿನಕರ ಮತ್ತು ನನ್ನ ಜಂಟಿ ಮಾಲೀಕತ್ವದಲ್ಲಿ 'ಮಯೂರ್ ಟೆಕ್ಸ್‌ಟೈಲ್ಸ್' ಎಂಬ ಹೆಸರನ್ನು ನೋಂದಾಯಿಸಿದೆವು. ಅಂಗಡಿಯ ಲೆಕ್ಕಗಳನ್ನು ನೋಡಿಕೊಳ್ಳಲು ಬ್ಯಾಂಕ್‌ನವರು ರವೀಂದ್ರ ನಾಯ್ಡು ಎಂಬ ಆಡಿಟರ್ ಅವರನ್ನು ನನಗೆ ಪರಿಚಯಿಸಿದರು. ರವೀಂದ್ರ ಕೂಡ ಆಗ ತಾನೇ ತಮ್ಮ ಸಿಎ ಮುಗಿಸಿ ಆಫೀಸ್ ಅನ್ನು ತೆರೆದಿದ್ದರು.

ದಿನಕರನಿಗೆ ಓರ್ವ ಮರಗೆಲಸದವರ ಪರಿಚಯವಿತ್ತು, ಅವರನ್ನು ಕರೆದು ಅಂಗಡಿಗೆ ಬೇಕಿದ್ದ ಶೆಲ್ಫ್, ಟೇಬಲ್, ಇತ್ಯಾದಿಗಳನ್ನು ಕಡಿಮೆ ಖರ್ಚಿನಲ್ಲಿ ಮಾಡಿಸಿದೆವು. ಆದರೆ ಆ ಅಂಗಡಿಯನ್ನು ತುಂಬಲು ಬೇಕಾಗುವಷ್ಟು ಸೀರೆಗಳು ನಮ್ಮಲ್ಲಿ ಇರಲಿಲ್ಲ. ನಾನು ನಿಯತ್ತಿನಿಂದ ವ್ಯವಹಾರ ಮಾಡುತ್ತಿದ್ದದ್ದನ್ನು ಮತ್ತು ಬೆಳೆಯುತ್ತಿದ್ದದ್ದನ್ನು ಗಮನಿಸಿದ ವಿಮಲ್ ಸೀರೆಯ ಡೀಲರ್ "ನಾನು ನಿಮಗೆ 40 ಸಾವಿರ ರೂ.ಗಳಷ್ಟು ಸೀರೆಗಳನ್ನು ಕೊಡುತ್ತೇನೆ. ಎರಡು ತಿಂಗಳ ನಂತರ ಎಷ್ಟು ಸೀರೆಗಳು ಉಳಿಯುತ್ತವೋ ಅವನ್ನು ವಾಪಸ್ ಕೊಟ್ಟು ಮಾರಾಟವಾಗಿರುವ ಸೀರೆಗಳ ಹಣವನ್ನು ಕೊಡಿ" ಎಂದರು. ಆಗಿನ ಕಾಲದಲ್ಲಿ 40 ಸಾವಿರ ರೂಪಾಯಿಗಳೆಂದರೆ ತುಂಬಾ ಜಾಸ್ತಿಯೇ. ಅವರಲ್ಲದೆ ಬಾಂಬೆ ಡೈಯಿಂಗ್, ಗಾರ್ಡನ್ ಮತ್ತು ಇತರೆ ಕಂಪನಿಗಳ ಡೀಲರ್‌ಗಳೂ ಎರಡು ತಿಂಗಳ ನಂತರ ಹಣ ಕೊಡಿ ಎಂದು ಸೀರೆಗಳನ್ನು ಕೊಟ್ಟರು.

ಹೀಗೆ ನನ್ನ ಅಂಗಡಿ 'ಮಯೂರ್ ಟೆಕ್ಸ್‌ಟೈಲ್ಸ್' ಬಾಗಿಲು ತೆರೆಯಿತು.


ನಾನು ವ್ಯಾಪಾರದಲ್ಲಿ ಯಶಸ್ವಿ ಆಗುತ್ತಿರುವುದನ್ನು ಕಂಡು ಲಂಕೇಶರೂ ಸಂತೋಷಪಟ್ಟರು. ದಿನಕರನ ತಂದೆ ಬಿಸಾಕಿದ ಕನ್ಯಾಕುಮಾರಿ ಫೋಟೋವನ್ನು ನನ್ನ ಅಂಗಡಿಯ ದೇವರಾಗಿ ಇಟ್ಟುಕೊಂಡೆ. (ಈಗ ನಾನು ಆ ಅಂಗಡಿ ಮುಚ್ಚಿ ನಿವೃತ್ತಿ ಹೊಂದಿದ್ದರೂ ಆ ಫೋಟೋ ಇವತ್ತಿಗೂ ನನ್ನ ದೇವರ ಗೂಡಿನಲ್ಲಿದೆ. ನಮ್ಮ ಮನೆ ದೇವರು ಬಸವಣ್ಣ, ಆದರೆ ನನ್ನ ದೇವರ ಗೂಡಿನಲ್ಲಿ ಬಸವಣ್ಣನಲ್ಲದೆ, ಶಿವ, ಗಣೇಶ, ಲಕ್ಷ್ಮಿಯ ವಿಗ್ರಹಗಳ ಜೊತೆ ಆ ಕನ್ಯಾಕುಮಾರಿಯ ಫೋಟೋ ಇದೆ.)

(ಮುಂದುವರೆಯುತ್ತದೆ...

ಉಂಡ ಎಲೆ ಮೇಲೆ ಉರುಳೋರು ಹಂದಿ, ನಾಯಿಗಿಂತ ಕಡೆ!

ಶ್ರೀರಾಮುಲು ಗೆಲುವನ್ನು ರಾವಣನ ವಿರುದ್ಧ ಗೆದ್ದ ರಾಮನ ಗೆಲುವಿನಷ್ಟೇ ಕೊಂಡಾಡುತ್ತಿರುವವರ ಪೈಕಿ ಸೀರನೂ ಒಬ್ಬ ಆದ್ದರಿಂದ,

"ರಾಮುಲು ಗೆದ್ದಾಯ್ತಲ್ಲಾ, ಮುಂದೇನು ಮಾಡ್ತನ್ಲ ಉಗ್ರಿ?" ಎಂದ.



"ಏನು ಮಾಡನ ಅನ್ನೋ ಸಮಸ್ಯೆ ಅವುನೆದ್ರಿಗೂ ಅದೆ ಕಣೊ ಸೀರಮಾವ. ಪಾಪ ಅವುನ ರಾಜಕೀಯದ ಗುರು ಜೈಲಲ್ಲವುನೆ. ಜೆಡಿಎಸ್‌ಗೋಗನಾ ಅಂದ್ರೆ ಅಲ್ಲಿಗೆ ಹೋದೇಟಿಗೆ 'ನಮ್ಮ ತಂದೆ ಸಮಾನರಾದ ದೇವೇಗೌಡರೆ', 'ಅಣ್ಣನ ಸಮಾನರಾದ ರೇವಣ್ಣನವರೆ', 'ನಮ್ಮ ನಾಯಕರಾದ ಕುಮಾರಸ್ವಾಮಿಯವರೇ', 'ಅತ್ತಿಗೆಯಮ್ಮನವರಾದ ಅನಿತಕ್ಕನವರೆ' ಅಂತ ಭಾಷಣ ಮಾಡಬೇಕು. ಇನ್ನು ಕಾಂಗ್ರೆಸಿಗಂತೂ ಹೋಗಕ್ಕಾದಿಲ್ಲ, ಅವರೂ ಸೇರಸದಿಲ್ಲ."

"ಅದ್ಯಾಕ್ ಸೇರಸದಿಲ್ಲ? ರಾಮುಲು ಸೇರಿದ್ರೆ ಪಾರ್ಟಿಗೆ ವಳ್ಳೆದಲವೆ?"

"ಆ ಕಾಲ್ದಲ್ಲಾದರೆ ಸೇರುಸ್ತಿದ್ರು ಕಣೊ. ಈಗ ಸೋನಿಯಾ ಗಾಂಧಿ ಅವುಳೆ . ಆದ್ರಿಂದ ರಾಮುಲು ತರದೋರ್ನ ಸೇರಸದಿಲ್ಲ."

"ಅಂಗರೆ ಬ್ಯಾರೆ ಪಾರ್ಟಿ ಮಾಡ್ತನೆ ಅನ್ನು."

"ಮಾಡಬವುದು. ಅದೂ ಅಷ್ಟು ಸುಲಬಲ್ಲ. ಹಿಂದೆ ಪಾರ್ಟಿ ಮಾಡಿ ಪಾಪರ್ರೆದ್ದೋರ ಚರಿತ್ರೆ ನೋಡಿದ್ರೆ ಸುಲಬಲ್ಲ. ಏನೂ ಬ್ಯಾಡಪ್ಪ ಅಂತ ಬಂಗಾರಪ್ಪನೆ ಕಾಲುಮುರಕೊಂಡೋನಂಗೆ ಯಲ್ಲಾನು ಕಳಕೊಂಡು ದ್ಯಾವೇಗೌಡರ ಪಾರ್ಟಿ ಆಫೀಸತ್ರ ಕುಂತವುನೆ, ಇನ್ನ ರಾಮುಲುದ್ಯಾವ ಲ್ಯಕ್ಕ?"

"ಆ ಬಾಣದ ಗುರುತು ಮಡಿಕಂಡು ಕುಂತವಲ್ಲ ಅವುರತ್ರಕ್ಕೋದ್ರೆ?"

"ಪಾಪ ಅವು ಊರಿಗೊಕ್ಲಲ್ಲ, ಮಶಾಣಕ್ಕಣಲ್ಲ ಅನ್ನಂಗವುರೆ. ಆದ್ರು ಸದ್ದಿಕೆ ಅವುರೆ ಮರಿಯಾದಸ್ತರು. ಅವುರ ಸಂಖೆ ಭಾಳ ಕಮ್ಮಿ ಕಣೊ."

"ಲೋಕದ ಮ್ಯಾಲೆ ವಳ್ಳೆ ಜನಗಳು ಕಡಿಮ್ಯಾಗೋದ್ರು ಕಂಡ್ಯ" ಎಂದ ಕಾಳಮಾವ.

"ಆದರಲ್ಲೂ ದಕ್ಷಿಣ ಕನ್ನಡದಲ್ಲಿ ತೀರಾ ಕಮ್ಮಿ ದ್ವಡಪ್ಪ" ಎಂದು ವಾಟಿಸ್ಸೆ ಬಂದ.

"ಆಂಗೇನುವಿಲ್ಲ ಕಂಡ್ಯ. ಯಲ್ಲಾ ಕಡೇಲು ಯಲ್ಲಾ ತರದ ಜನನೂ ಅವುರೆ."

"ಇರಬವುದು ಆದ್ರೆ ದಕ್ಷಿಣ ಕನ್ನಡದಲ್ಲಿ ಲೀಡ್ರೇ ಸರೀಲ್ಲ ಪರೆಗ್‌ಜಾಂಪಲ್, ಪೇಜಾವರ, ಧನಂಜಯ, ಸಣ್ಣಮುಟ್ಟ ಸ್ವಾಮಿಗಳು, ಆಚಾರಿ ಇವುರ್ಯಲ್ಲ ಯೂಜಲೆಸ್ ಫೆಲೋಗಳು."

"ಆಚಾರಿ ಅನ್ನಬ್ಯಾಡ ಕಣೊ. ಅದೇ ದೊಡ್ಡ ಗಲಾಟಿ ಆಗ್ಯದೆ" ಎಂದ ಉಗ್ರಿ.

"ಅದೇನು ಗಲಾಟ ಆಗಿದ್ದತ್ಲ?" ಎಂದಳು ಜುಮ್ಮಿ.

"ಅಲ್ಲಿ ಸ್ವಲುಪ ನಿನ್ನಂಗೆ ಒಬ್ಬು ಸಾಯಿತಿ ಅವುಳೆ ಕಣೆ. ಅವುಳೆಸುರು ನಾಗವೇಣಿ ಅಂತ. ಆಗಿನ ಕಾಲ್ದಲ್ಲಿ ಗಾಂಧಿ ಮಾತ್ಮ ದಕ್ಷಿಣ ಕನ್ನಡಕ್ಕೆ ಬಂದಾಗ ಏನೇನಾಯ್ತು ಅಂತ ಕತೆ ಬರದವುಳೆ."

"ಏನಂತ ಬರದವುಳೆ?"

"ಅದ ನಾನೇಳ್ತಿನಿ ಕಣಕ್ಕ. ಗಾಂಧಿ ಮಾತ್ಮ ಹಿಂದೂ ಧರಮುದ ಪುರೋಹಿತಶಾಹಿ ವಿರೋಧಿ, ಕಂದಾಚಾರಿ ವಿರೋಧಿ, ಯಲ್ಲಾ ಜಾತೀಯೋರ್ನು ಸಮಾನವಾಗಿ ಕಾಣತಿದ್ದೋನು. ಈಶ್ವರ ಅಲ್ಲಾ ತೇರೆ ನಾಮ್ ಅಂದೋನು. ಅಂಥೋನು ದಕ್ಷಿಣ ಕನ್ನಡಕ್ಕೆ ಬತ್ತರೆ ಅಂದ್ರೆ ಕೆಳಜಾತಿ ಜನಕ್ಕೆ ಏನನ್ನುಸ್ತು, ಮೇಲು ಜಾತಿ ಜನಕೆ ಏನಾಯ್ತು ಅನ್ನದ ಬರದವುಳೆ."

"ಅಷ್ಟೆಯಾ ಅನ್ನು."

"ಅಷ್ಟೇ ಅಲ್ಲ ಕಣಕ್ಕ. ಗಾಂಧಿ ಚಳುವಳಿಲಿ ದ್ವೋರ್ಯಂಥೋರು, ಗಾಂಧಿ ಬತ್ತನೆ ಅಂತ ಚನ್ನದ ವಡವೆ ದಾನ ಈಸಗಂಡು ಇಟಗಂಡೋಳ ಕತ್ತಿಗೆ ಹಾಕಿದೊರು, ಗಾಂಧಿ ಬೋದೋರು, ಯಲ್ಲಾರ ಮ್ಯಾಲೂ ಬರದವುಳೆ. ಯಲ್ಲಕ್ಕಿಂತ ಪುರೋಹಿತಶಾಹಿಗಳ ಪುಕಳಿ ಉರಿಯಂಗೆ ಒಬ್ಬ ಸಾಬರೋನು ಹಿಂದೂ ವಿಧವೆ ಮದಿವಾಗದ ದಾಮಿಲು ಮಾಡಿಬುಟ್ಟವುಳೆ. ಇದ ತಡಿಯಕ್ಕಾಗದ ಪುರೋಹಿತರು ಆಚಾರಿಗಳ ಎತ್ತಿಕಟ್ಟಿ ಆಟ ಆಡ್ತ ಅವುರೆ."

"ಆಚಾರಿಗಳ್ಯಾಕೆ ಎತ್ತಿಕಟ್ಯವುರೆ?"

"ಆಚಾರಿಗಳ ಆಚಾರಿ ಅಂದವುಳೆ. ವಿಶ್ವಕರ್ಮ ಅನ್ನಬೇಕಾಗಿತ್ತಂತೆ."

"ಅಲ್ಲಪ್ಪ ನಮ್ಮೂರಾಚಾರ್ರ ನಾವಂಗೆ ಅಲವೆ ಕರಿಯದು? ಇಸ್ವಕರುಮ ಅಂತ ಎಲ್ಲಂತಿವೀ" ಎಂದ ಸೀರ.

"ಸರಿ. ಈ ಬಿಜೆಪಿ ಜನ ಆಚಾರ್ರ ಎತ್ತಿಕಟ್ಟೀ ನೀವು ವಿಶ್ವಕ್ಕೆ ಶ್ರೇಷ್ಟ ಜನ, ಬ್ರಾಂಬ್ರಿಗಿಂತ ಮ್ಯಾಲಿದ್ದೀರಿ. ಯಾಕಪ್ಪ ಅಂದ್ರೆ, ನೀವು ವಿಗ್ರಹ ಕೆತ್ತಿ ಕೊಟ್ಟ ಮ್ಯಾಲೆ ನಾವು ಅದನ್ನು ಸ್ಥಾಪನೆ ಮಾಡಿ, ಗುಡಿಕಟ್ಟಿ, ಕಾಣಕೆ ದುಡ್ಡಲ್ಲಿ ಕಾಲಮಾಡ್ತ ಮಡೆಸ್ನಾನ ಮಾಡಿಸಿಗಂಡು ಮಜವಾಗಿರದು ಅಂತ ಅವರನ್ನ ಎತ್ತಿಕಟ್ಟಿಬುಟ್ಟವುರೆ. ಅದ್ಕೆ ಆಚಾರ್ರ್ಯಲ್ಲ 'ನಾವು ಆಚಾರ್ರಲ್ಲ, ವಿಶ್ವಕರ್ಮದೋರು' ಅಂತ ನಾಗವೇಣಿ ಮ್ಯಾಲೆ ಜಗಳಕ್ಕೆ ಬಿದ್ದವುರೆ."

"ಅಲ್ಲಾ ಕಂಡ್ಯ, ವಿಶ್ವಕರ್ಮ ಅನ್ನದು ಅತ್ತಗಿರ್ಲಿ, ಇವುರು ಆಚಾರಿ ಅನ್ನದು ತಪ್ಪಿಸಿಗಂಡುಬುಟ್ಟರೆ? ಪುಟ್ಟಾಚಾರಿ ಕುಡ್ಲು ಮಚ್ಚು ಗುಳನ್ಯಲ್ಲ ಥೊಳಿಸಿಕೊಡ್ತನೆ, ಸೀನಾಚಾರಿ ಬಾಗಲು ಕಿಟಗಿ ಮಾಡದಲ್ದೆ ಮನೆನೆ ಕಟ್ಟತನೆ. ಅವುರೆಂಗುಸುರು ಇಸ್ತ್ರಿಯಲೆ ಮಾಡ್ತರೆ. ತಿಮ್ಮಚಾರ್ರು ವಡವೆ ಮಾಡ್ತರೆ. ಹಿಂಗೆ ಸಕಲಿಸ್ಟು ಕ್ಯಲಸ ಮಾಡ್ತ ಇರೋರು ನಮ್ಮಂಗೆ ಅವುರಪ್ಪ, ಆಚಾರಿ ಅಂದೇಟಿಗೆ ಅವುರ್ಯಾಕೆ ಸಿಟ್ಟಾಗಿದ್ದರೂ?" ಎಂದ ಕಾಳಮಾವ."

"ಸಿಟ್ಟಾಗಿಲ್ಲ ದ್ವಡಪ್ಪ, ಈ ಮಡೆಸ್ನಾನದ ಕಂಟ್ರ್ಯಾಕ್ಟ್ರ ಎತ್ತಿಕಟ್ಯವುರೆ."

"ಆಟೊತ್ತಿಂದ ಮಡೆಸಾನ ಮಡೆಸಾನ ಅಂತಿಯಲ್ಲ, ಅದೇನ್ಲ?"

"ಓಹೋ ನಿನಿಗೆ ರೋಗಿಷ್ಟರ ಸ್ಟೋರಿಯ ಡೀಟ್ಹೈಲಾಗಿ ಹೇಳಬೇಕಲ್ಲವಾ? ಈಗ ಸುಬ್ರಹ್ಮಣ್ಯ ದೇವಸ್ಥಾನ ಗೊತ್ತೇನಕ್ಕ ನಿನಿಗೆ?"

"ಊ ಗೊತ್ತು ಹೇಳ್ಳ. ನಮ್ಮ ದೇವರಾಜಣ್ಣ ಟೂರಿಗೆ ಕರಕಂಡೋದಾಗ ನೋಡಿಬಂದೆ."

"ಆ ಸುಬ್ರಮಣ್ಯ ದೇವುಸ್ಥಾನದಲ್ಲಿ ನಮ್ಮ ಹೆಗ್ಗೋಡು ಸುಬ್ಬಣ್ಣನ ಮಗನ ಸಮಂಧಿಕರೇ ಜಾಸ್ತಿಯವರೆ. ಅವುರೇನು ಪ್ಲಾನು ಮಾಡ್ಯವುರೆ ಅಂದ್ರೆ ಈ ಶೂದ್ರ ಜನಾಂಗದ ಕಾಯಲ ಕಸಾಲೆ ವಾಸಿಯಾಗಬೇಕಾದರೆ ಬ್ರಾಂಬ್ರು ಊಟ ಮಾಡಿರೊ ಎಂಜಲೆಲೆ ಮೇಲೆ ಮೂರುಳ್ಳು ಉಳ್ಳಬೇಕು ಅಂತ ಹೇಳಿಬುಟ್ಟವುರೆ. ಈ ಶೂದ್ರ ಬಡ್ಡೆತ್ತವು ತಗೊ ಎಂಜಲೆಲೆ ಮೇಲೆ ಉಳ್ಳಿದ್ದೂ ಉಳ್ಳಿದ್ದೆಯಾ" ಎಂದು ವಾಟಿಸ್ಸೆ ನಗಾಡಿದ.

"ಥೂ ಸುಮ್ಮನಿರ್ಲ, ವಾಂತಿ ಬರಂಗಾಯ್ತದೆ. ಇಂತ ಸುಳ್ಳನೂ ಹೇಳ್ಯರೆ?"

"ಗಾಡ್ ಪ್ರಾಮಿಸ್ ಕಣಕ್ಕ ಕಳದೊರ್ಷ ಹಿಂಗೇ ನ್ಯಡದಿತ್ತು, ಸುಬ್ಬಣ್ಣನ ಮಗ ಜನಗಳ ಭಕ್ತಿಗೆ ಗೌರವ ಕೊಡಬೇಕು ಅಂತ ಹೇಳಿಬುಟ್ಟು ಬುದ್ದಿ ಜೀವಿಗಳ ಕೈಲಿ ಉಗಿಸಿಗಂಡಿದ್ದ ಅದ ಓದಿಬುಟ್ಟು ಕುಕ್ಕೆ ಸುಬ್ರಮಣ್ಯದ ಬ್ರಾಂಬ್ರು ಚಾಲೆಂಜಾಗಿ ತಗಂಡು, ಮುಂದಿನ ವರ್ಷ ಇನ್ನೂ ಜೋರಾಗಿ ಮಾಡನ ಅಂತ ಹೇಳಿ ಈ ಸತಿ ಗ್ರ್ಯಾಂಡಾಗಿ ಮಾಡಿದ್ರು ಕಣಕ್ಕ."

"ಥೂ ಎಂಜಲೆಲೆ ಮುಂಡೆ ಮಕ್ಕಳು, ಅವುರ ಸುದ್ದಿ ಯಾಕ್ ಮಾತಾಡಿ ಬುಡ್ಲ."

"ಬುಡಂಗಿಲ್ಲ ಕಣಕ್ಕ. ಈ ತರ ಮಾಡಬ್ಯಾಡಿ, ಇದು ಮೂಢನಂಬಿಕೆ ಅಂತ ಬುದ್ದಿ ಹೇಳಕ್ಕೆ ಹೋಗಿದ್ದ ದಲಿತ ಲೀಡ್ರಿಗೆ ಸರಿಯಾಗಿ ವಡದು ಕಳಿಸ್ಯವುರೆ. ಇದಕ್ಕೇನೇಳ್ತಿ?"

"ಅಲ್ಲಾ ಕಂಡ್ಯ ಉಂಡಿರೊ ಎಂಜಲೆಲೆ ಮ್ಯಾಲೆ ಉಳ್ಳತ್ತರೆ ಅಂದ್ರೆ ಅವುರು ಹಂದಿ ನಾಯಿಗಿಂತ ಕಡಿಯಾದ ಜನಕಂಡ್ಯ" ಎಂದ ಕಾಳಮಾವ.

"ನಿಜ ದ್ವಡಪ್ಪ, ನಾಯಿಗಳು ಎಂಜಲೆಲೆ ತಿಂದು ವಂಟೋಯ್ತವೆ. ಆದ್ರೆ ಹಂದಿಗಳು ತಿಂದು ಬಾಳೆದೆಲೆ ಈಚಲ ಚಾಪೆ ತರ ತಣ್ಣಗಿರದ್ರಿಂದ ಅದರ ಮ್ಯಾಲೆ ಬಿದ್ದು ವಳ್ಳಾಡಿ ಅಲ್ಲೇ ಮನಿಕತ್ತವೆ. ಆದ್ರಿಂದ ಇಂಥ ಎಂಜಲ್ಯಲೆ ಆಚರಣೆ ಜನ ನಾಯಿ, ಹಂದಿಗಿಂತ ಕಡಿಯಾದೋರು ಅನ್ನೋ ನಮ್ಮ ದ್ವಡಪ್ಪನ ಮಾತ ನಾವು ಅನುಮೋದಿಸಿದ್ದಿವಿ. ಅಷ್ಟೆ ಅಲ್ಲ ದ್ವಡಪ್ಪ ಇಂಥ ಆಚರಣೆ ಸಮರ್ಥಿಸಿಕೊಂಡಿರೊ ರಾಜಕಾರಣಿಗಳು ಮತ್ತು ಜಗದ್ಗುರುಗಳು ನಾಯಿ ಮತ್ತು ಹಂದಿಗೆ ಜಮಾವ್ಪೋಟಾದೋರು."



"ಇದೇನೊ ವಾಟಿಸ್ಸೆ, ನೀನು ಬುದ್ದಿ ಇರೊ ಮನುಸ್ರ ಬುದ್ಧಿ ಇಲ್ದೆಯಿರೊ ನಾಯಿ, ಹಂದಿಗೆ ಓಲಿಕೆ ಮಾಡಿ ಅವುಕೆ ಅವುಮಾನ ಮಾಡ್ತಿಯಲ್ಲೊ. ಅವು ಎಲ್ಲಾರ ತಾವು ತಿಂದ ಎಂಜಲ ಮ್ಯಾಲೆ ಉಳ್ಳಾಡಿದ ನೋಡಿದ್ದಿಯಾ? ಇನ್ನೂ ಇನ್ನೊಬ್ರು ತಿಂದ ಎಂಜಲ ಮ್ಯಾಲೆ ಉಳ್ಳಿದ್ದಂತೂ ಯಾರೂ ನೋಡಿಲ್ಲ. ಕುಕ್ಕೆ ಸುಬ್ರದ ಜನ ಈ ಲ್ಯವಲ್ಲಿಗೆ ಇಳುದು ಅದುನ್ನೆ ಸಮರ್ಥಿಸಿಗತ್ತರೆ ಅಂದ್ರೆ ಅವುರ ನಾಯಿ, ಹಂದಿಗೂ ಓಲುಸಬಾರ್ದು ಕಣೊ."

"ಸಾರಿ ಉಗ್ರಿ, ಹಂದಿ, ನಾಯಿಗೆ ಕುಕ್ಕೆ ಸುಬ್ರದ ಜನಗಳ ಓಲಿಸಿದ್ದೆ, ಸಾರಿ ಕೇಳ್ತಿನಿ. ಆದ್ರೆ ಅವುನ್ಯಾರೊ ಲಂಕೇಶ್ ಪತ್ರಿಕೆಯವನೊಬ್ಬ ಮಡೆಸ್ನಾನದ ಪರವಾಗೇ ಮಾತಾಡ್ತಿದ್ದನಂತೆ. ನೀನೇನಾರ ಕೇಳಿಸಿಗಂಡ್ಯ?"


"ಅದ್ಕೆ ಅಲವೇನೊ ಅವುನ್ನ ಗೌರಿ ಲಂಕೇಶ್ ಉಗುದು ಓಡಿಸಿದ್ದು. ಎಂಜಲು ತಿನ್ನೋ ಜನ ಎಂಜಲೆಲೆ ಪರವಾಗಿ ಮಾತಾಡ್ದೆ ಇನ್ಯಂಗೆ ಮಾತಾಡ್ಯರೂ."

✤

ಮುಪ್ಪು ಮತ್ತು ವಿಮರ್ಶೆ

ಇಲ್ಲಿಯ ತೊಂದರೆ ಏನೆಂದರೆ ನಾನು ನಾಲ್ಕೈದು ವಿಷಯಗಳನ್ನು ಮತ್ತೆಮತ್ತೆ ಯೋಚಿಸಲು, ಟೀಕೆ-ಟಿಪ್ಪಣಿಯಲ್ಲಿ ಬರೆಯಲು ಇಟ್ಟುಕೊಂಡಿರುತ್ತೇನೆ. ಅವನ್ನೆಲ್ಲ ಸಣ್ಣಪುಟ್ಟದಾಗಿ ಬರೆದುಬಿಟ್ಟರೆ ಯಾವುದೋ ಒಂದು ವಾರ ಬರೆಯಲು ಏನೂ ಇಲ್ಲದೆ ದಿಗ್ಭ್ರಮೆಗೊಳ್ಳಬಹುದು ಎಂಬ ಆತಂಕ ನನ್ನದು. ನಾವೆಲ್ಲ ಮುದಿವಯಸ್ಸಿಗಾಗಿ ಸ್ವಲ್ಪ ಹಣ ಇಟ್ಟುಕೊಂಡಂತೆ ಅದು. ಹೀಗೆ ಈ ಹಿಂದಿನ ವಾಕ್ಯ ಬರೆದೊಡನೆ ಇಲ್ಲಿ ಸಂಕ್ಷಿಪ್ತವಾಗಿ ಹೇಳಬೇಕಾದ ಒಂದೆರಡು ವಿಷಯಗಳು ಹೊಳೆಯುತ್ತಿವೆ. ಕೆಲವರು ಓದುಗರು ಅಸೂಯೆ, ಸಣ್ಣತನದಿಂದ 'ನಿಮಗೆ ಕಾಯಿಲೆಯಾಗಿ ಸಾವಿನ ಭಯ ಹೆಚ್ಚಾಗಿದೆ, ಅದಕ್ಕೇ ಹೀಗೆ ಬರೆಯುತ್ತೀರಿ' ಅನ್ನುತ್ತಾರೆ. ಕಾಯಿಲೆ ಮತ್ತು ಕ್ರಿಯಾಶೀಲತೆ ಇವೆರಡಕ್ಕಿರುವ ಸಂಬಂಧ ಅವರಿಗೆ ಗೊತ್ತಿಲ್ಲ, ಸಾವು ಮತ್ತು ಬರಹದ ಸಂಬಂಧ ಕೂಡ. ಈ ನಾಲ್ಕರ ಜೊತೆಯಲ್ಲಿ ನಾವು ಹಾಸ್ಯಾಸ್ಪದ ಮೂರ್ಖರಂತೆ ವರ್ತಿಸಬಹುದು ಅಥವಾ ಬದುಕು ಹಿಡಿಯಲ್ಲಿ ಸಿಕ್ಕಂತೆ ಅರ್ಥಪೂರ್ಣವಾಗಿ ಬರೆಯಬಹುದು. ಮನುಷ್ಯನ ಗೋಳು ಯಾವ ತರಹ ಇರುತ್ತದೆಂದು ಹಬ್ಬಕ್ಕೆ ತಂದ 'ಹರಕೆಯ ಕುರಿ'ಯ ಬಗ್ಗೆ ಹೇಳುತ್ತಾ ಸೂಚಿಸಿದೆ. ಬಸವಣ್ಣನಿಗೆ ಸಾವಿನ ಬಗ್ಗೆ ಆತಂಕವಿತ್ತೆ? ಇದು ಸಂದಿಗ್ಧವಾಗಿದ್ದರೂ ಚೆಂದ, ಸ್ಪಷ್ಟವಾದರೂ ಚೆಂದ. ಆದರೆ ಸ್ಪಷ್ಟತೆ ಎಲ್ಲದನ್ನು ಸೀಮಿತಗೊಳಿಸುತ್ತದೆ. ವಿಮರ್ಶೆಯ ಬಗ್ಗೆ ಬರೆಯುತ್ತಾ ಇನ್ನೊಬ್ಬರು ನನಗೆ ಕಾಗದ ಬರೆದು ವಿಮರ್ಶೆಯ ಬಗ್ಗೆ ಹೊಚ್ಚಹೊಸ ಥಿಯರಿಗಳ ಬಗ್ಗೆ ಕೊರೆದರು. ನಾನು ಈ structural criticism, post-structural ಇತ್ಯಾದಿಯ ಬಗ್ಗೆ ಕೇಳಿದ್ದೇನೆ. ನಾವೆಲ್ಲ ಬೆಳೆದದ್ದೇ practical criticism, ಸಮಾಜವಾದ, ಗಾಂಧೀವಾದ: ಈ ಮೂರಕ್ಕೆ ಪ್ರತಿಸ್ಪಂದಿಸುತ್ತಾ. ಈಗ ಎಲ್ಲವನ್ನು ಸೋಸಿ ವಿಮರ್ಶೆಯ ಬಗ್ಗೆ ಇಷ್ಟು ಹೇಳಬಲ್ಲೆ; ನಮಗೆ ಯಾವುದು, ಯಾಕೆ ಒಳ್ಳೆಯ ಸಾಹಿತ್ಯಕೃತಿ ಎಂದು ಗೊತ್ತಾಗಬೇಕು; ಹಾಗಾದರೆ ಮಾತ್ರ ನಾವು ವಿಮರ್ಶಕರು. ಆದರೆ ಕವನವೊಂದರಲ್ಲಿ ಇರಬಹುದಾದ ಅರ್ಥ, ಚೆಂದ, ಸೂಚನೆ, ಬೆಳವಣಿಗೆ ಇಷ್ಟಕ್ಕೆ ನಾವು ಮಿತಗೊಳಿಸಿಕೊಳ್ಳಬೇಕು. ಒಂದು ಕವನವನ್ನು ನಾವು ಓದಿದಾಗ ಅದು ನಾವು ತಿಳಿದುಕೊಂಡ ಎಷ್ಟು ಅರ್ಥಕ್ಕೆ ತಾಯಿ ಎಂಬುದನ್ನು ಗೊತ್ತಿರಬೇಕು, ಅದು ಹೊರಲಾಗದಷ್ಟು ಭಾರ ಹಾಕಬಾರದು. ಊಹೆ ಇಲ್ಲಿ ಅಪಾಯದ್ದು, ಅದು ಆದರ್ಶ. ಆದರೆ ವಿಮರ್ಶೆ ಕೂಡ ಸಾಹಿತ್ಯ ಕೃತಿ. ಒಂದು ಬಗೆಯ ವಿಮರ್ಶೆ ಎದುರಿನ ಕೃತಿಗೆ ಹೊಂದಿಕೊಂಡು ಮುಗಿದರೆ ಇನ್ನೊಂದು ಬಗೆಯ ವಿಮರ್ಶಾತ್ಮಕ ಧ್ಯಾನ ತಾನೇ ಒಂದು ಅರ್ಥಪೂರ್ಣ ಕೃತಿಯಾಗಿ ಬೆಳೆಯಬಹುದು. ರ್‍ಯಾಂಬೋ, ಬೋದಿಲೇರ್ ಮುಂತಾದ ಕವಿಗಳ ಬದುಕೇ ಒಂದು ಚಿಂತನೆಯ ಕಟ್ಟಡಕ್ಕೆ ಕಾರಣವಾಗಬಹುದು. ಸಾರ್ತರ್ ತನ್ನ ಗೆಳೆಯನಾಗಿದ್ದ ಕಳ್ಳ-ಕಲಾವಿದ ಜೇನೆ ಬಗ್ಗೆ ಒಂದು ಪುಸ್ತಕ ರಚಿಸಿದ. ನೀಟ್ಷೆಯ ಅನ್ನಿಸಿಕೆ ಕುರಿತು ಪುಸ್ತಕ ಬರೆದವರುಂಟು.






ನನ್ನ ಈಗಿನ ಆದರ್ಶ ವಿಮರ್ಶೆಯ ಭಾಷೆ, ಶೈಲಿ, ವಸ್ತುವನ್ನು ಕುರಿತದ್ದು; ಭಾಷೆಯೇ ಒಂದು ಮೌಲ್ಯ. ಇದನ್ನು ಆಮೇಲೆ ವಿವರಿಸುತ್ತೇನೆ. ಈಗ ನಾನು ಆಗಲೇ ಹೇಳಿದ ಮುದಿ ವಯಸ್ಸಿಗೆಂದು ಕೂಡಿಟ್ಟ ಹಣದ ಬಗ್ಗೆ ಹೇಳಬೇಕೆನ್ನಿಸಿದೆ. ಮುಪ್ಪಿನಲ್ಲಿ ನಮ್ಮ ಸಂಬಂಧಿಗಳಿಗೆ ತೊಂದರೆ ಕೊಡುವುದಕ್ಕಿಂತ ನಮ್ಮಿಂದ ನೇಮಕರಾದವರನ್ನು ಅವಲಂಬಿಸುವುದು ವಾಸಿ. ಸಂಬಂಧಿಗಳಿಗೆ ತಮ್ಮವೇ ಅನೇಕ ತೊಂದರೆಗಳಿರುತ್ತವೆ-ನೇಮಕಗೊಂಡ ವೈದ್ಯ, ನರ್ಸ್, ಸಹಾಯಕರಿಗೆ ಇದು ವೃತ್ತಿ, ವೃತ್ತಿಯಿಂದ ಧನ್ಯತೆ ಪಡೆಯುವುದೂ ಒಳ್ಳೆಯದು. ನೇಮಕಗೊಂಡವರಲ್ಲಿ ವೃತ್ತಿವಂತರ ವಸ್ತುನಿಷ್ಠ ನಿರ್ಲಿಪ್ತತೆ ಇರುತ್ತವೆ. ಇದಕ್ಕಾಗಿ ಹಣಬೇಕು. ಹಣಕ್ಕಿಂತ ಹೆಚ್ಚಾಗಿ ರೋಗಿಯ ವ್ಯಕ್ತಿತ್ವ. ನೆರೂಡಾಗೆ ಸಾವಿರಾರು ಸ್ನೇಹಿತರು, ಸಂಬಂಧಿಗಳು ಇದ್ದರು; ಅವನಿಗೆ ಅವನ ಸೇವಕರು ಪೂರ್ತಿ ನಿಷ್ಠರಾಗಿದ್ದರು. ತನ್ನ ಕುಟುಂಬದವರನ್ನು ಬಲ್ಲ, ಅವರ ಗೋಳುಗಳನ್ನು ಅರಿತ ಪ್ರತಿಯೊಬ್ಬನೂ ಹೀಗೆ ಚಿಂತಿಸುತ್ತಾನೆ ಎಂದು ನನಗೆ ಅನ್ನಿಸುತ್ತದೆ.

-ಮಾರ್ಚ್ 6, 1996

ಬ್ರಾಹ್ಮಣರಿಗೆ ಬ್ರಾಹ್ಮಣರ ಎಂಜಲ ಎಲೆ ನಾಟುವುದಿಲ್ಲ!



ಎಚ್.ಎಲ್. ಕೇಶವಮೂರ್ತಿ

ಅಣಕ

ಒಂದು ಕಾಲ ಇತ್ತು. ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ಬ್ರಿಟಿಷರನ್ನೇ ನೇಮಿಸಲಾಗುತ್ತಿತ್ತು. ಅವರಲ್ಲಿ ಕೆಲವರಿಗೆ ಭಾರತೀಯ ಸಂಪ್ರದಾಯ, ಪರಂಪರೆಗಳ ಪರಿಚಯ ಅಷ್ಟಾಗಿ ಇರುತ್ತಿರಲಿಲ್ಲ. ಅಂತಹವರೊಬ್ಬರು ಅಧಿಕಾರದಲ್ಲಿದ್ದ ಸಮಯ ದೀಪಾವಳಿ ಹಬ್ಬ ಬಂದಿತಂತೆ. ಹಾಸ್ಟೆಲಿನ ವಿದ್ಯಾರ್ಥಿಗಳು 'ಎಣ್ಣೆಸ್ನಾನ' ಮಾಡಲು ಬಯಸಿದರಂತೆ. ನಿಲಯಪಾಲಕರು ಸಮ್ಮತಿಸಲಿಲ್ಲವಂತೆ. ನಿರಾಶರಾದ ಕೆಲವರು ನೇರವಾಗಿ ಪ್ರಾಂಶುಪಾಲರನ್ನೇ ಕಂಡರಂತೆ. 'ಎಣ್ಣೆಸ್ನಾನ' ಮಾಡುವ ತಮ್ಮ ಬಯಕೆಯನ್ನು ತಿಳಿಸಿದರಂತೆ. ಇದನ್ನು ಕೇಳುತ್ತಿದ್ದಂತೆಯೇ ಪ್ರಾಂಶುಪಾಲರು ಹೌಹಾರಿದರಂತೆ. "ಹಬ್ಬದ ದಿನ ಸ್ನಾನ ಮಾಡಬೇಕು ನಿಜ, ನೀರಿನಲ್ಲಿ ಸ್ನಾನ ಮಾಡದೆ ಎಣ್ಣೆಯಲ್ಲಿ ಸ್ನಾನ ಮಾಡುವ ಭಾರತೀಯರ ಮೌಢ್ಯಕ್ಕೆ ಮರುಗಿದರಂತೆ. ಸ್ನಾನಕ್ಕೆ ಎಣ್ಣೆ ಬಳಸುವ ದುಂದುಗಾರಿಕೆಗೆ ಅನುಮತಿ ನೀಡಲು ಸಾಧ್ಯವೇ ಇಲ್ಲ ಎಂದು ಖಡಾಖಂಡಿತವಾಗಿ ಹೇಳಿದರಂತೆ. ಪಾಪ ಪ್ರಾಂಶುಪಾಲರು 'ಎಣ್ಣೆಸ್ನಾನ' ಎಂದರೆ ಎಣ್ಣೆಯನ್ನೇ ನೀರು ಬಳಸುವಂತೆ ಬಳಸುತ್ತಾರೆಂದು ಭಾವಿಸಿದ್ದರಂತೆ! ಅದು ಹಾಗಲ್ಲ ಹೀಗೆ ಎಂದು ವಿವರಿಸಿದ ನಂತರ ಪ್ರಾಂಶುಪಾಲರಿಗೆ ಜ್ಞಾನೋದಯವಾಯಿತಂತೆ. 'ಹಾಗಾ... ಹಾಗಾದರೆ ವರ್ಷಕ್ಕೆ ಒಂದೇ ಸಲ ಏಕೆ? ಪ್ರತಿ ತಿಂಗಳು ಮಾಡಿ' ಎಂದು ಅನುಮತಿ ನೀಡಿದರಂತೆ.

ಮಡೆಸ್ನಾನ ಕುರಿತು ನಡೆಯುತ್ತಿರುವ ಬಿರುಸಿನ ವಾಗ್ವಾದ ನೋಡಿ ಇದು ನೆನಪಾಯಿತು. ತುಳು ಭಾಷೆಯಲ್ಲಿ ಮಡೆ ಎಂದರೆ ಎಂಜಲು ಅನ್ನೋ ಅರ್ಥ ಇದೆಯಂತೆ. ಎಂಜಲು ಸ್ನಾನ ಎಂದೇ ಕರೆಯಬಹುದಾಗಿತ್ತು. ಇತರೆ ಪ್ರದೇಶಗಳ ಜನರಿಗೆ ಹಾಗಂತ ಹೇಳಿದರೆ ಮನಸ್ಸಿಗೆ ಮುಜುಗರ ಆಗುತ್ತೆ ಅಲ್ಲವಾ? ಮಡೆಸ್ನಾನ ಎಂದರೆ ಒಂದು ತರಹ ಘನತೆ ಇದ್ದ ಹಾಗೆ ಅನ್ನಿಸುತ್ತೆ. ದಕ್ಷಿಣ ಕನ್ನಡದ ಜನ ಎಷ್ಟೇ ಆಗಲಿ ಬುದ್ಧಿವಂತರು. ಹಾಗೆ ಪ್ರಚಾರಕ್ಕೆ ತಂದಿರಬಹುದು. ಇರಲಿ. ಎಂಜಲು ಸ್ನಾನ ಅಂದರೆ ಹಂಡೆಗಟ್ಟಲೇ ಎಂಜಲು ತುಂಬಿ ಅದನ್ನು ಸ್ನಾನಕ್ಕೆ ಬಳಸಲಾಗುತ್ತದೆ ಎಂದು 'ಎಣ್ಣೆಸ್ನಾನ'ದ ಪ್ರಾಂಶುಪಾಲರ ತರಹ ಕೆಲವರು ಗ್ರಹಿಸಿರುವಂತಿದೆ.

ಬ್ರಾಹ್ಮಣರು ಸುಗ್ರಾಸ ಭೋಜನ ಮಾಡಿ ಸಂತೃಪ್ತಿಗೊಂಡ ನಂತರ ಅವರು ಉಂಡ ಎಲೆಯ ಮೇಲೆ ಕೆಳಜಾತಿಯವರು ಉರುಳುವುದಂತೆ ಅಷ್ಟೆ. ಅದರಲ್ಲಿ ಔಷಧೀಯ ಗುಣ ಇದೆಯಂತೆ. ಒಮ್ಮೆ ಹಾಗೆ ಎಂಜಲು ಸ್ನಾನ ಮಾಡಿದರೆ ಚರ್ಮರೋಗಗಳೆಲ್ಲ ಮಾಯ ಆಗುತ್ತವಂತೆ! ಅಷ್ಟುಮಾತ್ರ ಅಲ್ಲ, ಇಷ್ಟಾರ್ಥಗಳೆಲ್ಲ ಸಿದ್ಧಿಸುತ್ತವೆಯಂತೆ! ಸಂತಾನ ಭಾಗ್ಯ ಇಲ್ಲದವರು ಒಮ್ಮೆ ಎಂಜಲು ಸ್ನಾನ ಮಾಡಿದರೆ ಮುಗಿಯಿತು. ಮಕ್ಕಳ ಭಾಗ್ಯ ಲಭಿಸುವುದಂತೆ! ಎಂಜಲು ಸ್ನಾನದ ಫಲಾನುಭವಿಗಳು ಭಕ್ತಿಯಿಂದ ಸ್ಮರಿಸುತ್ತಾರೆ!



ಯಾರ ಎಂಜಲು ಸೇವೆ ಮಾಡಿದರೂ ಇಷ್ಟಾರ್ಥ ಸಿದ್ದಿಸುತ್ತಾ ಎಂದು ಕೆಲವು ಸಂಶಯ ಪಿಶಾಚಿಗಳು ಪ್ರಶ್ನಿಸಬಹುದು. ಇದು ಹೇಗೆ ತಾನೆ ಸಾಧ್ಯ? ಬ್ರಾಹ್ಮಣರ ಎಂಜಲಿನಲ್ಲಿ ಔಷಧೀಯ ಗುಣ ಇರುವಂತೆ ಇತರೆ ಜಾತಿಯವರ ಎಂಜಲಿನಲ್ಲಿ ಇರುವುದಿಲ್ಲ! ಶೂದ್ರರ ಎಂಜಲ ಎಲೆಗಳು ಹೆಚ್ಚೆಂದರೆ ಪ್ರಾಣಿಗಳಿಗೆ ಆಹಾರವಾಗಬಹುದೆ ಪರಂತು ರೋಗಕ್ಕೆ ಮದ್ದಾಗಲಾರದು! ಆದುದರಿಂದಲೇ ಬ್ರಾಹ್ಮಣರು ಚರ್ಮರೋಗದಿಂದ ನರಳುತ್ತಿದ್ದು ಶೂದ್ರರ ಎಂಜಲ ಎಲೆಯ ಮೇಲೆ ಉರುಳಿದರೂ ಯಾವ ಪ್ರಯೋಜನವೂ ಆಗಲಾರದು. ವೃಥಾ ಶ್ರಮ ಏಕೆಂದು ಅವರು ಅದರ ಮೇಲೆ ಉರುಳು ಸೇವೆ ಮಾಡುವುದಿಲ್ಲ. ಅವರ ಜಾತಿಯವರ ಎಂಜಲ ಎಲೆಯ ಮೇಲೆಯೇ ಈ ರೀತಿ ಮಾಡಬಹುದಲ್ಲಾ ಎಂದರೆ....

ಬ್ರಾಹ್ಮಣರಿಗೆ ಬ್ರಾಹ್ಮಣರ ಎಂಜಲ ಎಲೆ ನಾಟುವುದಿಲ್ಲ!

ಸಾರ್ವಜನಿಕ ದೇವಸ್ಥಾನಗಳಲ್ಲಿ ಬ್ರಾಹ್ಮಣರಿಗೆ ಬೇರೆ ಪಂಕ್ತಿಯಲ್ಲಿ ಭೋಜನ ವ್ಯವಸ್ಥೆ ಮಾಡಲಾಗುತ್ತಿರುವುದಕ್ಕೆ ಕಾರಣ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಎಂಜಲ ಎಲೆಯ ಮೇಲೆ ಉರುಳು ಸೇವೆ ಮಾಡಿ ಶೂದ್ರರು ಇಷ್ಟಾರ್ಥ ಸಿದ್ದಿಸಿಕೊಳ್ಳಲಿ ಎಂಬುದೇ ಇದರ ಆಶಯವಾಗಿದೆ. ಶೂದ್ರರೂ ಅವರ ಪಂಕ್ತಿಯಲ್ಲೇ ಕುಳಿತರೆ ಔಷಧೀಯ ಗುಣವೇ ಇರುವುದಿಲ್ಲ. ಇದನ್ನು ತಿಳಿದಿರುವ ಪ್ರಾಜ್ಞರು, ವಿದ್ಯಾವಿಭೂಷಣರು, ಸಮಾಜ ಸುಧಾರಕರೂ ಆದ ಬ್ರಾಹ್ಮಣರೂ ಇದನ್ನು ವಿರೋಧಿಸುವುದಿಲ್ಲ! ಇತರರು ಹೇಳುವಂತೆ ಇದು ಪಂಕ್ತಿ ಭೇದ ಅಲ್ಲ, ಔಷಧಿ ಸೇವೆಗಾಗಿ ಇದೆಲ್ಲ!

ವಿವಿಧ ಜಾತಿಯ, ವಿವಿಧ ಧರ್ಮಗಳ ಅನುಯಾಯಿಗಳಿಗೂ ಬೇರೆ ಬೇರೆ ಶಕ್ತಿ ಇರುತ್ತದೆ ಎಂಬುದು ಸತ್ಯ! ಇದು ನನ್ನ ಅನುಭವದಿಂದ ಕಂಡುಕೊಂಡದ್ದು. ನಾನು ಬಾಲ್ಯದಲ್ಲಿದ್ದಾಗ ಸಾಬರಿಗೂ ನಮಗೂ ಹತ್ತಿದ ಜಗಳ ಹರಿಯುತ್ತಿರಲಿಲ್ಲ. ದನ ತಿನ್ನುವ ಸುವರ್‌ಗಳು, ಒಳ್ಳೆ ಗೂಳಿ ತರಹ ಬೆಳೆದು ನಿಂತಿದ್ರೊ. ಒಂಟಿಯಾಗಿ ಸಿಕ್ಕಿದಾಗ ಅವರಿಗೆ ಸರಿಯಾದ ಬುದ್ಧಿ ಕಲಿಸಬೇಕು ಎಂದು ಮಾತನಾಡಿಕೊಳ್ಳುತ್ತಿದ್ದೆವು. ಆದರೇನು ಮಾಡುತ್ತೀರಿ ಒಂಟಿಯಾಗಿ ಸಿಗುವುದೇನೋ ಸಿಗುತ್ತಿದ್ದರು. ಹಿಡಿದು ತದುಕಾನ ಅಂದರೆ ಆ ಸುವರ್‌ಗಳು ತಮ್ಮ ಅಂಗೈಗೆ ಎಂಜಲು ಉಗಿದುಕೊಂಡು ಮುಟ್ಟ ನಮ್ಮ ಧರ್ಮಾನೆ ಕೆಡಿಸೋಕೆ ಬರ್ತಿದ್ದರು! ಎಲ್ಲಿ ಧರ್ಮ ಹಾಳಾಗುತ್ತೋ ಅನ್ನುವ ಭಯಕ್ಕೆ ವೀರಯೋಧರಂತೆ ಜಗಳಕ್ಕೆ ಕಾಲುಕೆರೆದು ನಿಂತಿದ್ದ ನಾವೆಲ್ಲ ಜಗಳ ರಂಗದಿಂದ ಪಲಾಯನ ಮಾಡಬೇಕಾಗುತ್ತಿತ್ತು. ಇದು ಎಂಜಲ ಮಹಿಮೆ!

ಇದನ್ನೆಲ್ಲ ಅರಿತಿದ್ದ ನಮ್ಮ ಪೂರ್ವಿಕರು ನೂರಾರು ವರ್ಷಗಳಿಂದ ಎಂಜಲುಸ್ನಾನ ನಡೆಸಿಕೊಂಡು ಬಂದಿದ್ದಾರೆ. ಭಕ್ತರ ನಂಬಿಕೆ, ಭಾವನೆಗಳಿಗೆ ಯಾವತ್ತೂ ಸರ್ಕಾರ ಸ್ಪಂದಿಸಬೇಕಾದ್ದು ನ್ಯಾಯವೇ ಸರಿ. ಮುಜರಾಯಿ ಇಲಾಖೆಯ ಮಂತ್ರಿವರ್ಯರು ಇದನ್ನು ಅರಿತಿದ್ದಾರೆ. ಮಂತ್ರಿವರ್ಯರಾದ ವಿ.ಎಸ್.ಆಚಾರ್ಯ ಅವರು ವೈದ್ಯರು. ನಕಲಿ ವೈದ್ಯರಲ್ಲ, ಅಸಲಿ ವೈದ್ಯರು! ಮಡೆಸ್ನಾನವನ್ನು ನಿಷೇಧಿಸಿ ಭಕ್ತರ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಲು ಸಾಧ್ಯ ಇಲ್ಲ ಎಂದು ಸಾರಿದ್ದಾರೆ. ಎಂಬಿಬಿಎಸ್ ಮಾಡಿರೋ ವೈದ್ಯರಾದ ಮಂತ್ರಿಗಳೇ ಎಂಜಲಸ್ನಾನದಿಂದ ರೋಗ ನಿವಾರಣೆ ಆಗುತ್ತೆ ಎಂದಿರುವಾಗ ಬೇರಿನ್ನೇನೂ ಬೇಕಾಗಿಲ್ಲ! ಎಂಜಲು ರೋಗಾಣುಗಳ ವಾಹಕ ಎಂಬುದು ಸುಳ್ಳು! ಆಸ್ಪತ್ರೆ ಮುಚ್ಚಿ ಬ್ರಾಹ್ಮಣರ ಭೋಜನ ಶಾಲೆ ತೆರೀರಿ ಹಾಗಾದರೆ ಎಂದು ಕಿರಿಚಾಡುತ್ತಾರಲ್ಲ... ಹಾಗೇನೆ ಮಾಡುತ್ತಾರೆ ತಿಳಿಯಿರಿ, ಸಂಪೂರ್ಣ ಅಧಿಕಾರ ಅವರ ಕೈಗೆ ಬಂದರೆ!

ಇನ್ನು ಪೇಜಾವರ ಶ್ರೀಗಳು ಅಂದರೆ ಪಾಂಡಿತ್ಯ, ವಿದ್ವತ್ತು ಇಂತಹವುಗಳಲ್ಲೆಲ್ಲ ಗೌರಿಶಂಕರ ಶಿಖರ ಇದ್ದ ಹಾಗೆ. ಎಂಜಲುಸ್ನಾನ ಅಸಹ್ಯ, ಅಪಮಾನ ಎಂದೆಲ್ಲ ಕೆಲವರಿಗೆ ಅನ್ನಿಸುತ್ತಿದೆಯಂತೆ. ಅವರ ಮಾತುಗಳಿಗೆ ಬೆಲೆ ನೀಡಬೇಕಿಲ್ಲ, ಅವರಾರೂ ಶ್ರೀಗಳಂತೆ ಶಿಖರ ಅಲ್ಲ. ಈ ಶಿಖರದ ಮಾತು ಮುಖ್ಯ, ಅದಕ್ಕೆ ಇದು ಏನೂ ಅನ್ನಿಸುತ್ತಿಲ್ಲವಂತೆ! ಎಂಜಲು ಸ್ನಾನ ಕುರಿತಂತೆ ದಿವ್ಯ ಮೌನವನ್ನು ಅವರು ವಹಿಸಿದ್ದರೂ, ಇದು ಜಾಣಮೌನ ಎಂದು ಟೀಕಿಸಿ ಅವರನ್ನು ವಿವಾದಕ್ಕೆ ಎಳೆದಿರುವುದು ಶ್ರೀಗಳಿಗೆ ತುಂಬ ನೋವನ್ನುಂಟು ಮಾಡಿದೆಯಂತೆ. ಆ ಸೋಲಿನಲ್ಲೂ ಮಡೆಸ್ನಾನ ಕುರಿತಂತೆ ಸ್ಪಷ್ಟ ಅಭಿಪ್ರಾಯ ತಿಳಿಸಿದ್ದಾರೆ. ಅದನ್ನು ನಿಷೇಧಿಸುವುದರಿಂದ ನಮ್ಮ ಧರ್ಮಕ್ಕಾಗಲಿ, ಜನತೆಗಾಗಲಿ ದೊಡ್ಡ ಹಾನಿಯೇನೂ ಇಲ್ಲ ಎಂದು ಧಾರ್ಮಿಕ ನೆಲೆಯಲ್ಲಿ ಉಸುರಿದ್ದಾರೆ. ದೊಡ್ಡ ಹಾನಿ ಇಲ್ಲದಿದ್ದರೂ ಸಣ್ಣ ಹಾನಿಯಂತೂ ಇದ್ದೇ ಇರುತ್ತದೆ ಎಂದು ಸೂಚ್ಯವಾಗಿ ತಿಳಿಸಿದ್ದಾರೆ! ಅದಕ್ಕೇ ಆ ಪಂಡಿತೋತ್ತಮರು ನಿಷೇಧಿಸುವ ಮುನ್ನ ಭಕ್ತರ ಅಭಿಪ್ರಾಯ ಕೇಳಬೇಕೆಂದು ಧರ್ಮಾಜ್ಞೆ ನೀಡಿದ್ದಾರೆ!

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮೊದಲ ದಿನದ ಮಡೆಸ್ನಾನವನ್ನು ನೇರಪ್ರಸಾರ ಮಾಡಲು ಯಾವುದೋ ಚಾನೆಲ್ ಪ್ರಯತ್ನಿಸಿತಂತೆ. ಮಾಡಲಿ. ಅದಕ್ಕೆ ಅಂಜಿಕೆ ಇಲ್ಲ. ಟಿವಿ ಚಾನೆಲ್‌ಗಳ ಚಾಳಿ ತಿಳಿದಿರುವಂತಹದ್ದೆ. ಟಿಆರ್‌ಪಿ ಆಸೆಗೆ

ಇದು ಎಂಜಲಲ್ಲಿ ಹೊರಳುತ್ತಾ ವಿಚಾರವಂತಿಕೆಯನ್ನು ತುಳಿಯುವುದಲ್ಲವೇ?


ಕರಾವಳಿ ಮತ್ತೆ ಕೊಳಕಿನ ಕಾರಣಕ್ಕಾಗಿಯೇ ಸುದ್ದಿಯಾಗುತ್ತಿದೆ. ಅರ್ಜಿ ಹಾಕದೇನೆ ಇಲ್ಲಿ ಹುಟ್ಟಬೇಕಾಗಿ ಬಂದುದರಿಂದ, ಇಲ್ಲಿಯೇ ಬದುಕಬೇಕಾದ ಅನಿವಾರ್ಯತೆಗೀಡಾದ ಯಾರಿಗಾದರೂ ಒಂದಿನಿತು ಮನಸ್ಸು ನೋಯುವ ಸಂಗತಿಯಿದು. ಯಾಕೆಂದರೆ ಎಲ್ಲಾ ಪ್ರತಿಕ್ರಿಯೆಗಳೂ ಆರಂಭವಾಗುವುದು 'ಬುದ್ಧಿವಂತರ ಜಿಲ್ಲೆ'ಯ ಉಲ್ಲೇಖದ ಜೊತೆಗೇ. ಈ ಬುದ್ಧಿವಂತರ ಜಿಲ್ಲೆಯಲ್ಲಿ ಬುದ್ಧಿ ಇದ್ದವರು ಕಟ್ಟಿಟ್ಟು ಹೋದ ಅತ್ಯಂತ ಆರೋಗ್ಯಕರವೂ, ಆತಂಕಕಾರಿಯಲ್ಲದ ನೂರಾರು ಆಚರಣೆಗಳಿವೆ. ಅಂತಹದ್ದರಲ್ಲಿ ಇಲ್ಲಿಯ ಜನ ಎಂಜಲು ಎಲೆಯ ಮೇಲೆ ಉರುಳುವುದು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ಪ್ರತಿಭಟಿಸುತ್ತಿದ್ದಾರೆ ಮತ್ತು ಅಧಿಕಾರದಲ್ಲಿರುವ ಮಂದಿ ಇದನ್ನು ನಂಬಿಕೆ ಪ್ರಶ್ನೆಯಾಗಿ ಮುಂದು ಮಾಡುತ್ತಿದ್ದಾರೆ.

'ನಂಬಿಕೊಂಡು' ಬಂದ ನೂರಾರು ಸಂಗತಿಗಳು ಇವತ್ತು ಹಾಗೆಯೇ ಮುನ್ನಡೆದು ಬರುತ್ತಿಲ್ಲ. ಅವುಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹಾಗಿರುವಾಗ ಈ ಎಂಜಲು ಎಲೆಯ ಮೇಲೆ ಹೊರಳುವುದನ್ನು 'ಗತಕಾಲದ ನಂಬಿಕೆ'ಯ ನೆಲೆಯಲ್ಲಿ ಸಮರ್ಥಿಸಲಾಗುತ್ತಿರುವುದು ಆಶ್ಚರ್ಯ ಹುಟ್ಟಿಸುತ್ತಿದೆ.

ಗತಕಾಲದ ನಂಬಿಕೆಯ ಮಾದರಿಯೊಂದನ್ನು ಇಲ್ಲಿ ನೆನಪಿಸುವುದು ಸಮಂಜಸವೆನಿಸುತ್ತದೆ. ನಮ್ಮೂರುಗಳಲ್ಲಿ ಗೃಹಪ್ರವೇಶಗಳು ಯಾವ ಹೋಮ-ಹವನ ಇಲ್ಲದೆ, ರಾತ್ರಿ ಹೊತ್ತು ಕೊರಗರ ಅಬ್ಬರದ ಡೋಲು ಸದ್ದಿನೊಂದಿಗೆ, ದೀಪದ ಕೋಲು ಉರಿಸಿಕೊಂಡು ಹಾನದಕೊಟ್ಟೆಯ ಜೊತೆಗೆ ಮನೆಗೆ ಮೂರು ಸುತ್ತು ಬಂದು ಯಾವುದೋ ಮೂರು ಹಾದಿ ಕೂಡಿದ ಜಾಗದಲ್ಲಿ ಬಾಳೆಯ ದಿಂಡು, ಕುಂಬಳಕಾಯಿ ಜೊತೆಗೆ ಒಂದು ಕೋಳಿಯನ್ನು ಬಲಿಕೊಡುವ ಮೂಲಕ ಸರಳವಾಗಿ ಮುಗಿಯುತ್ತಿದ್ದವು. ಇದಕ್ಕೂ ನೂರಾರು ವರ್ಷಗಳ ಇತಿಹಾಸ ಇದ್ದಿರಲೇಬೇಕು. ಈ ಆಚರಣೆ ಹೋಮ ಹವನದ ಮೂಲಕ ಗೃಹಪ್ರವೇಶವಾಗಿ ಬದಲಾದ ಮೇಲೂ ಈ ಬುನಾದಿಯ ಆಚರಣೆ ಒಂದಿಷ್ಟು ಕಾಲ ನಡೆದು ಬಂದಿತ್ತು. ಹೀಗೆ ಕೊಯ್ದ ಕೋಳಿ ಮನೆ ಕಟ್ಟಿದ ಬಡಗಿಗಳಿಗೋ, ಡೋಲು ಹೊಡೆದ ಕೊರಗರಿಗೋ ಸಂದಾಯವಾಗುತ್ತಿತ್ತು. ಆದರೆ ಈ ಹಿಂಸೆ ಸಲ್ಲದು ಎಂದು ಹವನ ಮಾಡುವವರು ಕೋಳಿಯ ಬದಲಿಗೆ ಕುಂಬಳ ಕಾಯಿಯನ್ನು ಕಡಿದು ಅದರ ಮೇಲೆ ಒಂದಿಷ್ಟು ಕುಂಕುಮ ಹಾಕಿದರೆ ಸಾಕು ಎಂದು ಅಪ್ಪಣೆಕೊಡಿಸಿದ್ದರಿಂದ ಬಹುಮಟ್ಟಿಗೆ ಈ ಕೋಳಿ ಬಲಿ ನಿಂತಿದೆ.

ಆದರೆ ವಿಚಿತ್ರ ಎಂದರೆ ಕೆಲಸ ಮಾಡಿದ ಕೂಲಿಗೋ, ಒಬ್ಬ ದಲಿತನಿಗೋ ದಕ್ಕುತ್ತಿದ್ದ ಒಂದು ಮಾಂಸಾಹಾರದ ಅವಕಾಶವನ್ನು ಅನಾಗರಿಕ ಹಿಂಸೆಯ ಹೆಸರಲ್ಲಿ ತಡೆದವರೇ ಇಂದು ಎಂಜಲು ಎಲೆಯ ಮೇಲೆ ಹೊರಳಾಡುವುದನ್ನು 'ಪರಂಪರೆ', 'ನಂಬಿಕೆ' ಎಂದು ಸಮರ್ಥಿಸುತ್ತಿದ್ದಾರೆ. ಇನ್ನೂ ನೋವಿನ ಸಂಗತಿಯೆಂದರೆ ದಲಿತ, ಶೂದ್ರರ ಬಾಯಲ್ಲಿ ಹೋಮ ಹವನಾದಿಗಳನ್ನು ಮಾಡುವಾಗ 'ಅಸ್ಮಾಕಂ' ಮತ್ತು 'ಮಮ' ಎಂಬೆರಡು ಶಬ್ದಗಳನ್ನು ಹೇಳಿಸಿದಷ್ಟೇ ಸರಳವಾಗಿ ಈ ಎಂಜಲೆಲೆಯ ಉರುಳಾಟವನ್ನು ಸಮರ್ಥಿಸುವ ಮಾತು ಹೇಳಿಸುತ್ತಿದ್ದಾರೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಹಿಂಸೆಯ ಹೆಸರಲ್ಲಿ ನಮ್ಮದೇ ಆಹಾರ ಕಸಿದವರು, ಪರಂಪರೆಯ ಹೆಸರಲ್ಲಿ ಪ್ರೋತ್ಸಾಹಿಸುತ್ತಿರುವ ಎಂಜಲು ಎಲೆಯ ಮೇಲಿನ ಹೊರಳಾಟವನ್ನು ಸಾಮಾಜಿಕ ಸೂಕ್ಷ್ಮತೆಯಿರುವವರು ಇನ್ನೊಂದು ಆಯಾಮದಲ್ಲಿ ನೋಡಲೇಬೇಕು. ಅದೇನೆಂದರೆ ಎಂಜಲು ಶ್ರೇಷ್ಠವಾದವರ ಮಲವೂ ಶ್ರೇಷ್ಠ ಆಗುತ್ತದೆ ಅಲ್ಲವೆ? ಎಂಜಲೆಲೆಯ ಮೇಲೆ ಹೊರಳಿದವರ ತಲೆಯ ಮೇಲೆ ಮಲ ಹೊರಿಸಲು ಹೆಚ್ಚು ಕಷ್ಟ ಆಗಲಾರದಲ್ಲವೆ? ಎಂಜಲೆಲೆಯ ಮೇಲೆ ಹೊರಳಿಯೇ ತೀರುತ್ತೇವೆ ಎನ್ನುವವರ ತಲೆಮಾರುಗಳ ಚರಿತ್ರೆಯನ್ನು ನೋಡಿದರೆ ಅವರು ಹೀಗೆ ಹೇಳಲು ಸಾಧ್ಯವೇ?



ಶ್ರೇಷ್ಠತೆಯನ್ನು ಆಚರಣಾತ್ಮಕವಾಗಿ ಸ್ಥಾಪಿಸಿ ವ್ಯಾವಹಾರಿಕವಾಗಿ ಶತಮಾನಗಳವರೆಗೆ ಚಪ್ಪಲಿ ಹೊರುವವರನ್ನು ನಿರ್ಮಾಣ ಮಾಡಿಕೊಳ್ಳುವ ಈ ಹುನ್ನಾರಕ್ಕೂ ಶತಮಾನಗಳ ಚರಿತ್ರೆ ಇದೆ. ಧಾರ್ಮಿಕತೆಯ ಹೆಸರಲ್ಲಿ ಈ 'ವೀರ' ಅಭಿಮಾನವನ್ನು ತೋರುವ ಆತ್ಮಾಹುತಿಗಾರ ದಲಿತರು, ಶೂದ್ರರು ತಮ್ಮ ಮುಂದಿನ ಪೀಳಿಗೆಗೆ ಏನು ದ್ರೋಹ ಎಸಗುತ್ತಿದ್ದೇವೆ ಎಂಬ ಅರಿವು ಉಳಿಸಿಕೊಂಡರೆ ಸಾಕು.

ಈಗ ಕರಾವಳಿ ಇನ್ನೂ ಒಂದು ಸುದ್ದಿಗಾಗಿ ಚಾಲ್ತಿಯಲ್ಲಿದೆ. ಅದು ಎಚ್.ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯನ್ನು ಪಠ್ಯ ಮಾಡಿದ್ದನ್ನು ಆಕ್ಷೇಪಿಸಿ. ಸಾಹಿತ್ಯ ಪಠ್ಯವನ್ನು ಜಾತಿ ರಚನೆಯ ಸಮಾಜದಲ್ಲಿ ಹೇಗೆ ಬೇಕಾದರೂ ನಿರಾಕರಿಸಲು ಅವಕಾಶವಿದೆ. ಆದರೆ ಸಾಹಿತ್ಯ ಪಠ್ಯದ ಚರ್ಚೆ ನಡೆಯಬೇಕಾದುದು ಖಂಡಿತಾ ಆ ದಾರಿಯಲ್ಲಿ ಅಲ್ಲ. ಕೃತಿಯೊಂದರ ಆಶಯದ ನೆಲೆಯಲ್ಲಿ ಆಗಬೇಕಾದ ಚಿಂತನೆಯನ್ನು ಬದಿಗೆ ಸರಿಸಿ, ಪದಗಳನ್ನು ಹಿಡಿದು ಜಾತಿನಿಂದನೆಯ ಮಾತನಾಡುತ್ತಿರುವುದು ಖಂಡಿತಾ ಶೋಭೆ ತರುವ ಸಂಗತಿ ಅಲ್ಲ. ಅದೂ ಅಲ್ಲದೆ ಸಾಹಿತ್ಯ ಪಠ್ಯವೊಂದರಲ್ಲಿ ಬಂದ ಮಾತನ್ನು ಎತ್ತಿಕೊಂಡು ಆಕ್ಷೇಪಿಸುತ್ತಿರುವ ಸಮುದಾಯದ ಪ್ರತಿನಿಧಿಗಳೆಂದು ಹೇಳಿಕೊಂಡವರ ಆಕ್ಷೇಪಣಾ ಅರ್ಜಿ ಮತ್ತು ಅವರು ಲೇಖಕಿಗೆ ಕಳುಹಿಸಿದ್ದಾರೆ ಎನ್ನಲಾದ ಲಾಯರ್ ನೋಟಿಸಿನಲ್ಲಿರುವ ಭಾಷಾ ಪ್ರಯೋಗಕ್ಕೆ ಖಂಡಿತಾ ದುಡಿಮೆಗಾರ ಬೆವರಿನ ಸಂಸ್ಕೃತಿಯ ಇಡಿಯ ವಿಶ್ವಕರ್ಮ ಸಮುದಾಯವನ್ನು ದೂಷಿಸಲು ಆಗದು.

ಇದೇ ಸಂದರ್ಭದಲ್ಲಿ ನಡೆಯುತ್ತಿರುವ ಮಡೆಸ್ನಾನದ ಚಳವಳಿಯಲ್ಲಿ ಕಳಾಯಿಸುತ್ತಿರುವ ದಲಿತ ಜಗತ್ತಿನವರೆನ್ನಲಾದ ಮುಗ್ಧರಂತೆಯೇ ಈ ಸಂಘಟನೆಯನ್ನೂ ಯಾರೋ ದಾರಿ ತಪ್ಪಿಸಿರುವ ಸಾಧ್ಯತೆಯೇ ಹೆಚ್ಚು ಎಂಬುದು ಈಗ ಬಹುವಾಗಿ ಪ್ರಸ್ತಾಪಿತವಾಗುತ್ತಿರುವ ಸಂಗತಿ.

ಹೆಣ್ಣುಮಕ್ಕಳ ದೇಹಸಿರಿಯ ಮೇಲೇ ಕ್ಯಾಮರಾ ಕೇಂದ್ರೀಕರಿಸುತ್ತವೆ. ಉರುಳುವಾಗ ಉಡುಪು ಅಸ್ತವ್ಯಸ್ತವಾಗಿರುತ್ತೆ. ಹಾಗಾಗಿ ನೋಡುಗರ ಕಾದರದ ಕಣ್ಣುಗಳಿಗೆ ಹಬ್ಬ ದೊರಕಿದಂತಾಗುತ್ತದೆ. 'ಹೀಗೆ ಚಿತ್ರೀಕರಿಸುವುದು ಸಮ ಅಲ್ಲ' ಎಂದು ಬುದ್ಧಿಮಾತು ಹೇಳಿದರೂ ಕೇಳಲಿಲ್ಲ. ಒದ್ದು ಓಡಿಸಬೇಕಾದುದು ಅನಿವಾರ್ಯವೇ ಆಯಿತು. ಇದನ್ನು ಗೂಂಡಾವರ್ತನೆ ಅನ್ನುವುದು ತರವಲ್ಲ. ಹಾಗೆ ವರ್ತಿಸಿದ್ದರೆ ಅದನ್ನು ನೋಡುತ್ತಾ ನಿಂತಿದ್ದ ಪೊಲೀಸರು ಸುಮ್ಮನೆ ಇರುತ್ತಿದ್ದರಾ!

ಹೇಗೋ ಮೊದಲ ದಿನ ಎಂಜಲಸ್ನಾನ ಮಾಡಿ ಇಷ್ಟಾರ್ಥ ಸಿದ್ಧಿಸಿಕೊಳ್ಳಲು ಭಕ್ತರಿಗೆ ಅನುವುಮಾಡಿಕೊಡಲಾಯಿತು. ಎರಡನೇ ದಿವಸ ಅದ್ಯಾವುದೋ ಹಿಂದುಳಿದವರ್ಗಗಳ ಜಾಗೃತಿವೇದಿಕೆ ಎಂದು ಇದೆಯಂತೆ. ಅದು ಸತ್ಯ ಶೋಧನೆ ಮಾಡುತ್ತಂತೆ. ಮಡೆಸ್ನಾನ ಮಾಡುವುದು ನಿಜ. ರೋಗವಾಸಿಯಾಗುವುದೂ ನಿಜ. ಅದನ್ನ ಭಕ್ತರೇ ಹೇಳುತ್ತಾರೆ. ಸತ್ಯ ಶೋಧನೆ ಮಾಡುವುದು ಎಂತಕ್ಕೆ ಬೇಡ ಮಹಾರಾಯ ಅಂದರೂ ಜಪ್ಪಯ್ಯ ಅನ್ನಲೊಲ್ಲ. ಏನು ಮಾಡುವುದು ಸಮಾ ಹೊಡೆದರೂ ಬುದ್ಧಿ ಬರಬಾರದಾ ಮಹಾರಾಯ....

ಮಡೆಸ್ನಾನಕ್ಕೂ ನಿಷೇಧಕ್ಕೊಳಪಟ್ಟ ಇತರೆ ಸೇವೆಗಳಿಗೂ ತಳುಕು ಹಾಕಲಾಗುತ್ತಿದೆ. ಇದು ಸಲ್ಲದು. ಅಲ್ಲೆಲ್ಲ ಯಾವುದೋ ಒಂದು ವರ್ಗದ ಜನರು ಶೋಷಣೆಗೆ ಗುರಿಯಾಗುತ್ತಿದ್ದರು. ಇದರಲ್ಲಿ ಹಾಗೇನೂ ಆಗುತ್ತಿಲ್ಲ. ಇಲ್ಲಿ ನಡೆಯುತ್ತಿರುವುದು ಕೇವಲ ಉಚಿತ ಔಷಧೋಪಚಾರ ಮಾತ್ರ. ಮಡೆಸ್ನಾನ ನಡೆಯುವುದು ಸುಬ್ರಹ್ಮಣ್ಯ ಸ್ವಾಮಿಯ ಮೇಲಿನ ಭಕ್ತಿಯಿಂದ. ಅವನೇ ರೋಗನಿವಾರಕ. ಆ ಸ್ವಾಮಿಗೆ ರೋಗ ನಿವಾರಿಸಲು ಒಂದು ಮಾರ್ಗದ ಅವಶ್ಯಕತೆ ಕಂಡಿರಬೇಕು. ಬ್ರಾಹ್ಮಣರ ಭೋಜನದಲ್ಲಿ ಕಂಡ. ಎಂಜಲ ಎಲೆಯ ಮೇಲೆ ರೋಗಿಗಳನ್ನು ಉರುಳಿಸಿದ! ಇದು ಬ್ರಾಹ್ಮಣ ಶ್ರೇಷ್ಠತೆಯ ಸೂಚಕ ಖಂಡಿತ ಅಲ್ಲ! ಹಾಗೆ ನೋಡಿದರೆ, ಜಾತಿ ಭೇದದ ಆಪಾದನೆ ಮಾಡಿದರೆ ಆ ಸ್ವಾಮಿಯ ಮೇಲೆ ಮೊಕದ್ದಮೆ ಹೂಡಬೇಕೆ ಪರಂತು ಬ್ರಾಹ್ಮಣರ ಮೇಲೆ ಅಲ್ಲ!

ಒಂದು ತುಂಟಾಟ

ಓರ್ವ ಶೂದ್ರ ಹೆಣ್ಣುಮಗಳು
ಮಡೆಸ್ನಾನ ಮಾಡಿದಳು
ಫಲಿಸಿತೆ ಅವಳ ಇಷ್ಟಾರ್ಥ?
ಫಲಿಸಿತು!
ಫಲನಿಂತಿತು. ಆಕೆ ಗರ್ಭವತಿ ಆದಳು!
ಆದರೆ... ಅವಳಿಗೆ ವಿವಾಹವೇ ಆಗಿರಲಿಲ್ಲ!
ಎಲ್ಲ ಆ ಸ್ವಾಮಿಯ ದಯೆ!
ಜೈ ಸುಬ್ರಹ್ಮಣ್ಯೇಶ್ವರ!


ಸೆನ್ಸಾರ್ ವಿರುದ್ಧ ಮದನ್ ಸುಳ್ಳು ಆರೋಪ?

ಬರೀ ಕಿರಿಕ್ಕುಗಳಿಗೇ ಹೆಸರುವಾಸಿಯಾಗಿರುವ ಮದನ್ ಮಲ್ಲು ಅಲಿಯಾಸ್ ಮದನ್ ಪಟೇಲ್ ಯಾವಾಗ ಯಾರ ವಿರುದ್ಧ ತಿರುಗಿಬೀಳುತ್ತಾರೋ, ಯಾರನ್ನು ಬ್ಲಾಕ್‌ಮೇಲ್ ಮಾಡಲು ಆರಂಭಿಸುತ್ತಾರೋ ಗೊತ್ತಾಗುವುದಿಲ್ಲ. ಅವರೀಗ ಸೆನ್ಸಾರ್ ಅಧಿಕಾರಿ ನಾಗರಾಜ್ ವಿರುದ್ಧ ಬಾಯಿಗೆ ಬಂದ ಆರೋಪಗಳನ್ನು ಮಾಡುವ ಮೂಲಕ ಮತ್ತೊಮ್ಮೆ ಪುಕ್ಕಟೆ ಪ್ರಚಾರವನ್ನು ತನಗೂ ತನ್ನ ಹೊಸ ಚಿತ್ರಕ್ಕೂ ಪಡೆಯುತ್ತಿದ್ದಾರೆ.

"ಸೆನ್ಸಾರ್ ಮಂಡಳಿ ಅಧ್ಯಕ್ಷ ನಾಗರಾಜ ನನ್ನಿಂದ ಲಂಚ ಕೇಳಿದರು. ನನ್ನ 'ಸತ್ಯಾನಂದ' ಚಿತ್ರದ ಎರಡು ಹಾಡುಗಳನ್ನು ಸೆನ್ಸಾರ್ ಮಾಡಿಕೊಡಲು ಐವತ್ತು ಸಾವಿರ ಮತ್ತು ಇಡೀ ಚಿತ್ರವನ್ನು ಸೆನ್ಸಾರ್ ಮಾಡಿ ಸರ್ಟಿಫಿಕೇಟ್ ನೀಡಲು ಐದು ಲಕ್ಷ ರೂಪಾಯಿಗಳ ಮೊತ್ತ ಅಪೇಕ್ಷಿಸಿದರು. ನಾನು ಲಂಚ ನೀಡಲು ನಿರಾಕರಿಸಿದ್ದಕ್ಕೆ ನನಗೆ ನೋಟಿಸ್ ನೀಡಿದ್ದಾರೆ. ಅದರ ಪ್ರತಿಯನ್ನು ನಿತ್ಯಾನಂದನಿಗೂ ರವಾನಿಸಿದ್ದಾರೆ..." ಎಂದು ಮೊನ್ನೆ ಮದನ್ ಪಟೇಲ್ ತುಂಬಿದ ಪತ್ರಿಕಾಗೋಷ್ಠಿಯಲ್ಲಿ ನಾಗರಾಜ್ ವಿರುದ್ಧ ಆರೋಪ ಮಾಡಿದರು. ಅಷ್ಟೇ ಅಲ್ಲ, "ಈಗಾಗಲೇ ಕೋರ್ಟ್‌ನಿಂದಲೂ ನನಗೆ ಅನ್ಯಾಯವಾಗಿದೆ. ಅದಕ್ಕೇ ನ್ಯಾಯಪೀಠವನ್ನು ಬದಲು ಮಾಡಿಕೊಡುವಂತೆ ನಾನು ಅಹವಾಲು ಸಲ್ಲಿಸಿದ್ದೇನೆ" ಎಂದು ನ್ಯಾಯಾಲಯದ ವಿರುದ್ಧವೂ ಮಲ್ಲು ನುಡಿದರು. ಅವರ ಮಾತುಗಳು ನ್ಯಾಯಾಂಗನಿಂದನೆಯಾಗುತ್ತದೆ ಎನ್ನುವುದಂತೂ ಮೇಲ್ನೋಟಕ್ಕೇ ಗೊತ್ತಾಗುತ್ತದೆ.

'ಸತ್ಯಾನಂದ' ಎಂಬ ಚಿತ್ರವನ್ನು ಮದನ್ ಪಟೇಲ್ ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಿಸಿ, ನಿರ್ದೇಶಿಸಿದ್ದಾರೆ. ತೆಲುಗು ಮತ್ತು ತಮಿಳು ಚಿತ್ರಗಳ ಮಟ್ಟಿಗೆ ಅವರಿಗೆ ಯಾವುದೇ ರೀತಿಯ ಸೆನ್ಸಾರ್ ಸಮಸ್ಯೆ ಎದುರಾಗಿಲ್ಲವಂತೆ. ಆದರೆ ಕರ್ನಾಟಕದಲ್ಲಿ ಮಾತ್ರ ಅವರಿಗೆ ತೀವ್ರ ರೀತಿಯ ಪ್ರತಿರೋಧ ವ್ಯಕ್ತವಾಗಿದೆಯಂತೆ. ಈಗಾಗಲೇ ಕನ್ನಡದ 'ಸತ್ಯಾನಂದ'ನ ವಿರುದ್ಧ ಕೋರ್ಟ್ ತಡೆಯಾಜ್ಞೆ ನೀಡಿದೆ.

"ಸೆನ್ಸಾರ್ ಮಂಡಳಿಯವರು ನಿತ್ಯಾನಂದನ ಕೃಪೆಗೆ ಒಳಗಾಗಿ, ಆತನಿಂದಲೂ ಹಣ ಪಡೆದು ನನ್ನ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಸುತ್ತಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯವರು ಹಾಗೂ ನಿರ್ಮಾಪಕರ ಸಂಘದ ಅಧ್ಯಕ್ಷರಾದ ಮುನಿರತ್ನ ನಾಯ್ಡು ಕೂಡಾ ನನಗೆ ಈ ವಿಚಾರದಲ್ಲಿ ಸಹಕರಿಸುತ್ತಿಲ್ಲ. ಬದಲಿಗೆ ನನ್ನ ವಿರುದ್ಧವೇ ತಮ್ಮ ನಿಲುವುಗಳನ್ನು ತೋರುತ್ತಿದ್ದಾರೆ. ಛೇಂಬರ್‌ನವರು ಈ ವಿಚಾರದಲ್ಲಿ ಕೇವಲ ಪೋಸ್ಟ್ ಆಫೀಸ್‌ನವರಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಈಗಾಗಲೇ ಸಾ.ರಾ ಗೋವಿಂದು ಅವರು ಇಂಗ್ಲಿಷ್‌ನಲ್ಲಿ ಪತ್ರವೊಂದನ್ನು ಬರೆದು ನನ್ನ ಆರೋಪಗಳನ್ನು ಬೇಸ್‌ಲೆಸ್ ಎಂದಿದ್ದಾರೆ. ಸ್ವತಃ ಸಾರಾ ಗೋವಿಂದುಗೆ ಆ ಇಂಗ್ಲಿಷ್ ಪತ್ರವನ್ನು ಓದಲು ಬರುತ್ತದೋ ಇಲ್ಲವೋ ಆದರೆ ಸೆನ್ಸಾರ್ ಮುಖ್ಯಸ್ಥ ನಾಗರಾಜ್ ಅವರೇ ಪತ್ರವನ್ನು ಸಿದ್ಧಪಡಿಸಿ ಗೋವಿಂದು ಅವರ ಮೂಲಕ ನನ್ನ ಕೈ ತಲುಪಿಸಿದ್ದಾರೆ..." ಎಂದೆಲ್ಲ ಹಿಂದೂ ಮುಂದೂ ನೋಡದೆ ಮದನ್ ಮಲ್ಲು ಆರೋಪಿಸಿದ್ದಾರೆ.



ಮದನ್ ವಿರುದ್ಧ ಮಾನನಷ್ಟ ಮೊಕದ್ದಮೆ

ಮದಲ್ ಮಲ್ಲು ಆರೋಪಗಳನ್ನು ನಾಗರಾಜ್ ಸಾರಾಸಗಟಾಗಿ ತಳ್ಳಿಹಾಕುತ್ತಾರೆ. "ಸೆನ್ಸಾರ್ ಮಂಡಳಿ ಮುಖ್ಯಸ್ಥನಾಗಿ ನಾನು ಕಳೆದ ಎರಡು ವರ್ಷಗಳಿಂದ 400ಕ್ಕೂ ಹೆಚ್ಚು ಸಿನಿಮಾಗಳಿಗೆ ಪ್ರಮಾಣ ಪತ್ರ ನೀಡಿದ್ದೇನೆ. ಇದುವರೆಗೆ ನಾನು ಯಾವತ್ತೂ ಬೇಧ ಮಾಡಿದ್ದೇನೆಂದಾಗಲೀ, ಲಂಚಕ್ಕಾಗಿ ಬೇಡಿಕೆ ಒಡ್ಡಿದೇನೆಂದಾಗಲೀ ಯಾರೂ ದೂರಿಲ್ಲ. ಈಗ ಮದನ್ ಪಟೇಲ್ ಮಾಡುತ್ತಿರುವ ಆರೋಪಗಳು ಸಂಪೂರ್ಣ ಸುಳ್ಳು. 'ಸತ್ಯಾನಂದ' ಚಿತ್ರದ ಪ್ರಕರಣ ನ್ಯಾಯಾಲಯ ದಲ್ಲಿರುವುದರಿಂದ, ಚಿತ್ರದ ಪ್ರಚಾರ ಮತ್ತು ಬಿಡುಗಡೆ ಮೇಲೆ ತಡೆಯಾಜ್ಞೆ ಇರುವುದರಿಂದ ನಾನು ಕಾನೂನನ್ನು ಪಾಲಿಸಿದ್ದೇನೆ. ಪ್ರಮಾಣ ಪತ್ರ ನೀಡಬೇಕಾದರೆ, ನ್ಯಾಯಾಲಯದ ಆದೇಶದ ಪ್ರತಿಯನ್ನು ಸಲ್ಲಿಸುವಂತೆ ಮದನ್ ಪಟೇಲ್ ಅವರಿಗೆ ಸೂಚಿಸಿದ್ದೇನೆ. ಅದರ ನಂತರವಷ್ಟೇ ನಾನು ಪ್ರಮಾಣ ಪತ್ರ ನೀಡಬಲ್ಲೆ. ಇಷ್ಟೆಲ್ಲ ಇದ್ದರೂ ನನ್ನ ವಿರುದ್ಧ ಆರೋಪ ಮಾಡಿರುವ ಮದನ್ ಪಟೇಲ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇನೆ" ಎಂದು ನಾಗರಾಜ್ ಹೇಳಿದ್ದಾರೆ. ಅವರು ಮದನ್ ಪಟೇಲ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ರೆಡಿಯಾಗಿದ್ದಾರೆ.

ಹಾಗೆಯೇ ಮದನ್ ಪಟೇಲ್‌ರಿಂದ ನಿಂದನೆಗೆ ಒಳಗಾಗಿರುವ ಸಾರಾ ಗೋವಿಂದು ಅವರು ಕೂಡಾ "ನಾಗರಾಜ್ ಎಂಥವರು ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಅವರು ಸಚ್ಚಾರಿತ್ರ್ಯ ಹೊಂದಿರುವ ಅಧಿಕಾರಿ. ಅವರು ಲಂಚ ಬೇಡಿಕೆ ಇಟ್ಟಿದ್ದಾರೆ ಎಂಬ ಆರೋಪವನ್ನು ಸಾಬೀತು ಮಾಡಿದಲ್ಲಿ ನಾನು ಸಾರ್ವಜನಿಕ ಜೀವನದಿಂದ ನಿವೃತ್ತಿ ಪಡೆಯುತ್ತೇನೆ. ಈ ಸವಾಲಿಗೆ ಪಟೇಲ್ ಸಿದ್ಧರಿದ್ದಾರೆಯೇ? ನಾನು ಆ ವ್ಯಕ್ತಿಗೆ ಎಷ್ಟೆಲ್ಲಾ ಸಹಾಯ ಮಾಡಿದ್ದರೂ ಈಗ ನನ್ನ ವಿರುದ್ಧವೇ ಮಾತಾಡುತ್ತಿದ್ದಾನೆ" ಎಂದು ಗೋವಿಂದು ಅಸಮಾಧಾನಗೊಂಡಿದ್ದಾರೆ.




ಸೀರೆಯುಟ್ಟ ಸಾಯಿ

ಉಪೇಂದ್ರ ನಾಯಕನಾಗಿ ನಟಿಸುತ್ತಿರುವ 'ಕಲ್ಪನಾ' ಚಿತ್ರದಲ್ಲಿ ಸಾಯಿ ಕುಮಾರ್ ಕೂಡಾ ನಟಿಸುತ್ತಿದ್ದಾರೆ. ಅದೂ ಸೀರೆಯುಟ್ಟು!

ಸಾಯಿಕುಮಾರ್ ಈ ಚಿತ್ರದಲ್ಲಿ ಹಿಜಡಾ ಪಾತ್ರದಲ್ಲಿ ನಟಿಸುತ್ತಿದ್ದಾರೆ. ತಮಿಳಿನಲ್ಲಿ ನೃತ್ಯ ನಿರ್ದೇಶಕ ರಾಘವ ಲಾರೆನ್ಸ್ ನಿರ್ದೇಶಿಸಿ-ನಟಿಸಿದ್ದ 'ಕಾಂಚನ' ಕನ್ನಡದಲ್ಲಿ ನಿರ್ಮಾಣವಾಗುತ್ತಿದೆ. ಶಿವಣ್ಣ ನಟಿಸಿದ್ದ 'ಅಸುರ' ಚಿತ್ರದಲ್ಲಿ 'ಪಾಪಿ ಕಲಿಗಾಲ ಕೆಟ್ಹೋಯ್ತಲ್ಲ... ಮಹಾಗಣಪತಿ' ಹಾಡಿಗೆ ಮೈಕೈ ತಿರುಗಿಸಿ ಕುಣಿದಿದ್ದ ಯುವಕನೇ ಈ ರಾಘವ ಲಾರೆನ್ಸ್.

'ಕಾಂಚನ' ಚಿತ್ರದಲ್ಲಿ ನಾಯಕಿಯಾಗಿದ್ದ ಕನ್ನಡದ ಹುಡುಗಿ ಲಕ್ಷ್ಮಿ ರೈಯನ್ನೇ ಇಲ್ಲೂ ಉಳಿಸಿಕೊಳ್ಳಲಾಗಿದೆ. ಆದರೆ ಅಲ್ಲಿ ಹಿಜಡಾ ಆಗಿ ನಟಿಸಿದ್ದ ಶರತ್ ಕುಮಾರ್ ಬದಲಿಗೆ ಇಲ್ಲಿ ಸಾಯಿ ಕುಮಾರ್ ಅವರನ್ನು ಸೆಲೆಕ್ಟ್ ಮಾಡಿಕೊಳ್ಳಲಾಗಿದೆ. ಇತ್ತೀಚೆಗಷ್ಟೇ ತೆರೆಗೆ ಬಂದಿದ್ದ 'ಕಾಂಚನ' ತಮಿಳು-ತೆಲುಗಿನಲ್ಲಿ ಸೂಪರ್ ಹಿಟ್ ಆಗಿದೆ. ಮಂಗಳಮುಖಿ ದೆವ್ವದ ಪಾತ್ರದಲ್ಲಿ ಶರತ್ ಕುಮಾರ್ ನಟನೆಯಂತೂ ಭಾರೀ ಪ್ರಶಂಸೆ ಪಡೆದಿದೆ. ಆ ಪಾತ್ರವನ್ನು ಸಾಯಿ ಕುಮಾರ್ ಕೂಡಾ ಸಮರ್ಥವಾಗಿ ನಿಭಾಯಿಸಲಿದ್ದಾರೆ ಅನ್ನೋದರಲ್ಲಿ ನೋ ಡೌಟ್.

ರಾಮ್ ನಾರಾಯಣ್ ನಿರ್ದೇಶಿಸಲಿರುವ ಈ ಚಿತ್ರ ಡಿಸೆಂಬರ್ 14ರಂದು ಆರಂಭಗೊಳ್ಳುತ್ತಿದೆ. ಈ ನಡುವೆ 'ಕಾಂಚನ' ಚಿತ್ರ ಬಾಲಿವುಡ್‌ನಲ್ಲೂ ಸದ್ದು ಮಾಡುತ್ತಿದೆ. ಆರಂಭದಲ್ಲಿ ಸಲ್ಮಾನ್ ಖಾನ್ ನಾಯಕರಾಗಲಿದ್ದಾರೆ ಎಂದು ಹೇಳಲಾಗಿದ್ದರೂ ಆ ಜಾಗಕ್ಕೀಗ ಶಾರೂಖ್ ಖಾನ್ ಬಂದಿದ್ದಾರೆ. ಶರತ್ ಕುಮಾರ್ ಪಾತ್ರ ಸಂಜಯ್ ದತ್ ಮಡಿಲಿಗೆ ಬಿದ್ದಿದೆ. ಸಹರಾ ಒನ್ ಮೋಶನ್ ಪಿಕ್ಚರ್ಸ್ ಎಂಬ ದೊಡ್ಡ ಬ್ಯಾನರ್ ಈ ಚಿತ್ರವನ್ನು ಹಿಂದಿಯಲ್ಲಿ ನಿರ್ಮಿಸುತ್ತಿದೆ. ಹಿಂದಿಯಲ್ಲಿ ಸ್ವತಃ ರಾಘವ ಲಾರೆನ್ಸ್ ನಿರ್ದೇಶನ ಮಾಡುವ ಸಾಧ್ಯತೆಗಳಿವೆ.



ಕರಾವಳಿಯ ಸ್ಥಳೀಯ ಆವರಣದಲ್ಲಿ ಗಾಂಧೀತನ ಉಂಟುಮಾಡಿದ ಎಚ್ಚರ, ಎದುರಾದ ಸೋಲು-ಗೆಲುವುಗಳನ್ನು ಒಂದು ಪ್ರಾದೇಶಿಕ ಸಂಸ್ಕೃತಿಯ ಆವರಣದಲ್ಲಿ ಪ್ರತಿನಿಧಿಸುವ ಕೃತಿಯಾಗಿ, ಅದರ ಸಾಹಿತ್ಯಿಕ ಹಿರಿಮೆಗಾಗಿ ಹೆಮ್ಮೆಪಡಬೇಕಾದ ಕರಾವಳಿಯ ಜನ ಅದರ ಬಹಿಷ್ಕಾರಕ್ಕಾಗಿ ಹನ್ನೆರಡು ವರ್ಷಗಳ ತರುವಾಯ ಹೋರಾಟಕ್ಕೆ ನಿಲ್ಲುತ್ತಾರೆ ಎಂದರೆ ವಿಷಾದವೇ ಸರಿ. ಕರಾವಳಿಯಲ್ಲಿ ವಿಶ್ವಕರ್ಮರನ್ನೂ ಒಳಗೊಂಡ ಹಾಗೆ ಬಹುತೇಕ ಬ್ರಾಹ್ಮಣೇತರ ಜಾತಿಗಳು ಜನಿವಾರಧಾರಣೆ ಮಾಡುತ್ತಾ ಬಂದಿದ್ದಾರೆ. ಆದರೆ ಅವರ ಜನಿವಾರದಲ್ಲಿರುವುದು ಜೀವಂತ ದೇಹಗಳಿಂದ ತೀಡಿಹೊರಬಂದ ಬೆವರಿನ ಗಂಧವೇ ಹೊರತು ಪರಿಮಳ ಸೂಸುವ ಪ್ರಸಾಧನ ಗಂಧವಲ್ಲ. ಅವರ ಆಚಾರ ವಿಚಾರಗಳಲ್ಲಿಯೂ ಇರುವುದು ಈ ಬೆವರಿನ ಗಂಧವೇ. ಇದರಲ್ಲಿ ಒಂದು ಹೆಚ್ಚುಗಾರಿಕೆಯೂ ಇದೆ. ಅದೇನೆಂದರೆ ಈ ಜನಿವಾರಕ್ಕೆ ಜೀವಂತ ದುಡಿಮೆಗಾರನ ಸಂಸರ್ಗವೂ ಇರುವುದು. ಅದು ಕಡಿದ ಇಲ್ಲವೇ ಸತ್ತ ಮರದ ತುಂಡನ್ನು ತೇದಿ ತೆಗೆದ ಕಡತಂದ ಪರಿಮಳವಲ್ಲ. ಹೀಗೆ ಸ್ವಂತದೇಹದ ಪರಿಮಳವನ್ನು ಏಕಾಗ್ರಸ್ಥಿತಿಯಿಂದ ಕೊಂಚ ಉಸಿರಿಗೆ ಹಿಡಿದುಕೊಂಡು ನೋಡಿದರೆ ಖಂಡಿತಾ ಈ ಕಾದಂಬರಿಯನ್ನು ಆಕ್ಷೇಪಿಸಲು ನಮಗೆ ಹೆಚ್ಚು ಅವಕಾಶಗಳೇ ಇಲ್ಲವಾಗುತ್ತದೆ.

ಆಚಾರ್ಯ ಪ್ರಾಚಾರ್ಯರ ಮೈಯಲ್ಲಿರುವ ಗಂಧ ಸತ್ತ ಮರವನ್ನು ತೇದಿ ತೆಗೆದದ್ದು. ಆದರೆ ಜೀವಂತ ಬೆವರನ್ನು ಉತ್ಪಾದಿಸಿಕೊಂಡು ಬಂದ ನಮಗೆ ಎಚ್ಚರ ಇರಬೇಕಲ್ಲವೇ? ಈ ಎಚ್ಚರವನ್ನು ಕಳೆದುಕೊಳ್ಳುತ್ತಿರುವುದರಿಂದಲೇ ನಾವು ಎಂಜಲಿನ ಪರವಾಗಿ, ಪ್ರಗತಿಪರ ಆಶಯದ ಸಾಹಿತ್ಯ ಪಠ್ಯದ ವಿರುದ್ಧವಾಗಿ ನಿಲ್ಲುತ್ತಿದ್ದೇವೆ. ಎಸೆಯಬೇಕಾದುದರ ಮೇಲೆ ಉರುಳುತ್ತೇವೆ. ಒಪ್ಪಿಕೊಳ್ಳಬೇಕಾದುದನ್ನು ತುಳಿದು ನಾಶಮಾಡುತ್ತೇವೆ ಎಂದು ಅನ್ನಿಸುವುದಿಲ್ಲವೆ?

- ಜಯಪ್ರಕಾಶ್ ಶೆಟ್ಟಿ, ಹೆಚ್, ಕುಂದಾಪುರ

ನಿನ್ನೆ ಚಂದನ ವಾಹಿನಿಯಲ್ಲಿ ಪ್ರಸಾರವಾದ ಸಂದರ್ಶನದಲ್ಲಿ 78ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಸಿ.ಪಿ.ಕೆ. ಇವತ್ತಿನ ರಾಜಕಾರಣ ಬಕಶ್ಯನ್ನು ಹಾಳಾಗಿದೆ ಎಂದರು. ಈ ಹೇಳಿಕೆಯನ್ನು ಸಾಹಿತಿಗಳು ಗಂಭೀರವಾಗಿ ಪರಿಗಣಿಸಬೇಕು. ಈ ಹಿಂದೆ ಮಲಯಾಳಮ್ ಸಿನಿಮಾ ಅಂದರೆ ಅಶ್ಲೀಲವೆನ್ನುವಂತಹ ಕಾಲವೊಂದಿತ್ತು. ಆಗ ಅಲ್ಲಿನ ಸಾಹಿತಿಗಳು ಚಿತ್ರರಂಗಕ್ಕೆ ಧುಮುಕಿದರು. ಪರಿಣಾಮವಾಗಿ ಇವತ್ತು ಇತರೆ ಭಾಷೆಗಳ ಸಿನಿಮಾ ಪ್ರಪಂಚ ಮಲಯಾಳಮ್ ಭಾಷೆಯ ಸಿನಿಮಾಗಳನ್ನು ರಿಮೇಕ್ ಮಾಡುತ್ತಿರುವುದು ಇತಿಹಾಸ. ಇದು ಸಾಧ್ಯವಾಗಿದ್ದು ಕೇವಲ 15 ವರ್ಷಗಳಲ್ಲಿ.

ಇದೇ ರೀತಿ ಈಗ ಕರ್ನಾಟಕದ ಸಾಹಿತಿಗಳು - ಅದರಲ್ಲೂ ಯುವಕ/ಯುವತಿಯರು - ರಾಜಕಾರಣಕ್ಕೆ ನುಗ್ಗಬೇಕು. ಈ ಹಿಂದೆ ಇದನ್ನು ಪಿ.ಲಂಕೇಶರು ಪ್ರಗತಿರಂಗದ ಮೂಲಕ ಪ್ರಯತ್ನಿಸಿದ್ದರು. ಆಗ ಕಾಲ ಪಕ್ವವಾಗಿರಲಿಲ್ಲ. ಈಗ ಸಕಾಲ. ಈ ಕುರಿತು 78ನೇ ಸಾಹಿತ್ಯ ಸಮ್ಮೇಳದಲ್ಲಿ ಚರ್ಚೆ ನಡೆಯಲೆಂದು ನಮ್ಮಂಥವರ ಆಶಯ.

- ವಿಜಯ ಅಮೃತರಾಜ್, ರಾಜ್ಯಾಧ್ಯಕ್ಷರು, ರಾಜ್ಯ ವಕೀಲರ ಸಾಹಿತ್ಯ ಪರಿಷತ್, ಕೊಪ್ಪಳ

ಇತ್ತೀಚೆಗೆ ಪತ್ರಿಕೆ ಚೆನ್ನಾಗಿ ಬರುತ್ತಿದೆ. ವಿಜಯ್ ಮಲ್ಯ ಕುರಿತ ಸಂಪಾದಕೀಯ ಅದ್ಭುತವಾಗಿತ್ತು. ಪಾರ್ವತಮ್ಮ ರಾಜ್‌ಕುಮಾರ್ ಅವರನ್ನು ಕುರಿತು ಪ್ರಕಟಗೊಂಡ ವರದಿ ಮಾನವೀಯತೆಯನ್ನು ಎತ್ತಿ ಹಿಡಿದಿತ್ತು ಮತ್ತು ಗಂಭೀರವಾಗಿ ನಿರೂಪಿತಗೊಂಡಿತ್ತು.

ದಯವಿಟ್ಟು ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ಅಡಿಗರ ಕೋಮುವಾದಿ ಕವನ ಕುರಿತ ಚರ್ಚೆಯನ್ನು ನಿಲ್ಲಿಸಿ. ಅನವಶ್ಯಕವಾಗಿ ಪತ್ರಿಕೆಯ ಪುಟಗಳನ್ನು ಖರ್ಚು ಮಾಡುವುದಕ್ಕಿಂತ ಸಂವಾದವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಪ್ಲೀಸ್.

ತಿರುಕ್ ಸ್ವಾಮಿ, ಈ ಮೇಲ್ ಮೂಲಕ

ಇಂದಿರಾ ಲಂಕೇಶರು ಬರೆಯುತ್ತಿರುವ 'ಹುಳಿಮಾವು ಮತ್ತು ನಾನು' ಅಂಕಣವು ಸ್ತ್ರೀಸಮಾನತಾವಾದಿ ಒಳನೋಟವನ್ನು ಹೊಂದಿದ್ದು ಮನ ಮುಟ್ಟುವಂತೆ ಮೂಡಿಬರುತ್ತಿದೆ.

- ವಿದ್ಯಾಧರ ರೈ, ಕೊಡಗು.

ರಾಜ್ಯದ ಸಚಿವರೂ ಆದ, ಸ್ವತಃ ವೈದ್ಯರೂ ಆದ, ಆದರೀಗ ಪಂಡಿತ ಆಚಾರ್ಯ ಮಹಾಋಷಿ ತರಹ ವರ್ತಿಸುತ್ತಿರುವ ವಿ.ಎಸ್. ಆಚಾರ್ಯ ಅವರು ಸದ್ಯದಲ್ಲೇ ಇಂತಹ ಒಂದು ಜಾಹೀರಾತನ್ನು ಹೊರಡಿಸಿದರೆ ಅಚ್ಚರಿ ಇಲ್ಲ: "ಕರ್ನಾಟಕದ ಎಲ್ಲಾ ಆಸ್ಪತ್ರೆಗಳ ಚರ್ಮ ರೋಗ ವಿಭಾಗಗಳನ್ನು ಶೀಘ್ರದಲ್ಲೇ ಮುಚ್ಚಲಾಗುವುದು. ಚರ್ಮ ರೋಗಕ್ಕೆ ಸುಬ್ರಹ್ಮಣ್ಯದಲ್ಲಿ ತಿಂದು ತೇಗುವ ಬ್ರಾಹ್ಮಣರಿಂದ ಹೊಸ ಔಷಧಿ ಸಿಗುವುದರಿಂದ ಎಂಜಲೆಲೆಯ ಉಳಿಕೆಯನ್ನು ಮುಲಾಮು ಟ್ಯೂಬುಗಳಲ್ಲಿ ಹಾಕಿ ಶೀಘ್ರವೇ ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಗುವುದು."

- ಇಸ್ಮತ್ ಪಜೀರ್, ಮಂಗಳೂರು

ಇಂದಿರಾ ಲಂಕೇಶರ 'ಹುಳಿಮಾವು ಮತ್ತು ನಾನು' ಸರಣಿ ಪ್ರತೀ ವಾರ ಕುತೂಹಲದಿಂದ ಕಾಯುವಂತೆ ಮಾಡಿದೆ. ಖ್ಯಾತ ವ್ಯಕ್ತಿಯೊಬ್ಬರ ಜೀವನ ಸಂಗಾತಿಯಾಗಿ, ಅವರ ಒಳ-ಹೊರಗನ್ನೆಲ್ಲ ಚೆನ್ನಾಗಿ ಬಲ್ಲ ಇಂದಿರಾರವರು ಯಾವುದನ್ನೂ ಮುಚ್ಚಿಡದೇ ಅದೇ ರೀತಿ ಯಾವುದನ್ನೂ ಅತಿರಂಜಿಸದೇ ಇದ್ದದ್ದನ್ನು ಇದ್ದಂತೆ ಬರೆಯುವುದರಲ್ಲಿನ 'ಲಂಕೇಶ್ ತನ' ಗಮನಾರ್ಹವಾದುದು. ಎರಡು ವಾರಗಳ ಹಿಂದಿನ ಕಂತಿನಲ್ಲಿ ಗೌರಿಯವರ ಅಸೌಖ್ಯದ ಕತೆ ಓದಿ ದಿಗಿಲಾಯ್ತು.

'ಕಂಡಹಾಗೆ' ಅಂಕಣದಲ್ಲಿ ಮಡೆಸ್ನಾನ ಮುಂತಾದುವುಗಳ ಕುರಿತ ಗೌರಿ ಅವರ ವಿಶ್ಲೇಷಣೆ ಚೆನ್ನಾಗಿತ್ತು. ದಲಿತ ಸಂಘಟನೆಗಳು ತಮ್ಮ ತಮ್ಮೊಳಗೆ ಕಚ್ಚಾಟದಲ್ಲೇ ಮುಳುಗಿರುವ ಸಂದರ್ಭವನ್ನು ಚೆನ್ನಾಗಿ ಬಳಸಿಕೊಂಡು ಸಂಪ್ರದಾಯವಾದಿಗಳು ದಲಿತರನ್ನೇ ದಲಿತರ ವಿರುದ್ಧ ಛೂ ಬಿಟ್ಟು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ದಲಿತರ ಪರ ಮಾತಾಡಲು ಬಂದವರಿಗೆ ದಲಿತರಿಂದಲೇ ಬಹಿರಂಗವಾಗಿ ಹೊಡೆಯುವ ಮಟ್ಟಿಗೆ ಸಂಪ್ರದಾಯವಾದಿಗಳ ಕೇಕೆ ಅಬ್ಬರಗಳು ಮುಗಿಲು ಮುಟ್ಟುತ್ತಿವೆ. ಮೊನ್ನೆ ಹೊಡೆದಾತನಿಗೆ ಆತನ ಘನ ಕಾರ್ಯಕ್ಕಾಗಿ ಸನ್ಮಾನ ಬೇರೆ ಇತ್ತು. ಈ ಸನ್ಮಾನದ ಹಿಂದಿರುವ ಸನಾತನವಾದಿಗಳ ಹುನ್ನಾರ ಮುಗ್ಧ ದಲಿತರಿಗೆ ಸುಲಭಕ್ಕೆ ಅರ್ಥವಾಗದು.

ಅಂದಹಾಗೆ ಪ್ರವೀಣ್ ಶೆಟ್ಟಿಯವರ ಪತ್ರಗಳು ಇದೀಗ ಕಾಣಿಸುತ್ತಿಲ್ಲ. ದಯವಿಟ್ಟು ಅವರ ಪತ್ರಗಳನ್ನು ನಿಲ್ಲಿಸಬೇಡಿ.

- ರವಿ ಪುತ್ತೂರು, ಬೆಂಗಳೂರು

ವಿಷ್ಣು ಸ್ಮಾರಕದ ದೌರ್ಭಾಗ್ಯ

ವಿಷ್ಣುವರ್ಧನ್ ಸ್ಮಾರಕ ನನೆಗುದಿಗೆ ಬಿದ್ದಿರುವುದು ಒಂದು ದೌರ್ಭಾಗ್ಯ.

ಎರಡು ವರ್ಷಗಳ ಹಿಂದೆ ಡಿಸೆಂಬರ್ ೩೦ ರಂದು ವಿಷ್ಣು ನಿಧನ ಹೊಂದಿದ್ದು ಮೈಸೂರಿನಲ್ಲಿ, ಅದು ಅವರ ಜನ್ಮಸ್ಥಳ. ಆದರೆ ಜನ್ಮಸ್ಥಳದಲ್ಲೇ ಅವರು ನಿಧನ ಹೊಂದಿದ್ದರೂ ಅವರ ಕರ್ಮಸ್ಥಾನವಾದ ಬೆಂಗಳೂರಿಗೆ ಅವರ ಪಾರ್ಥೀವ ಶರೀರವನ್ನು ತರಲಾಗಿತ್ತು. ಅಷ್ಟೇ ಅಲ್ಲ, ಸಾವಿರಾರು ಅಭಿಮಾನಿಗಳ ಸಮ್ಮುಖದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಬೆಂಗಳೂರಿನ ಹೊರವಲಯದಲ್ಲಿರುವ ಚಿತ್ರನಟ ಬಾಲಣ್ಣರವರ ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣುರವರ ಅಂತಿಮ ಕ್ರಿಯೆಗಳನ್ನು ಮಾಡಲಾಗಿತ್ತು. ಅದೇ ಜಾಗದಲ್ಲಿ ವಿಷ್ಣು ಸ್ಮಾರಕವನ್ನು ನಿರ್ಮಿಸುವ ಬಗ್ಗೆ ಸರ್ಕಾರ ಘೋಷಣೆಯನ್ನೂ ಮಾಡಿತ್ತು.

ಆದರೆ ಈಗ ಎಲ್ಲವೂ ತಿರುವುಮುರುವಾಗುತ್ತಿದೆ. ವಿಷ್ಣು ಸ್ಮಾರಕವನ್ನು ಬೆಂಗಳೂರಿನಿಂದ ಮೈಸೂರಿಗೆ ವರ್ಗ ಮಾಡಲು ಸರ್ಕಾರ ಮತ್ತು ವಿಷ್ಣು ಕುಟುಂಬದವರು ನಿರ್ಧರಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅಭಿಮಾನ್ ಸ್ಟುಡಿಯೋದ ಒಡೆತನದ ಬಗ್ಗೆ ಬಾಲಣ್ಣ ಕುಟುಂಬದ ಸದಸ್ಯರ ನಡುವೆ ಇರುವ ಒಡಕು ಮತ್ತು ಮನಸ್ತಾಪ. ಇಂತಹ ಸಮಸ್ಯೆಯನ್ನು ಪರಿಹರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲವೆಂದರೆ ಅದು ನಿಜಕ್ಕೂ ಹಾಸ್ಯಾಸ್ಪದ ವಿಷಯ.



ಈ ನಿರ್ಧಾರ ವಿಷ್ಣುವರ್ಧನ್ ಅವರ ಲಕ್ಷಾಂತರ ಅಭಿಮಾನಿಗಳನ್ನು ಕಕ್ಕಾಬಿಕ್ಕಿಯಾಗಿಸಿದೆ. ಈಗ ಅಭಿಮಾನಿಗಳಲ್ಲಿ ಉದ್ಭವವಾಗಿರುವ ಪ್ರಶ್ನೆಯೆಂದರೆ 'ವಿಷ್ಣು ಸ್ಮಾರಕವನ್ನು ಸರ್ಕಾರ ಮೈಸೂರಿನಲ್ಲಿ ರಚಿಸುತ್ತದೆ ನಿಜ. ಆದರೆ ವಿಷ್ಣು ಅವರ ಸಮಾಧಿಯನ್ನು ಅಭಿಮಾನ್ ಸ್ಟುಡಿಯೋದಿಂದ ಮೈಸೂರಿಗೆ ವರ್ಗಾಯಿಸಲು ಹೇಗೆ ಸಾಧ್ಯ?'

ವಿಷ್ಣು ಸಮಾಧಿಯ ನಿರ್ಮಾಣದ ಬಗ್ಗೆ ಆರಂಭದಲ್ಲಿ ಅತ್ಯಂತ ಆಸಕ್ತಿಯನ್ನು ತೋರಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಚಿವೆ ಶೋಭಾ ಕರಂದ್ಲಾಜೆ ಮತ್ತು ವಿಷ್ಣು ಅವರ ಆಪ್ತಮಿತ್ರ ಅಂಬರೀಷ್ ಇವರೆಲ್ಲಾ ಇದರ ಬಗ್ಗೆ ಈಗ ಮೌನ ವಹಿಸಿರುವುದು ವಿಷ್ಣು ಅಭಿಮಾನಿಗಳಿಗೆ ಅತ್ಯಂತ ನೋವನ್ನು ಉಂಟುಮಾಡಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ದ್ವಾರದಲ್ಲಿ ವಿಷ್ಣುರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವ ವಿಷಯದಲ್ಲೂ ವಿಷ್ಣು ಅಭಿಮಾನಿಗಳಿಗೆ ಮುಖಭಂಗವಾಗಿದೆ.

ಕೇವಲ ಎರಡೇ ಎರಡು ವರ್ಷಗಳ ಅವಧಿಯಲ್ಲಿ ವಿಷ್ಣುವರ್ಧನ್ ಅವರು ಸಿನಿಮಾ ಉದ್ಯಮದವರಿಗೂ, ಅಧಿಕಾರಸ್ಥರಿಗೂ ಬೇಡದವರಾಗಿರುವುದು ಆಶ್ಚರ್ಯದ ಸಂಗತಿ.

– ಶೆಣೈ



ಸಂಸಾರ ಬಿಟ್ಟ ಡರ್ಟಿ ಡೈರೆಕ್ಟರ

ಗಣೇಶ್ ಪತ್ನಿ ಶಿಲ್ಪಾರಿಂದ 'ಡರ್ಟಿ ಡೈರೆಕ್ಟರ್' ಎಂಬ ಬಿರುದು ಪಡೆದಿದ್ದ ಮಹೇಶ್ ತನ್ನ ಪತ್ನಿಗೆ ತಲಾಕ್ ಕೊಟ್ಟು ದೊಡ್ಡ ಸಾಧನೆ ಮಾಡಿದಂತೆ ಬೀಗುತ್ತಿದ್ದಾನೆ

1996ರಲ್ಲಿ ಇನ್ನೂ ಪಿಯುಸಿ ಓದುತ್ತಿದ್ದಾಗಲೇ ಮಹೇಶ್ ಕ್ರಿಶ್ಚಿಯನ್ ಹು ಪ್ರಿಯದರ್ಶಿನಿಯನ್ನು ಪ್ರೀತಿಸಿದ್ದ. ಮನೆಯವರ ವಿರೋಧದ ನಡುವೆಯೂ ಆಕೆ ಮಹೇಶ್ ಮದುವೆಯಾಗಿದ್ದ. ಆಗ ಪ್ರಿಯದರ್ಶಿನಿಯ ತಂದೆ-ತಾಯಿ ಮಹೇಶ್‌ನನ್ನು ಮನೆಯಲ್ಲೇ ಇಟ್ಟುಕೊಂಡು ವರ್ಷಗಟ್ಟಲೆ ಸಾಕಿದ್ದರು. ಓದಿಗೆ ಟಾಟಾ ಹೇಳಿದ ಮ ಟಿ.ನರಸೀಪುರದಲ್ಲಿ ಆಟೋ ಓಡಿಸಿಕೊಂಡಿದ್ದ. ಆದರೆ ಸಿನಿಮಾ ಹುಚ್ಚು ಹತ್ತಿಸಿಕೊ ಮಹೇಶ್ ಬೆಂಗಳೂರಿಗೆ ಬಂದು ಬಾಲಾಜಿ ಟೆಲಿಫಿಲಂಸ್‌ನಲ್ಲಿ ಕೆಲಸಕ್ಕೆ ಸೇರಿದ.



ಮೊದಮೊದಲು ಪ್ರೊಡಕ್ಷನ್ ಬಾಯ್ ಆಗಿದ್ದ ಮಹೇಶ್ ಆಮೇಲೆ ಅಸಿಸ್ಟೆಂಟ್ ಆಗಿ, ನಂತರ 'ಕಾವ್ಯಾಂಜಲಿ' ಧಾರಾವಾಹಿಯ ಮೂಲಕ ಅಸೋಸಿಯೇಟ್ ಕೂಡಾ ಆದ. ನಂತರ 'ಕುಂಕುಮ ಭಾಗ್ಯ' ಎಂಬ ಸೀರಿಯಲ್ಲಿಗೆ ಮಹೇಶ ಎಪಿಸೋಡ್ ಡೈರೆಕ್ಟರ್ ಆಗಿದ್ದೇ ಬಂತು. ಅದರಲ್ಲಿ ಮುಖ್ಯ ಪಾತ್ರ ಮಾಡುತ್ತಿದ್ದ ಹಿರಿಯ ನಟಿ ಪದ್ಮಾವಾಸಂತಿ ಜೊತೆ ಮಹೇಶ ಲವ್ವಲ್ಲಿ ಬಿದ್ದ. ಅದೇ ವೇಳೆಗೆ ಪದ್ಮಾವಾಸಂತಿ ಕೂಡಾ ಮೊದಲ ಪತಿ ಪ್ರಸಾದ್‌ರಿಂದ ದೂರಾಗಿದ್ದರು. ಆರಂಭದಲ್ಲಿ ಪದ್ಮಾವಾಸಂತಿಗೆ ಸಣ್ಣ ಪುಟ್ಟ ಸಹಾಯ ಮಾಡಿಕೊಂಡಿದ್ದ ಮಹೇಶ್ ಕ್ರಮೇಣ ಆಕೆಯೊ ಗಾಢವಾಗಿ ಬೆರೆಯಲು ಶುರು ಮಾಡಿದ. ಇದೆಲ್ಲದರ ಮಧ್ಯೆ ಆತ ಟಿ.ನರಸೀಪುರಕ್ಕೆ ಹೋಗುವುದನ್ನೇ ನಿಲ್ಲಿಸಿದ.



ಕಡೆಗೆ ಪ್ರಿಯದರ್ಶಿನಿಯ ತಂದೆ ಬೆಂಗಳೂರಿನಲ್ಲೇ ಬಾಡಿಗೆ ಮನೆಯೊಂ ಮಾಡಿಕೊಟ್ಟರು. ಆಗಲಾದರೂ ಮಹೇಶ್ ತಮ್ಮ ಮಗಳನ್ನು ಬಾಳಿಸುತ್ತಾನೆ ಎ ಭರವಸೆ ಅವರಲ್ಲಿತ್ತು. ಆದರೆ ಮಹೇಶ ತನ್ನ ಪತ್ನಿ ಮತ್ತು ಇಬ್ಬರು ಗಂಡು ಮ ತೊರೆದು ಪದ್ಮಾವಾಸಂತಿಯೊಂದಿಗೆ ಪರ್ಮನೆಂಟಾಗಿ ಉಳಿದುಬಿಟ್ಟ. ಇದೇ ಕೊರ ಪ್ರಿಯದರ್ಶಿನಿಯ ತಂದೆ ಕೊನೆಯುಸಿರೆಳೆದರು. ತಂದೆಯ ಸಾವಿನ ದುಃಖ ಪ್ರಿಯದರ್ಶಿನಿಗೆ ಮಹೇಶ್ ಡಿವೋರ್ಸ್ ನೋಟಿಸು ಕಳಿಸಿ ಆಕೆಯನ್ನು ಮ ಘಾಸಿಗೊಳಿಸಿದ. ತನ್ನ ಮಕ್ಕಳಿಗೆ ಪದೇ ಪದೇ ಕರೆ ಮಾಡಿ 'ಪದ್ಮಾವಾಸಂತಿಯನ್ನು ಅ ಅನ್ನಬೇಕು' ಎಂದು ಪೀಡಿಸುತ್ತಿದ್ದ...

ಇದೆಲ್ಲದರ ನಡುವೆ ಮಹೇಶ 'ಮುಸ್ಸಂಜೆ ಮಾತು', 'ಇನಿಯ', 'ಏನೋ ಒಂ ಎಂಬ ಸಿನಿಮಾಗಳನ್ನು ನಿರ್ದೇಶಿಸಿದ. 'ಮುಸ್ಸಂಜೆ ಮಾತು' ಒಂದನ್ನು ಬಿಟ್ಟರೆ ಬ ಚಿತ್ರಗಳೂ ಹಿಟ್ ಆಗಲಿಲ್ಲ. ಸದ್ಯ ರಮೇಶ್ ಅರವಿಂದ್ ನಟಿಸುತ್ತಿರುವ 'ತುಂತುರು' ಚಿತ್ರವನ್ನು ಮಹೇಶ್ ನಿರ್ದೇಶಿಸುತ್ತಿದ್ದಾನೆ.

ಈಗ ತನ್ನ ಪತ್ನಿ ಪ್ರಿಯದರ್ಶಿನಿಯಿಂದ ವಿಚ್ಛೇದನವನ್ನೂ ಮಹೇಶ್ ಪಡೆದಿದ್ದಾನೆ. ಬಣ್ಣದ ಮಾಯೆಗೆ ಬಿದ್ದ ಗಂಡ ದೂರಾಗಿರುವ ಪ್ರಿಯದರ್ಶಿನಿ ತನ್ನಿಬ್ಬರು ಮಕ್ಕಳೊಂದಿಗೆ ಬೀದಿಗೆ ಬಿದ್ದಿದ್ದಾಳೆ.

ಇದು ಮಹೇಶನ ಸಾಧನೆಯಾ?

ಎನಿಮಿ ಪ್ರಿಯಾಂಕಾ

ಹೀರೋಯಿನ್‌ಗಳು ಮದುವೆಯಾಗುತ್ತಿದ್ದಂತೆ ಚಿತ್ರರಂಗದಿಂದ ರಿಟೈರ್‌ಮೆಂಟ್ ತೆಗೆದುಕೊಳ್ಳುವುದು ಅಥವಾ ಪೋಷಕ ಪಾತ್ರಗಳಿಗೆ ಫಿಕ್ಸ್ ಆಗುವುದು ಮಾಮೂಲಿ. ಆದರೆ ಪ್ರಿಯಾಂಕಾ ಉಪೇಂದ್ರ ಮಾತ್ರ ಇದರಲ್ಲಿ ಸ್ವಲ್ಪ ಭಿನ್ನ. ಮಿಥುನ್ ಚಕ್ರವರ್ತಿ ಮೊದಲ ಬಾರಿ ನಿರ್ಮಿಸುತ್ತಿರುವ 'ಎನಿಮಿ' ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ನಾಯಕಿ. ಈ ಚಿತ್ರದಲ್ಲಿ ಪ್ರಿಯಾಂಕಾ ನಾಯಕಿಯಾಗಲು ಉಪ್ಪಿಯೇ ಕಾರಣವಂತೆ. ಹೈದರಾಬಾದಿನ ರಾಮೋಜಿ ಫಿಲ್ಮ್ ಸಿಟಿಯಲ್ಲಿ 'ಕಠಾರಿವೀರ ಸುರಸುಂದರಾಂಗಿ' ಚಿತ್ರಕ್ಕಾಗಿ ಉಪೇಂದ್ರ ಅಲ್ಲೀಗ ಬೀಡು ಬಿಟ್ಟಿದ್ದಾರೆ. ಬಾಲಿವುಡ್‌ನ ಖ್ಯಾತ ನಟ ಮಿಥುನ್ ಚಕ್ರ ವರ್ತಿಯೂ ಇದೇ ಫಿಲ್ಮ್ ಸಿಟಿಯಲ್ಲಿ ಇರುವುದು ಉಪ್ಪಿಗೆ ಗೊತ್ತಾಗಿತ್ತಂತೆ. ಈ ವಿಚಾರವನ್ನು ಉಪ್ಪಿ ತನ್ನ ಪತ್ನಿ ಪ್ರಿಯಾಂಕಾಗೂ ಹೇಳಿದರಂತೆ. "ಈ ಹಿಂದೆ ನಾನು ಮತ್ತು ಮಿಥುನ್ ಬಾಲಿವುಡ್‌ನ ಚಿತ್ರವೊಂದರಲ್ಲಿ ಜತೆಯಾಗಿ ನಟಿಸಿದ್ದೆವು. ಅವರನ್ನು ಭೇಟಿ ಮಾಡಿ ಮಾತನಾಡಿಸೋಣ" ಎಂದು ಪ್ರಿಯಾಂಕಾ ಉಪ್ಪಿಯ ಬೆನ್ನು ಬಿದ್ದರಂತೆ. ಹೆಂಡತಿಯ ಒತ್ತಾಸೆಗೆ ಮಣಿದ ಉಪ್ಪಿ ಮಿಥುನ್‌ರನ್ನು ಭೇಟಿ ಮಾಡಿದರಂತೆ. ಈ ಸಂದರ್ಭದಲ್ಲಿ "ನನ್ನ ಚಿತ್ರದ ನಾಯಕ ಸುನಿಲ್ ಶೆಟ್ಟಿ ಪತ್ನಿಯ ಪಾತ್ರಕ್ಕೆ ನೀವು ಸೂಟ್ ಆಗುತ್ತೀರಿ, ನಟಿಸುವಿರಾ?" ಎಂದು ಮಿಥುನ್ ಚಕ್ರವರ್ತಿ ಪ್ರಿಯಾಂಕಾ ರನ್ನು ಕೇಳಿದರಂತೆ. ಸುನಿಲ್ ಶೆಟ್ಟಿ ಕೂಡಾ ಪ್ರಿಯಾಂಕಾಗೆ ಹಳೇ ಸ್ನೇಹಿತನಂತೆ. ಹೀಗಾಗಿ ಪ್ರಿಯಾಂಕಾ 'ಎನಿಮಿ' ಯಲ್ಲಿ ನಟಿಸಲು ಒಪ್ಪಿದರಂತೆ.



ಕಂಠ-ಮಾಲಾಶ್ರೀ

ಸುಮಾರು 23 ವರ್ಷಗಳನ್ನು ಕನ್ನಡ ಚಿತ್ರರಂಗದಲ್ಲಿ ಕಳೆದಿರುವ ಮಾಲಾಶ್ರೀ ಕೊನೆಗೂ ತಾವು ನಟಿಸಿದ ಪಾತ್ರಕ್ಕೆ ಸ್ವತಃ ತಾವೇ ಕಂಠದಾನ ನೀಡುವ ನಿರ್ಧಾರ ಮಾಡಿದ್ದಾರೆ. ಮಾಲಾಶ್ರೀ ನಾಯಕಿಯಾಗಿ ನಟಿಸಿರುವ 'ಶಕ್ತಿ' ಚಿತ್ರದ ತಮ್ಮ ಪಾತ್ರಕ್ಕೆ ಇತ್ತೀಚೆಗೆ ಕಷ್ಟಪಟ್ಟು ಕಂಠದಾನ ಮಾಡಿ ಈಗ ರಿಲ್ಯಾಕ್ಸ್ ಮಾಡುತ್ತಿದ್ದಾರೆ.

'ನಂಜುಂಡಿ ಕಲ್ಯಾಣ' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗದ ದಿಗಂತದಲ್ಲಿ ವಿಜೃಂಭಿಸಿದ ಈ ನಾಯಕಿಗೆ ಆರಂಭದಲ್ಲಿ ಕಂಠ ನೀಡಿದವರು ಸರ್ವಮಂಗಳ. ಆ ದಿನಗಳಲ್ಲಿ ಮಾಲಾಶ್ರೀ ಅವರ ನಟನೆ ಮತ್ತು ಸೌಂದರ್ಯದಷ್ಟೇ ಸರ್ವಮಂಗಳ ಅವರ ಮಧುರವಾದ ಧ್ವನಿ ಮಾಲಾಶ್ರೀಯ ವೃತ್ತಿಜೀವನದ ಯಶಸ್ಸಿಗೆ ಮುಖ್ಯ ಕಾರಣವಾಗಿತ್ತು. ಸರ್ವಮಂಗಳ ಅವರ ನಿಧನದ ನಂತರ ಮಾಲಾಶ್ರೀಯ ಪಾತ್ರಕ್ಕೆ ಬೇರೆಯವರು ಕಂಠದಾನ ಮಾಡಿದರೂ ಅದು ಅಷ್ಟೊಂದು ಆಕರ್ಷಣೀಯವಾಗಿರಲಿಲ್ಲ.



ಮೊನ್ನೆ ಆಕಾಶ್ ಡಬ್ಬಿಂಗ್ ಸ್ಟುಡಿಯೋದಲ್ಲಿ ತಮ್ಮ ಪಾತ್ರಕ್ಕೆ ಕಂಠದಾನ ಮಾಡಿದ ಮಾಲಾಶ್ರೀ ಕಷ್ಟದ ಸನ್ನಿವೇಶ ಬಂದಾಗಲೆಲ್ಲ ಆಕಾಶವನ್ನು ನೋಡುತ್ತಾ "ಪ್ಲೀಸ್ ಸರ್ವೂ, ಹೆಲ್ಪ್ ಮಿ" ಎಂದು ಬೇಡಿಕೊಳ್ಳುತ್ತಿದ್ದರು. ಅಂದರೆ ಈ ಚಿತ್ರದ ಡಬ್ಬಿಂಗ್ ಸಂದರ್ಭದಲ್ಲಿ ಈ ಹಿಂದೆ ತಮ್ಮ ಪಾತ್ರಕ್ಕೆ ಕಂಠದಾನ ನೀಡುತ್ತಿದ್ದ ಸರ್ವಮಂಗಳ ಅವರನ್ನು ಹೆಜ್ಜೆ ಹೆಜ್ಜೆಗೂ ನೆನಪಿಸಿಕೊಳ್ಳುತ್ತಾ ಒಂದು ರೀತಿಯಲ್ಲಿ ಆಕೆಗೆ ತನ್ನ ಶ್ರದ್ಧಾಂಜಲಿಯನ್ನೇ ಅರ್ಪಿಸಿದರು.

ಅದೇನೇ ಇರಲಿ, ನೆರೆಯ ಆಂಧ್ರದಿಂದ ಬಂದು ಕನ್ನಡದ ಸೊಸೆ ಎನಿಕೊಂಡಿರುವ ಮಾಲಾಶ್ರೀ ಈಗ ಅಚ್ಚಕನ್ನಡದಲ್ಲಿ ತಮ್ಮ ಪಾತ್ರಕ್ಕೆ ಜೀವ ತುಂಬುತ್ತಿರುವುದು ಸಂತೋಷದ ವಿಷಯ. ಆದರೆ ಇಂತಹ ಒಂದು ಸಣ್ಣ ಕೆಲಸಕ್ಕೆ ಆಕೆ ೨೨ ವರ್ಷಗಳ ಸುದೀರ್ಘ ಕಾಲಾವಕಾಶವನ್ನು ತೆಗೆದುಕೊಂಡದ್ದು ಮಾತ್ರ ದುಃಖದ ವಿಷಯ.

ರಾಧೆಯ ಬ್ರೇಕು!

ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಬ್ರೇಕಿಂಗ್ ನ್ಯೂಸ್' ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿರುವ ರಾಧಿಕಾ ಪಂಡಿತ್ ಅವರನ್ನು ಮೊನ್ನೆ ಪತ್ರಕರ್ತರು ಕಿಚಾಯಿಸುತ್ತ "ನಿಮ್ಮ ಬ್ರೇಕಿಂಗ್ ನ್ಯೂಸ್ ಏನು?" ಎಂದು ಕೇಳಿದರು. ಅದಕ್ಕೆ ಈ ಬೊಗಸೆ ಕಂಗಳ ಹುಡುಗಿ ನೀಡಿದ ಉತ್ತರ ಏನು ಗೊತ್ತೇ? "ನನ್ನ ನೆಚ್ಚಿನ ನಟ ಅನಂತ್ ನಾಗ್ ಜೊತೆ ನಟಿಸುವ ಅವಕಾಶಕ್ಕಾಗಿ ಎದುರು ನೋಡುತ್ತಿದ್ದೆ. ಆ ಕ್ಷಣ ಈಗ ನನ್ನ ಪಾಲಿಗೆ ಕೂಡಿ ಬಂದಿದೆ. ಇದಕ್ಕಿಂತ ದೊಡ್ಡ ಬ್ರೇಕಿಂಗ್ ನ್ಯೂಸ್ ನನ್ನ ವೃತ್ತಿ ಜೀವನದಲ್ಲಿ ಇನ್ನೊಂದಿಲ್ಲ ಎಂದೇ ಹೇಳಬೇಕು. ಅವರ ಜೊತೆ ನಟಿಸುವಾಗ ಅವರ ಅನುಭವ, ಅವರ ಮಾರ್ಗದರ್ಶನ ಕೇಳುವ ಹಂಬಲದಲ್ಲಿದ್ದೇನೆ" ಎಂದು ರಾಧಿಕಾ ಪಂಡಿತ್ ಭಾವುಕಳಾಗಿ ನುಡಿದಳು.



ಇತ್ತೀಚಿನ ದಿನಗಳಲ್ಲಿ ಯುವ ನಾಯಕಿಯರು ತಮ್ಮ ಜಮಾನದ ಸಮಕಾಲೀನ ನಟರೊಂದಿಗೆ ನಟಿಸುವುದೇ ತಮ್ಮ ಜೀವನದ ಮಹಾತ್ವಾಕಾಂಕ್ಷೆ ಎನ್ನುವಂತೆ ನುಡಿಯುತ್ತಿರುವುದು ಮಾಮೂಲಿ. ಹೀಗೆ ತಮ್ಮ ಸಮಕಾಲೀನ ನಾಯಕರನ್ನು ಹೊಗಳಿದರೆ ಅವರ ಮುಂದಿನ ಚಿತ್ರದಲ್ಲಿ ತನ್ನನ್ನೇ ನಾಯಕಿಯನ್ನಾಗಿ ಶಿಫಾರಸು ಮಾಡಬಹುದು ಎಂಬುದು ಈ ನಾಯಕಿಯರ ಒಂದು ಲೆಕ್ಕಾಚಾರವೂ ಆಗಿರುತ್ತದೆ. ಆದರೆ ರಾಧಿಕಾ ಪಂಡಿತ್ ಈ ವಿಷಯದಲ್ಲಿ ತಾನು ವಿಭಿನ್ನ ಎಂಬುದನ್ನು ತೋರಿಸಿದ್ದಾರೆ. ಅಂದಹಾಗೆ ರಾಧಿಕಾ ಮತ್ತು ಅನಂತ್ ನಾಗ್‌ರವರ ಸಮಾಗಮ ಆಗುತ್ತಿರುವುದು ಮಂದಾಕಿನಿ ಶ್ರೀನಿವಾಸ್ ನಿರ್ಮಾಣದ 'ಅಲೆಮಾರಿ' ಚಿತ್ರದಲ್ಲಿ.

ಸಂಶಯದ ಸುತ್ತ

ಇನ್ನೇನು ಕೆಲವೇ ದಿನಗಳಲ್ಲಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಚಲನಚಿತ್ರೋತ್ಸವ ಟೇಕ್ ಆಫ್ ಆಗಲಿದೆ. ಅದಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳು ಇನ್ನೂ ಪ ಗೊಂಡಿಲ್ಲ. ಈ ಬಾರಿ ಸರ್ಕಾರದಿಂದ ಅತ್ಯಂತ ಹೆ ಸಹಾಯವನ್ನು ಪಡೆದಿರುವುದರಿಂದ ವ್ಯವಸ್ಥಾ ಆರ್ಥಿಕವಾಗಿ ಯಾವುದೇ ಮುಗ್ಗಟ್ಟು ಇಲ್ಲದಿದ್ದರೂ ಮಾತ್ರ ಎಂದಿನಂತೆ ಆಮೆಗತಿಯಲ್ಲೇ ನಡೆಯುತ್ತಿದೆ.

ಅಷ್ಟೇ ಅಲ್ಲ, ಸಿನಿಮಾ ಅಕಾಡೆಮಿಯ ಅಧ್ ನಾಗಾಭರಣರವರು ಈ ಚಿತ್ರೋತ್ಸವಕ್ಕೆ ಸಂಬಂ ಕೆಲಸಗಳನ್ನು ಯೋಗ್ಯರಿಗೆ ನೀಡುವ ಬದಲು ತನ ಬಂದವರಿಗೆ ಮತ್ತು ತನ್ನ ಭಟ್ಟಂಗಿಗಳಿಗೆ ಹಂಚಿದ ಆರೋಪ ಎಲ್ಲೆಡೆ ಕೇಳಿಬರುತ್ತಿದೆ. ಉದಾಹರಣೆಗೆ ತ್ಸವಕ್ಕೆ ಸಂಬಂಧಪಟ್ಟ ಥೀಮ್ ಮ್ಯೂಸಿಕ್‌ಅನ್ನು ನಿ ಚಿತ್ರ ನಿರ್ದೇಶಕ ಲಿಂಗದೇವರು ಅವರಿಗೆ ಕಾ ನೀಡಲಾಗಿದೆಯಂತೆ. ಕನ್ನಡ ಚಿತ್ರರಂಗದಲ್ಲಿ ಅನೇ ದಿಗ್ಗಜ ಸಂಗೀತ ನಿರ್ದೇಶಕರಿದ್ದರೂ ಅವರನ್ನೆಲ್ಲ ಕ ಲಿಂಗದೇವರಿಗೆ ಈ ಜವಾಬ್ದಾರಿ ವಹಿಸಿದ್ದು ಸ ಕ್ಷೇತ್ರದವರಲ್ಲಿ ಬೇಸರವನ್ನು ಮೂಡಿಸಿದೆ.

ಅಂದಹಾಗೆ, ಲಿಂಗದೇವರಿಗೂ ಸಂಗೀತಕ್ಕೂ ಸಂಬಂಧವೂ ಇಲ್ಲ. ಈ ಲಿಂಗದೇವರು ಇಲ್ಲಿಯ ನಿರ್ದೇಶಿಸಿರುವುದು ಕೇವಲ ಒಂದೇ ಒಂದು ಸಿನಿ ಸಿನಿಮಾದಲ್ಲಿ ಹಾಡುಗಳಿಗೆ ಪ್ರಾಮುಖ್ಯತೆಯೇ ಎಂಬುದು ಬೇರೇ ವಿಷಯ. ಹಂಸಲೇಖ, ಗುರು ಹರಿಕೃಷ್ಣ, ಕಲ್ಯಾಣ್, ಸಾಧುಕೋಕಿಲ, ರಾಜೇಶ್ ನಾಥನ್, ವಿ. ಮನೋಹರ್.... ಇವರೆಲ್ಲರಿಗಿಂತಲೂ ಅಂತರಾಷ್ಟ್ರೀಯ ಚಿತ್ರೋತ್ಸವಕ್ಕೆ ಥೀಮ್ ಮ ಮಾಡಲು ಲಿಂಗದೇವರು ಅವರನ್ನು ಆರಿಸಿದ್ದು ಹಲವಾರು ಸಂಶಯಗಳಿಗೆ ಕಾರಣವಾಗಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604535, E-mail :lankesh70@rediffmail.com